PEER - REVIEWED JOURNAL
ISSN: 2320-9941

ಸಂಪುಟ - 9, ಸಂಚಿಕೆ - 2

VOLUME: 09, ISSUE: 02

# ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

# PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

Photo credit: thebookerprizes.com

ಕನ್ನಡದ ಲೇಖಕಿ ಎಸ್.ಕೆ. ಬಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳು(೧೨ ಕತೆಗಳು) ಕೃತಿಯನ್ನು ದೀಪಾ ಭಸ್ತಿ ಅವರು Heart Lamp ಎಂದು ಅನುವಾದಿಸಿದ ಕೃತಿಗೆ ೨೦೨೫ರ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ದೊರೆತಿದೆ.



HTTPS://PRATHISPANDHA.WORDPRESS.COM/

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

# ಪ್ರತಿಸ್ಪಂದ

**ಕೊಡು–ಕೊಳ್ಳುವಿಕೆಯ ಸಂಕರ**

# PRATHISPANDA

An Exchange of creative Impulse

**ಭಾಗ – 02**

**ಸಂಪುಟ: 09, ಸಂಚಿಕೆ 02, ಜೂನ್ 2025**

VOLUME: 09, ISSUE: 02, JUNE 2025

**ಗೌರವ ಸಂಪಾದಕರು**

ಕೆ. ಆರ್. ಬಸವರಾಜು

**ಸಂಪಾದಕರು**

ಡಾ. ಸರಸ್ವತಿ ಕೆ. ಬಿ.

**ಪ್ರಕಟಣೆ :**

**ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ**

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispandha@gmail.com

wibsite : https://prathispandha.wordpress.com/

## ತಜ್ಞ ಪರಿಶೀಲನ ಸಮಿತಿ
## PEER REVIEW COMMITTEE

**ಡಾ. ಸರಸ್ವತಿ ಕೆ. ಬಿ.**
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
Govt. First Grade College, Tipatur
Tumkur District, Karnataka

**ಡಾ. ದತ್ತಾತ್ರೆಯ ಎಂ**
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ ಜಿಲ್ಲೆ, ಕರ್ನಾಟಕ

Dr. Dattatreya M.
Associate Professor, English Department
Kuvempu University, Jnanasahyadri,
Shankaraghatta
Shivamogga Dist, Karnataka

**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

**ಡಾ. ಜ್ಯೋತಿ ಕೆ. ಬಿ.**
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

**ಡಾ. ಗೋವಿಂದರಾಯ ಎಂ.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

**ಅನಿತ ಕೆ. ವಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

**ಡಾ. ರವಿಶಂಕರ್ ಎ. ಕೆ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti College Autonomous, K. Narayanapura
Bengaluru, Karnataka

**ಸಿದ್ಧರಾಮಯ್ಯ ಡಿ. ಎಂ**
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

**ಶ್ರೀ. ರಾಮು ಟಿ. ಡಿ.**
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
**ಪೃಥ್ವಿ ಸೂರಿ**
ಲೇಖಕರು ಹಾಗೂ ವಕೀಲರು

**ಅಭಿನಂದನೆಗಳು**

ಪೃಥ್ವಿ ಸೂರಿಯವರು ಇದುವರೆಗೂ ನಮ್ಮ ಪತ್ರಿಕೆಯನ್ನು ತಾಂತ್ರಿಕವಾಗಿ ನಿರ್ವಹಿಸಿದವರು. ಇವರಿಗೆ ಪತ್ರಿಕೆಯ ಕಡೆಯಿಂದ ಧನ್ಯವಾದಗಳನ್ನು ಸಲ್ಲಿಸುತ್ತಾ, ಈ ಪತ್ರಿಕೆಯಲ್ಲಿ ಕಾನೂನು ಸಲಹೆಗಾರರಾಗಿ ಮುಂದುವರೆಯುತ್ತಾರೆಂದು ತಿಳಿಸುತ್ತಾ ಶ್ರೀಯುತರಿಗೆ ಗೌರವ ಪೂರ್ವಕ ಅಭಿನಂದನೆಗಳನ್ನು ಪತ್ರಿಕೆಯ ವತಿಯಿಂದ ಸಲ್ಲಿಸಲಾಗುತ್ತಿದೆ.

## ಸಂಪಾದಕೀಯ...

ಮಾನವ ಜೀವ ಸದಾ ತನ್ನನ್ನು ತಾನು ಅಮರವಾಗಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತದೆ. ಆದಿ ಮಾನವರು ತಾವು ಬಾಳಿದ ಬದುಕಿದ ಚಿತ್ರಣಗಳನ್ನು ಬೆಟ್ಟ, ಗುಹೆ, ಗುಡ್ಡಗಳ ಮೇಲೆ ದಾಖಲಿಸಿರುತ್ತಾರೆ.

ಕಾಗದದ ಮೇಲೆ ಅಕ್ಷರಗಳನ್ನು ಮೂಡಿಸುವುದು ನಂತರದ ಪ್ರಯತ್ನ. ನೆನೆಪುಗಳು ಕಲಾ ಸ್ಪಂದನದ ಮೂಲಾಧಾರ. ಕವಿಗಳು ಕತೆಗಾರರು ನೆನಪುಗಳನ್ನು ದಾಖಲಿಸಲು ಸೃಜನಶೀಲ ಮಾರ್ಗಗಳನ್ನು ಅನ್ವೇಷಿಸುತ್ತಲೇ ಇರುತ್ತಾರೆ. ಶೇಕ್ಸ್‌ಪಿಯರ್ ತನ್ನ ಪ್ರಿಯತಮೆಯ ಸೌಂದರ್ಯವನ್ನಾಗಲೀ, ಗೆಳೆಯನ ಸ್ನೇಹವನ್ನಾಗಲೀ ಅಮರವಾಗಿಸಲು ಕಾವ್ಯದ ಆಸರೆ ಪಡೆಯುತ್ತಾನೆ.

ಸಾವನ್ನು ನಿರಾಕರಿಸುವ ಮತ್ತು ಅದನ್ನು ಗೆಲ್ಲುವ ಪ್ರಯತ್ನವಾಗಿ ಬಾಳ್ವೆಯ ನೆನಪುಗಳು, ಚಿತ್ರಗಳು, ಅಕ್ಷರಗಳೆಂಬ ಸಾಂಸ್ಕೃತಿಕ ಚಹರೆಗಳಾಗಿ ಜನಸಮೂಹದ ಪಟಲದಲ್ಲಿ ಅಚ್ಚಾಗುತ್ತವೆ. ಅಕ್ಷರದ ಮೂಲಕ ಪ್ರಸಾರವಾಗುವ ಈ ನೆನಪಿನ ಬೀಜಗಳು ನಮ್ಮ ನಾಳೆಗಳನ್ನು ರೂಪಿಸುತ್ತವೆ. ಸಮಾಜದ ಲೋಪದೋಷಗಳನ್ನು ಸ್ಥಿತ್ಯಂತರಗೊಳಿಸುತ್ತವೆ.

ಬಾನು ಮುಷ್ತಾಕ್ ಅವರ ಹಸೀನ ಮತ್ತು ಇತರ ಕತೆಗಳು ಸಂಕಲನವು Heart lamp ಎಂಬ ಹೆಸರಿನಲ್ಲಿ ದೀಪಾ ಭಾಸ್ತಿ ಅವರಿಂದ ಇಂಗ್ಲಿಷ್ ಗೆ ಅನುವಾದಗೊಂಡಿದೆ. ಈ ಕೃತಿಯು ದಾಖಲು ಮಾಡುತ್ತಿರುವ ನೆನಪುಗಳು ಕ್ರಾಂತಿಕಾರಿಯಾಗಿವೆ. ಹಿಜಾಬ್ ಪ್ರಕರಣದಲ್ಲಿ ಸಮೂಹದ ಮನೋಭಿತ್ತಿಯಲ್ಲಿ ದಾಖಲಾದ ಮುಸ್ಲಿಂ ಹುಡುಗಿಯ ನೆನಪು ಆಶಾದಾಯಕವಾಗಿರಲಿಲ್ಲ. ವಸ್ತ್ರಸಂಹಿತೆಯ ಧಾರ್ಮಿಕ ಒತ್ತಡವನ್ನು ನಿಭಾಯಿಸಲಾಗದೆ, ಶಿಕ್ಷಣವನ್ನು ತೊರೆಯುವ, ಪ್ರಜೆಯಾಗಿ ಸಾಮಾಜಿಕ ಜವಾಬ್ದಾರಿಯನ್ನು ಹೊರಲು ಅಶಕ್ತಳೆಂಬಂತೆ ಬಿಂಬಿತವಾದ ಮುಸ್ಲಿಂ ಮಹಿಳೆಯ ನೆನಪು ಕ್ರಮೇಣ ಸಮಾಜಕ್ಕೆ ಕಂಟಕವಾಗಬಹುದಿತ್ತು. ಆದರೆ, ಬಾನು ಮುಷ್ತಾಕ್ ಅವರ Heart lamp ಕೃತಿಗೆ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಮನ್ನಣೆ ದೊರೆತಿರುವ ಹಿನ್ನೆಲೆಯು ಇಂತಹ ನಕಾರಾತ್ಮಕಗಳನ್ನು ಅಳಿಸುವಲ್ಲಿ ಯಶಸ್ವಿಯಾಗಿದೆ.

ಸಾಮೂಹಿಕ ಮಾಧ್ಯಮಗಳಲ್ಲಿ ಬುರ್ಖಾದ ಮುಚ್ಚಳವಿಲ್ಲದೆ, ಸಹಜವಾಗಿ ನಗುನಗುತ್ತಾ ಮಾತಾಡುವ ಬಾನು ಮುಷ್ತಾಕ್, ಇಂಗ್ಲಿಷ್ ಭಾಷೆಯ ನೆಲಗಳಲ್ಲಿ ಕನ್ನಡದ ಸಾಂಸ್ಕೃತಿಕ ಚಹರೆಗಳನ್ನು ಬಿತ್ತುತ್ತಾ ಸಾಗುತ್ತಿರುವ 'ಹಸೀನ ಮತ್ತು ಇತರ ಕತೆಗಳು' ಮುಸ್ಲಿಂ ಮಹಿಳೆಯ Socio - political narrative ಅನ್ನು ಬದಲಾಯಿಸುವಷ್ಟು ಶಕ್ತವಾಗಿದೆ.

ಸಣ್ಣ ಸಣ್ಣ ಮುಸ್ಲಿಂ ಹೆಣ್ಣು ಮಕ್ಕಳಿಗೆ ಬಾನು ಮುಷ್ತಾಕ್ ಒಂದು ಸಜೀವ, ಚೇತೋಹಾರಿ ಸಕಾರಾತ್ಮಕ ಮಾದರಿಯಾಗಿದ್ದಾರೆ. ಈ ಪುಸ್ತಕದ ಕತೆಗಳ ಓದು, ವ್ಯಾಖ್ಯಾನ ಮತ್ತು ಚರ್ಚೆಗಳು ನೆಲಹಂತದಲ್ಲಿ ಸಮುದಾಯಗಳೊಂದಿಗೆ ವಿಸ್ತರಿಸುವಂತಾದರೆ ಬೀಜ ಬಿತ್ತನೆಯ ಕಾರ್ಯ ಆರಂಭವಾದಂತೆ..

ಈ ಸಂಚಿಕೆಯು ಕನ್ನಡ ಸಾಹಿತ್ಯದಲ್ಲಿ ಭಾವಗೀತೆಯಿಂದ ಬುದ್ಧಚರಿತದವರೆಗೂ ಅಪಾರ ಸಾಹಿತ್ಯ ಸೇವೆ ಸಲ್ಲಿಸಿ, ಮರೆಯಾದ ಎಚ್. ಎಸ್ ವೆಂಕಟೇಶಮೂರ್ತಿ ಅವರನ್ನು ನೆನೆಯುತ್ತದೆ. ತನ್ನ ಕೃತಜ್ಞ ಶಕ್ತಿಯ ಬಲದಿಂದ ಸಾಮಾನ್ಯರ ಅಂತರಂಗವನ್ನು ಸಶಕ್ತಗೊಳಿಸುವ ಸಾಹಿತಿಯ ಸಾಮಾಜಿಕ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಲು ಇವರು ತೋರಿದ ಅಸ್ಥೆಯು ಅನನ್ಯ. ಸಹೃದಯನೊಬ್ಬ ತನ್ನೊಂದಿಗೆ ತಾನೇ ಆತ್ಮೀಯವಾಗಿ ಸಂವಾದಿಯಾಗುವಂತೆ ಮಾಡಬಲ್ಲ ಶಕ್ತಿ ಅವರ ಸಾಹಿತ್ಯಕ್ಕೆ ಇತ್ತು. ಸಿನೆಮಾ ಮತ್ತು ದೂರದರ್ಶನದಂತಹ ಜನಪ್ರಿಯ ಮತ್ತು ಶಕ್ತಿಶಾಲಿ ಮಾಧ್ಯಮಗಳ ಮೂಲಕ ಒತ್ತಡ ಜೀವನದ ಏಕತಾನತೆಯನ್ನು ಮೀರಲು ಬೇಕಾದ ಮೌನ ಮನಸ್ಥಿತಿಯನ್ನು ಸಾಮಾನ್ಯರಿಗೆ ಪರಿಚಯಿಸಿದ ಎಚ್.ಎಸ್.ವಿ ಅವರನ್ನು ಪ್ರತಿಸ್ಪಂದ ಪತ್ರಿಕೆಯು ಅಂತರಂಗದಿಂದ ನೆನೆಯುತ್ತದೆ.

**ಡಾ. ಸರಸ್ವತಿ ಕೆ. ಬಿ**
**ಸಂಪಾದಕರು**

ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.

**ISSN :** 2320-9941
**Linking ISSN (ISSN-L):** 2320-9941
**Key-title:** Prathispandha
**Title proper:** Prathispandha.
**Country:** India
**Medium:** Print
**Last modification date:** 01/09/2014
**Type of record:** Confirmed
**ISSN Center responsible of the record:** ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

# ಪರಿವಿಡಿ


**1. ನಮ್ಮ ಕಾಲದ ವಿಶಿಷ್ಟ ಮಹಾಕಾವ್ಯ: 'ಬುದ್ಧಚರಣ'**
~ ಡಾ. ಎಚ್.ಎಸ್. ಸತ್ಯನಾರಾಯಣ **1–8**

**2. ಕನ್ನಡ ಭಾಷೆ ಹಾಗೂ ಕೃತಕ ಬುದ್ಧಿಮತ್ತೆ** (AI)
~ ಡಾ. ಸಂತೋಷ್ ಕುಮಾರ್ ಆರ್. ಎಂ. **9–23**

**3. ಕನ್ನಡ ಸಾಹಿತ್ಯದ ಕಾವ್ಯ ಪರಂಪರೆ ನಡೆದು ಬಂದ ದಾರಿ ಅದರ ಗತಿಬಿಂಬ**
~ ಮನೋಜ್ ಎಂ. ~ ಡಾ. ರಾಜೇಶ್ ಬೆಜ್ಜಂಗಳ **24–35**

4. **ಕ್ಲಿಪ್ ಜಾಯಿಂಟ್ ಕಥೆಯಲ್ಲಿ ಎರಡು ಸಂಸ್ಕೃತಿಗಳ ಮೌಲ್ಯ ಶೋಧನೆ**
~ ಡಾ. ಮಹಾಂತೇಶ್ ದುರಗಣ್ಣವರ **36–45**

5. **ಜಾನಪದ ಸಾಹಿತ್ಯದಲ್ಲಿ ಹೆಣ್ಣು ಮತ್ತು ತಾಯ್ತನದ ಹಂಬಲ**
~ ಪ್ರೊ. ರೇಣುಕಮ್ಮ .ಜೆ **46–53**

6. **ಮಹಿಳಾ ಮೀಸಲಾತಿ ಒಂದು ಸಂಕ್ಷಿಪ್ತ ಅವಲೋಕನ**
~ ಅಂಜಿನಪ್ಪ ಎಲ್. ಟಿ **54–62**

7. **ಅಮುಗೆ ರಾಯಮ್ಮ : ನಿಷ್ಕುರ ನಿಲುವಿನ ದಿಟ್ಟ ಶರಣೆ**
~ ಡಾ. ಪಿ. ನಾಗರಾಜ **63–76**

8. **ಕವಿತಾ ರೈ ರವರ 'ಒಲೆ' ಕವನ – ಸ್ತ್ರೀಪರ ನೋಟ**
~ ನಾಗೇಂದ್ರ ಪ್ರಸಾದ್ ಎ.ಎಂ. **77–84**

9. **ಜನಪದ ಮತ್ತು ವಚನ ಸಾಹಿತ್ಯ ತೌಲನಿಕ ವಿವೇಚನೆ**
~ ಡಾ. ಹೆಚ್.ಎಂ. ಮಲ್ಲಿಕಾರ್ಜುನ **85–95**

10. **ಕುವೆಂಪು ಅವರ ನಾಟಕಗಳು, ಪರಂಪರೆ – ಆಧುನಿಕತೆ : ಅನುಸಂಧಾನ**
~ ಡಾ. ಮೀನಾಕ್ಷಿ **96–104**

11. **ಪ್ರತಿಸ್ಪಂದ ಕೃತಿ ಓದು– ಸ್ತ್ರೀ ಅಸ್ಮಿತೆ : ವಿಭಿನ್ನ ನೆಲೆಗಳು– ಡಾ. ಚೇತನಾ ಹೆಗಡೆ**
~ ಡಾ. ರವಿಶಂಕರ್ ಎ.ಕೆ 105-106

# ವಿಶೇಷ ಲೇಖನ
# ನಮ್ಮ ಕಾಲದ ವಿಶಿಷ್ಟ ಮಹಾಕಾವ್ಯ: 'ಬುದ್ಧಚರಣ'

¤ ಡಾ. ಎಚ್.ಎಸ್. ಸತ್ಯನಾರಾಯಣ

ಇಪ್ಪತ್ತನೆಯ ಶತಮಾನದಲ್ಲಿ ಭಾರತೀಯ ಕಾವ್ಯ ಕಾಣಿಸಿದ ವೈಚಾರಿಕತೆಯ ಉತ್ಕರ್ಷ ಸ್ಥಿತಿಯನ್ನು ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಮೂಲಕ ಅರಿಯಬಹುದೆಂಬ ಮಾತೊಂದನ್ನು ನಮ್ಮ ಜಿ.ಎಸ್. ಶಿವರುದ್ರಪ್ಪನವರು ಬರೆದಿದ್ದರು. ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳಲ್ಲೇ ಮಹತ್ವದ್ದೆನ್ನಿಸುವ ಈ ಮಹಾಕಾವ್ಯ ಪ್ರಕಟಗೊಂಡ ಮೇಲೆ ಅನೇಕ ಮಹಾಕಾವ್ಯಗಳು ಕನ್ನಡದಲ್ಲಿ ಬಂದಿವೆ. ಮಾಸ್ತಿಯವರ 'ಶ್ರೀರಾಮ ಪಟ್ಟಾಭಿಷೇಕ', ವಿ.ಕೃ.ಗೋಕಾಕರ 'ಭಾರತ ಸಿಂಧು ರಶ್ಮಿ', ಸಂ.ಶಿ. ಭೂಸನೂರಮಠರ 'ಭವ್ಯಮಾನವ', ಜಯದೇವಿತಾಯಿ ಲಿಗಾಡೆಯವರ 'ಸಿದ್ಧರಾಮ ಪುರಾಣ' ಪುತಿನ ಅವರ 'ಶ್ರೀಹರಿಚರಿತೆ', ಸುಜನಾ ಅವರ 'ಯುಗಸಂಧ್ಯಾ' ಕಂಬಾರರ 'ಚಕೋರಿ' ಮುಂತಾದವುಗಳ ಜೊತೆಗೆ ಚೆನ್ನಣ್ಣ ವಾಲೀಕಾರರ 'ವ್ಯೋಮಾವ್ಯೋಮ'ದವರೆಗೆ ಅನೇಕ ಮಹಾಕಾವ್ಯಗಳು ಪ್ರಕಟಗೊಂಡವು. ಶ್ರೀಮತಿ ಲತಾ ರಾಜಶೇಖರ ಅವರು ಬುದ್ಧ, ಬಸವ, ಯೇಸು, ಮಹಾವೀರ, ರಾಮರನ್ನು ಕುರಿತು ಪಂಚ ಮಹಾಕಾವ್ಯಗಳನ್ನು ಪ್ರಕಟಿಸಿ ಜಗತ್ತಿನಲ್ಲೇ ಅತಿ ಹೆಚ್ಚು ಮಹಾಕಾವ್ಯಗಳನ್ನು ರಚಿಸಿದ ಕೀರ್ತಿಗೆ ಪಾತ್ರರಾದರು. ವೀರಪ್ಪ ಮೋಯ್ಲಿಯವರ 'ಶ್ರೀರಾಮಾಯಣ ಮಹಾನ್ವೇಷಣಂ'ಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿ ದೊರೆಯಿತು. ಇತ್ತೀಚೆಗೆ ಇವರ 'ಬಾಹುಬಲಿ ಅಹಿಂಸಾ ದಿಗ್ವಿಜಯಂ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆಯಿತು. ಹೊಸ ತಲೆಮಾರಿನ ಯುವಕವಿ ಎಚ್. ಲಕ್ಷ್ಮೀನಾರಾಯಣಸ್ವಾಮಿಯವರ 'ತೊಗಲಚೀಲದ ಕರ್ಣ' ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ದೊರೆತಿದ್ದನ್ನು ಇಲ್ಲಿ ಮರೆಯುವಂತಿಲ್ಲ. ಇಲ್ಲಿ ನಾನು ಉಲ್ಲೇಖಿಸಲು ಮರೆತ ಕೃತಿಗಳೂ ಇರಬಹುದು. ಇದೀಗ ನಮ್ಮ

ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿಯವರ 'ಬುದ್ಧಚರಣ' ಎಂಬ ಮಹಾಕಾವ್ಯವನ್ನು ನಮಗೆ ಕೊಡುವ ಮೂಲಕ ಮಹಾಕಾವ್ಯ ಪರಂಪರೆಯನ್ನು ಸಮರ್ಥವಾಗಿ ಮುನ್ನಡೆಸಿರುವುದು ಅಭಿನಂದನೀಯ ಸಂಗತಿ. ಬೇರಾವ ಭಾಷೆಗಳಲ್ಲೂ ಈ ಪ್ರಮಾಣದ ಮಹಾಕಾವ್ಯಗಳು ಪ್ರಕಟಗೊಂಡಿಲ್ಲ ಕನ್ನಡದ ಪುಣ್ಯ ವಿಶೇಷ, ಈ ಭಾಷೆಯ ಮಹಾಕಾವ್ಯಗಳು ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ ಮುಂಚೂಣಿಯಲ್ಲಿವೆ. ನಮ್ಮ ಕವಿಗಳ ಮೇಲೆ ಸರಸ್ವತಿಯ ಕೃಪೆ ಚೆನ್ನಾಗಿಯೇ ಇದೆ.

ಕನ್ನಡ ಕಾವ್ಯ ಪರಂಪರೆಯ ಸಮರ್ಥ ಪ್ರತಿನಿಧಿಗಳಲ್ಲೊಬ್ಬರೆಂದು ಎಚ್ಚೆಸ್ವಿಯವರನ್ನು ನಮ್ಮ ವಿಮರ್ಶಕರನೇಕರು ಗುರುತಿಸಿದ್ದಾರೆ. ಇವರ ಇದುವರೆಗಿನ ಕಾವ್ಯ ಸಾಧನೆಯ ಸಿದ್ಧಿಯ ರೂಪದಲ್ಲಿ 'ಬುದ್ಧಚರಣ' ಮಹಾಕಾವ್ಯವಿದೆ. ಬುದ್ಧನ ಸಾಧನೆಯ ಹೆಜ್ಜೆಗಳನ್ನು ಎಚ್ಚೆಸ್ವಿಯವರು 'ಬುದ್ಧಚರಣ' ಕಾವ್ಯವಾಗಿಸಿರುವುದನ್ನು ಮೆಚ್ಚಿ ನಮ್ಮ ವಿಮರ್ಶಕರು ಮತ್ತು ವಿದ್ವಜ್ಜನರಿಂದ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಲಿದೆ. ಎರಡು ವರ್ಷಗಳೊಳಗೆ ನಾಲ್ಕನೆಯ ಮುದ್ರಣವನ್ನು ಕಾಣುತ್ತಿರುವುದು ಮತ್ತು 'ಬುದ್ಧಚರಣ ಸ್ಪಂದನ' ಎಂಬ ಪ್ರತಿಕ್ರಿಯೆಗಳ ಸಂಪಾದಿತ ಕೃತಿಯೊಂದು ಪ್ರಕಟವಾಗಿರುವುದು – ಈ ಎರಡೂ ಸಂಗತಿಗಳಿಂದಲೂ ಕೃತಿಯ ಮಹತ್ವವನ್ನು ಮನಗಾಣಬಹುದು. ಬಹುಶಃ ಮಹಾಕಾವ್ಯವೊಂದಕ್ಕೆ ಇಷ್ಟು ಬೇಗ ಪುನರ್ ಮುದ್ರಣದ ಭಾಗ್ಯ ದೊರೆತಿರುವುದೂ ಕೂಡ ಇದೇ ಮೊದಲಿರಬಹುದು.

ಬುದ್ಧನನ್ನು ಕುರಿತು ಬಗೆಬಗೆಯ ಅನೇಕ ಸಾಹಿತ್ಯ ಕೃತಿಗಳನ್ನು ನಾವು ಓದಿ ಬೆಳೆದಿದ್ದೇವೆ. ಎಂ. ಗೋವಿಂದ ಪೈ ಅವರ 'ವೈಶಾಖಿ' ಎಂಬ ಖಂಡ ಕಾವ್ಯದ ಮೂಲಕ ಬುದ್ಧಗುರು ಕನ್ನಡ ಕಾವ್ಯ ಪ್ರಪಂಚಕ್ಕೆ ಕಾಲಿಟ್ಟ ಗಳಿಗೆ ಕೂಡ ಶುಭಗಳಿಗೆ

ಇರಬೇಕು. ಮಾಸ್ತಿಯವರು 'ಸಾರಿಪುತ್ರನ ಕಡೆಯ ದಿನಗಳು' ಎಂಬ ಸಣ್ಣಕತೆಯನ್ನೂ 'ಯಶೋಧರಾ' ಎಂಬ ನಾಟಕವನ್ನೂ ಬರೆದರು. ಶಿವರಾಮ ಕಾರಂತರ 'ಕಿಸಾಗೋತಮಿ' ಎಂಬ ಹಾಡು ನಾಟಕ, ಕುವೆಂಪು ಅವರ 'ಮಹಾರಾತ್ರಿ' ನಾಟಕ, ಪ್ರಭುಶಂಕರ ಅವರ 'ಪ್ರೇಮಭಿಕ್ಷು', ಎಲ್. ಬಸವರಾಜು ಅವರ 'ಬುದ್ಧಚರಿತೆ'ಗಳನ್ನೆಲ್ಲ ನಾವು ಓದಿ ಸುಖಿಸಿದ್ದೇವೆ. ಇವುಗಳ ಜೊತೆಗೆ ನಮ್ಮ ಕವಿಗಳು ಬುದ್ಧನನ್ನು ಕುರಿತು ಬರೆದಿರುವ ಬಿಡಿ ಬಿಡಿ ಕವಿತೆಗಳ ಪಟ್ಟಿಯೂ ಜೊತೆಗಿದೆ. ಲಂಕೇಶರ 'ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ' ಎಂಬ ಲೇಖನವನ್ನು ಮರೆಯುವುದುಂಟೆ?

ಚಿಕ್ಕಮಗಳೂರಿನ ಕಾಶಿ ವಿಶ್ವನಾಥಶೆಟ್ಟರು 'ಬುದ್ಧಚರಿತ ಮಹಾಮಧು' ಎಂಬ ಮಹಾಕಾವ್ಯವನ್ನು ಬರೆದಿದ್ದಾರೆ. ಈ ಮೂಲಕ ಮಹಾಕಾವ್ಯಕ್ಕೆ ಬುದ್ಧನ ಮೊದಲ ಪದಾರ್ಪಣೆಯಾಯಿತು. ಆನಂತರ ಶ್ರೀಮತಿ ಲತಾ ರಾಜಶೇಖರರ 'ಬುದ್ಧ ಮಹಾದರ್ಶನ'ದ ಸರದಿ. ಬುದ್ಧನ ಬಗೆಗೆ ಇರುವ ಹಲವು ಇಂಗ್ಲಿಷ್ ಕೃತಿಗಳ ಓದು – ಈ ಎಲ್ಲವನ್ನೂ ಎಚ್ಚೆತ್ತಿಯವರು ಅಧ್ಯಯನ ಮಾಡಿರುವುದರ ಜೊತೆಗೆ ಅವರು ನಡೆಸಿದ ಬೌದ್ಧಯಾತ್ರೆಯ ಫಲಶೃತಿಯೂ ಇಲ್ಲಿದೆ. ಭಾರತ ಮತ್ತು ನೇಪಾಳ ದೇಶಗಳುದ್ದಕ್ಕೂ ಬುದ್ಧನ ಜೀವನದ ಮುಖ್ಯ ಘಟನೆಗಳು ಜರುಗಿದಲ್ಲೆಲ್ಲಾ ಎಚ್ಚೆತ್ತಿಯವರು ಓಡಾಡಿ ಬಂದಿದ್ದಾರೆ. ಈ ಯಾತ್ರೆಯು ಬುದ್ಧನನ್ನು ಮುಟ್ಟಲು, ಕಾವ್ಯದಲ್ಲಿ ಹಿಡಿದಿಡಲು ಬೇಕಾದ ಭಾಷಾಕಲ್ಪ ಮತ್ತು ಲಯ ಪ್ರತೀತಿಗಳನ್ನು ಪ್ರಾಪ್ತವಾಗಿಸಿವೆ. ಸುಮಾರು ಕಾಲುಶತಮಾನದ ಕಾಲ ಬುದ್ಧ ಕವಿಯ ಮನಸ್ಸನ್ನು ಆವರಿಸಿಕೊಂಡಿದ್ದ. ಕೊರೊನಾ ಕಾಲದ ಏಕಾಂತದಲ್ಲಿ ಆಕ್ರಮಿಸಿಕೊಂಡು 'ಬುದ್ಧಚರಣ'ದ ಮೂಲಕ ನಮ್ಮ ಮುಂದೆ ಬಂದಿದ್ದಾನೆ.

ಈ ಮಹಾಕಾವ್ಯದ ಆರಂಭದಲ್ಲಿಯೇ ಕವಿ **"ಇದ್ದಕ್ಕಿದ್ದಂತಾದವನೇ ಬುದ್ಧ?"** ಎಂಬ ಪ್ರಶ್ನೆಯೊಂದನ್ನು ಎತ್ತಿದ್ದಾರೆ ಮತ್ತು ಅದಕ್ಕೆ ಉತ್ತರವನ್ನೂ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಕವಿ ಎತ್ತುವ ಈ ಪ್ರಶ್ನೆಯು ಮಹಾಕಾವ್ಯ ರಚನೆಯ 'ಔಚಿತ್ಯ'ವನ್ನೂ 'ಅಗತ್ಯ'ವನ್ನೂ ಒಟ್ಟಿಗೇ ಎದುರಿಸಿದೆ. ಮೊದಲಿಗೆ ಔಚಿತ್ಯದ ಪ್ರಶ್ನೆಯನ್ನು ಗಮನಿಸಿ ಮುಂದುವರಿಯುವ:

ಕಾವ್ಯದ ಆರಂಭದಲ್ಲಿ ಬುದ್ಧ ಇದ್ದಕ್ಕಿದ್ದಂತೆ ಆದವನಲ್ಲ ಎಂಬುದನ್ನು ನಿರೂಪಿಸಲು, ಸಿದ್ಧಾರ್ಥನೆಂಬ ರಾಜಕುಮಾರ ಬೋಧಿಸತ್ವನಾಗಲು ಮಾಡಿದ ಸಿದ್ಧತೆಗಳನ್ನು 'ಪಾರಮಿ' ಅಥವಾ 'ಭವಾವಳಿ'ಗಳ ಕಥನವನ್ನು ಕವಿ ಸೃಷ್ಟಿಸಿದ್ದಾರೆ. ಅತ್ಯಂತ ಸಂಕ್ಷಿಪ್ತವೂ, ಸಂಗ್ರಾಹ್ಯವೂ ಆದ ಈ ಹತ್ತು ಪಾರಮಿಗಳು ಫ್ಲಾಶ್ಬ್ಯಾಕ್ ತಂತ್ರದಂತೆ ಬಳಕೆಗೊಂಡಿರುವುದು ಗಮನಾರ್ಹ. ಬುದ್ಧಚರಣದ ಕತೆಗೆ ಪಾರಮಿಗಳ

ವ್ಯಾಪ್ತಿ ತೊಡಕಾಗದಂತೆ ಕವಿ ಜಾಣ್ಮೆ ಮೆರೆದಿರುವುದೂ ಕೂಡ ಕವಿಯ ಔಚಿತ್ಯಪ್ರಜ್ಞೆಗೆ ಪೂರಕವಾಗಿದೆ. ಬುದ್ಧಗುರುವು ಆತ್ಮವನ್ನು ನಿರಾಕರಿಸಿದವನು. ಹಾಗಾಗಿ ಜನ್ಮಾಂತರಗಳನ್ನು ಪಡೆಯುವುದು ವ್ಯಕ್ತಿಯ ಚಾರಿತ್ರ್ಯವೇ ಹೊರತು ಆತ್ಮವಲ್ಲ ಎಂಬುದನ್ನು ಎಚ್ಚೆಸ್ವಿಯವರು ತುಂಬ ಸಮರ್ಥವಾಗಿ ನಿರೂಪಿಸುವ ಮೂಲಕ ನಮ್ಮ ಜೈನ ಪರಂಪರೆಯ ಆತ್ಮಕೇಂದ್ರಿತ ಭವಾವಳಿಗಳ ನಿರೂಪಣೆಗೆ ತಮ್ಮ ಪ್ರತಿಕ್ರಿಯೆಯನ್ನು ದಾಖಲಿಸಿದ್ದಾರೆನ್ನಿಸುತ್ತದೆ. ಹಾಗಾಗಿ ನಮ್ಮ ಟಿ.ಪಿ. ಅಶೋಕ ಅವರು ಸರಿಯಾಗಿಯೇ ಗುರುತಿಸಿರುವಂತೆ ಬುದ್ಧಚರಣವು 'ಸಿದ್ಧಾರ್ಥನು ಬುದ್ಧನಾಗುವ, ಬುದ್ಧನಾಗಿ ಮಾರ್ಗಪ್ರವರ್ತಕನಾಗುವ ಪ್ರಕ್ರಿಯೆಯನ್ನು ಹಿಡಿದಿಡುವ ಕೃತಿ'. ಮತ್ತು ಕೆ. ಸತ್ಯನಾರಾಯಣ ಅವರು ಹೇಳಿರುವಂತೆ ಇದು 'ಮಾನವ ಪ್ರಜ್ಞೆಯ ವಿಕಾಸದ ದಾಖಲೆ.' ಚಿಂತಾಮಣಿ ಕೊಡ್ಲೆಕೆರೆಯವರು ಬರೆದಿರುವಂತೆ 'ಇದು ಜೀವಿಗಳ ಮಾಗುವಿಕೆಯ ಹಂತಗಳನ್ನು ಹೇಳುವ ಕಥನ".

ಅಗತ್ಯದ ಪ್ರಶ್ನೆಯನ್ನು ವಿವರಿಸಿಕೊಳ್ಳುವುದಾದರೆ, ಮನಸ್ಸನ್ನು ಆವರಿಸಿರುವ ಗಾಢವಾದ ದುಃಖವನ್ನು ನೀಗಿಕೊಳ್ಳುವುದಕ್ಕಾಗಿ ಎಚ್ಚೆಸ್ವಿಯವರು ಬುದ್ಧಚರಣದ ರಚನೆಗೆ ತೊಡಗಿ, ಲೋಕದ ದುಃಖ ನಿವಾರಣೆಯ ವಿವೇಕಪ್ರಜ್ಞೆಯನ್ನಾಗಿ ಬುದ್ಧನನ್ನು ಕಾಣಿಸುವ ಪ್ರಯತ್ನ ಮಾಡಿದ್ದಾರೆ, ಮತ್ತದರಲ್ಲಿ ಯಶಸ್ಸನ್ನೂ ಸಾಧಿಸಿದ್ದಾರೆ. ರಾಮಾಯಣವನ್ನು ಬರೆಯಲು ವಾಲ್ಮೀಕಿಗೆ ಕ್ರೌಂಚಪಕ್ಷಿಯ ವಧೆ ಕಾರಣವಾದಂತೆ, ಶೋಕ ಶ್ಲೋಕವಾದಂತೆ ಎಚ್ಚೆಸ್ವಿಯವರ ದುಗುಡವು ಬುದ್ಧಚರಣದ ರಚನೆಗೆ ಒತ್ತಾಸೆಯಾಗಿದೆ. ಇವರ ಶ್ರೀಮತಿಯವರು ಆಸನ್ನಮರಣ ಸ್ಥಿತಿಯಲ್ಲಿರುವಾಗ ಆರ್ತ ದೃಷ್ಟಿ ಬೀರಿ 'ಬುದ್ಧಚರಣ'ವನ್ನು ತಮಗೆ ಉಡುಗೊರೆಯಾಗಿ ನೀಡಬೇಕೆಂದು ಬೇಡಿದ್ದು ಮತ್ತು ಇವರ ಪ್ರೀತಿಯ ಇಬ್ಬರು ಅಜ್ಜಿಯರ ಮರಣ. ಇವುಗಳ ಜೊತೆಗೆ ಆಪ್ತೇಷ್ಟರನೇಕರ ಕಣ್ಮರೆ –ಈ ಎಲ್ಲ ಕಾರಣಗಳಿಂದಾಗಿ ಮುಕ್ಕಾಗಿದ್ದ ಕವಿಹೃದಯವು ವಿಸ್ತಾರ ಕಾವ್ಯರಚನೆಯಲ್ಲಿ ತೊಡಗಲು ಸನ್ನದವಾಯ್ತು.

ಬರೆಯುವುದು, ಬರೆದ ನೂರಾರೂ ಪುಟಗಳನ್ನು ಅತೃಪ್ತಿಯಿಂದ ಹರಿದು ಕಸದಬುಟ್ಟಿಗೆ ಹಾಕುವುದು, ಮತ್ತೆ ಬರೆಯುವುದು, ಮಲಗುವುದು, ಮತ್ತೆದ್ದು ಬರೆಯುವುದು, ಬುದ್ಧನ ಮನೋಧರ್ಮಕ್ಕೆ ತಕ್ಕ ಲಯವನ್ನು, ನುಡಿಗಟ್ಟನ್ನು ದೊರಕಿಸಿಕೊಳ್ಳಲು ಹೆಣಗುವುದು, ಧ್ಯಾನಿಸುವುದು ಇವೆಲ್ಲವೂ ದಶಕಗಟ್ಟಲೆ ನಡೆದಿವೆ. ಕೊನೆಗೂ 2560 ವರ್ಷಗಳಷ್ಟು ಹಿಂದಿನ ಬುದ್ಧನ ಕಥೆಯನ್ನು ಎಚ್ಚೆಸ್ವಿಯವರು ಈವತ್ತಿನ ಕಾವ್ಯವಾಗಿಸುವಲ್ಲಿ ಗೆದ್ದರು. ಇದೊಂದು ಸಫಲವಾದ ಬರವಣಿಗೆಯೆಂಬುದನ್ನು ಈ ಕೃತಿ ಓದಿದವರೆಲ್ಲರೂ ಒಪ್ಪಬಲ್ಲರು. ಪತಿಯಿಂದ

ಭಾಷೆ ಪಡೆದು ಇಂತಹದ್ದೊಂದು ಕೃತಿಯು ಕನ್ನಡಕ್ಕೆ ಸಲ್ಲುವಂತೆ ನೋಡಿಕೊಂಡ ದಿವಂಗತ ರಾಜಲಕ್ಷ್ಮಿಯವರಿಗೂ ನಾಡು ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಬುದ್ಧಚರಣದ 'ಅರ್ಪಣೆ'ಯನ್ನು ಗಮನಿಸಿ:

**ಅರ್ಪಣೆ: ರಾಜಲಕ್ಷ್ಮಿಗೆ**

**"ಅಷ್ಟಪದಿಯೇ ಇಷ್ಟಪದಿಯಾಗಿ ಮೈತಳೆದ**
**ಬುದ್ಧಚರಣವ ನಿನ್ನ ಮುಡಿಯ ಮೇಲಿಡುವೆ ಮನದನ್ನೆ,**
**ಒಪ್ಪಿಕೊ, ಬುದ್ಧ ವಚನಾಶೀರ್ವಾದವ ಕಣ್ಕೊತ್ತಿ–**
**ಲೋಕನಶ್ವರತೆ ನನ್ನನುಭವಕೆ ತಂದವಳೆ,**
**ಬಿಸಿಲುಂಡು, ನೆರಳ ಸೆರಗಿನಲ್ಲಿಯೇ ತೊರೆದು,**
**ಹೇಳಿ ವಿದಾಯ ಮುಂದೆ ತೆರಳಿದ ತೊರೆಯೆ,**
**ಋಣಿ ನಾನು ಕೊಟ್ಟ ಪ್ರೀತಿಗೆ, ಬಿಟ್ಟ ಬಳುವಳಿಗೆ**
**ಚರಣವಳಿದರು, ಚರಿತೆ ಉಳಿಸಿ ಹೋದವಳಿಗೆ"**

ಎಂಥ ಸಮರ್ಪಣೆ ಮತ್ತು ಕೃತಜ್ಞತೆ ಕವಿ ಹೃದಯದ್ದು. ಇದಕ್ಕಿಂತ ಮತ್ತಾವ ರೀತಿಯ ಕೊಡುಗೆಯ ಮೂಲಕ ಋಣ ತೀರಿಸಲಾದೀತು? 'ಅಷ್ಟಪದಿ' ಯು ಕವಿಯ ಕೈಹಿಡಿದ ಕಾವ್ಯದ ನಡೆ. ಅದೇ 'ಇಷ್ಟಪದಿ' ಯಾಗಿ ಎಂಬಲ್ಲಿ ಕವಿಮನವನ್ನು ಗೆದ್ದು ಮುನ್ನಡಿಸಿದ ಛಂದೋಲಯವನ್ನಿಲ್ಲಿ ಸೂಚ್ಯವಾಗಿ ಎಚ್ಚೆತ್ತಿ ಕಾಣಿಸಿಬಿಟ್ಟಿದ್ದಾರೆ. ಹಾಗೆಯೇ ಕೊನೆಯ ಚರಣದಲ್ಲಿರುವ ಚರಣ ಮತ್ತು ಚರಿತೆ ಎಂಬೆರಡು ಪದಗಳು ಪತ್ನಿಗೆ ಹೇಳಿದ್ದರೂ ಕಾವ್ಯ ಓದಿ ಮುಗಿಸಿದಾಗ ಬುದ್ಧನ ಚರಣವಳಿದರೂ ಚರಿತೆ ಉಳಿವುದನ್ನೇ ಸಂಕೇತಿಸಿದಂತಿದೆ. ಆಪ್ತ ನಿವೇದನೆಯಲ್ಲಿ ದಾಂಪತ್ಯ ವಿಯೋಗದ ಚಿತ್ರಣವನ್ನೂ ಕವಿ ಅದ್ಭುತವೆಂಬಂತೆ ನಿರೂಪಿಸಿದ್ದಾರೆ.

ಅಗತ್ಯದ ಪ್ರಶ್ನೆಯನ್ನು ಮತ್ತಷ್ಟು ಚರ್ಚಿಸಬಹುದಾದರೆ ಬೆನ್ನುಡಿಯಲ್ಲಿರುವ ಕವಿಯ ಮಾತುಗಳನ್ನು ಕಿವಿಗೊಟ್ಟು ಆಲಿಸಬೇಕು. ಕಾವ್ಯದ ಉದ್ದೇಶ ಮತ್ತು ಆಶಯಗಳನ್ನು ಓದುಗರಿಗೆ ಮನದಟ್ಟು ಮಾಡಿಕೊಡುವ ಕೀಲಿ ಕೈಗಳಂತಿರುವ ಈ ಮಾತುಗಳನ್ನು ಗಮನಿಸಿ: "ಈವತ್ತು ಸ್ವಲೋಲುಪ್ತಿ ಮತ್ತು ಭೋಗಲಾಲಸೆಗಳು ಬದುಕನ್ನು ತೀವ್ರಗತಿಯಲ್ಲಿ ಆಕ್ರಮಿಸತೊಡಗಿವೆ. ಸ್ಪರ್ಧೆಯಲ್ಲಿ ಗೆಲ್ಲಲೇಬೇಕೆಂಬ ಹಪಾಹಪಿಯಲ್ಲಿ ಮನುಷ್ಯ ಅಪಾಯಕಾರಿ ವೇಗದಲ್ಲಿ ಓಡುತ್ತಿದ್ದಾನೆ. ಇಂಥ ಧಾವಂತದ ಓಟಕ್ಕೆ

ಲೋಕಾನುಕಂಪೆ ಮತ್ತು ಸಮಚಿತ್ತದ ಧ್ಯಾನದ ನಿಲುಗಡೆ ಮಾತ್ರ ಸಮಾಧಾನ ಒದಗಿಸೀತು. ಹಾಗಾಗಿಯೇ ಬುದ್ಧನ ಚರಣ, ಮತ್ತು ಚಾರಿತ್ರ್ಯದ ಅನುಸಂಧಾನವು ಈವತ್ತು ಯಾವತ್ತಿಗಿಂತ ಹೆಚ್ಚಿನ ತುರ್ತಾಗಿದೆ. ಈ ಕಾರಣಕ್ಕಾಗಿಯೇ ಆತನ ನಡೆಯ ಭಾಷಾಕಲ್ಪ ಮತ್ತು ನುಡಿಯ ಲಯ ವಿನ್ಯಾಸವನ್ನು ಕಂಡರಿಸುವ ಯತ್ನದಲ್ಲಿ ಈ ಬುದ್ಧಚರಣ ಕಾವ್ಯವು ತನ್ಮೂತೆಯಿಂದ ತೊಡಗಿದೆ."

ಬುದ್ಧಚರಣ ಒದಗಿಸುವ ಓದಿನ ಸುಖವನ್ನು, ಸೊಗಸನ್ನು ಕುರಿತು ಹೇಳದಿದ್ದರೆ ನನ್ನ ಬರಹ ಅಷ್ಟರಮಟ್ಟಿಗೆ ಅಪರಿಪೂರ್ಣವಾದಂತೆ. ಕನ್ನಡ ಓದಲು ಬರುವ ಯಾರು ಬೇಕಾದರೂ ಸುಲಭವಾಗಿ ಓದಿ ಅರ್ಥೈಸಿಕೊಳ್ಳಬಹುದಾದ ಸರಳ ಕನ್ನಡದಲ್ಲಿ ಎಚ್ಚೆಸ್ವಿ ಈ ಮಹಾಕಾವ್ಯವನ್ನು ರಚಿಸಿದ್ದಾರೆ. ಇದಕ್ಕೊಂದು ಪಾರಿಭಾಷಿಕ ಪದಕೋಶದ ಹಂಗಿಲ್ಲ ಮತ್ತು ಗದ್ಯಾನುವಾದದ ಆಸರೆಯೂ ಅನಗತ್ಯ. ತಮ್ಮ ಇದುವರೆಗಿನ ಕಾವ್ಯಯಾನದಲ್ಲಿ ಎಚ್ಚೆಸ್ವಿಯವರು ಸಿದ್ಧಿಸಿಕೊಂಡಿದ್ದ ಭಾಷಾಶೈಲಿಯ ಸಂಸ್ಕರಿತ ಭಾಷಾರೂಪ (Refined language)ವೊಂದು ಈ ಕಾವ್ಯವನ್ನು ಸುಲಭವಾಗಿ ಆಸ್ವಾಧಿಸಲು ನೆರವಿಗೆ ಬರುತ್ತದೆ. ಇದು ಈ ಕಾವ್ಯದ ಮುಖ್ಯ ಸಾಧನೆಗಳಲ್ಲೊಂದು. ತಮ್ಮ ಕಾಣ್ಕೆ, ಒಕ್ಕಣೆ, ಕೌಶಲ, ವೈವಿಧ್ಯತೆ ಮತ್ತು ಪ್ರಯೋಗಶೀಲತೆಯನ್ನು ಅಪೂರ್ವ ಭಾಷಾಸಿದ್ಧಿಯ ಮೂಲಕ ನಿರೂಪಿಸಲು ಸಾಧ್ಯವಾಗುವುದು ಮಹಾಕವಿಗೆ ಮಾತ್ರವೆಂಬುದನ್ನು ಇದು ನೆನಪಿಸುತ್ತದೆ.

'ಮಹಾಕಾವ್ಯ' ಎಂದ ಕೂಡಲೇ ಅದರ ಬೃಹತ್ಗಾತ್ರ, ಜಟಿಲ ಛಂದೋರೂಪಗಳು, ಪಾಂಡಿತ್ಯಪೂರ್ಣವಾದ ಬಿಗಿಯಾದ ಭಾಷೆ, ಹಳಗನ್ನಡ ಅಥವಾ ನಡುಗನ್ನಡದಲ್ಲಿರಬಹುದಾದ ಕಬ್ಬಿಣದ ಕಡಲೆ ಇರಬಹುದೆಂಬ ಆಲೋಚನೆಗಳೇ ಮನಸ್ಸಿನಲ್ಲಿ ಮೂಡಬಹುದು. ಬುದ್ಧಚರಣ ಈ ಬಗೆಯ ಭ್ರಮೆಗಳನ್ನು ಕಳಚುತ್ತದೆ. ಸರಳ ಸುಭಗವಾದ ಶೈಲಿಯನ್ನು ಕಾವ್ಯ ರಸಿಕರು ಓದಿ ಸುಖಿಸಬಹುದು. ಚೌಪದಿ, ಅಷ್ಟಪದಿ, ಅಷ್ಟ ಷಟ್ಪದಿ ಪದ್ಯಗಳ ಮೂಲಕ, 5 ಮಾತ್ರೆಗಳ ಛಂದೋಲಯವೊಂದು ಇಡೀ ಕಾವ್ಯವನ್ನು ಮುನ್ನಡೆಸಿದೆ. ಡಾಂಬರು ರಸ್ತೆಯಲ್ಲಿ ಓಡುವ ಕುದುರೆಯ ಖುರಪುಟದ ಸದ್ದಿನಂತೆ ಇಲ್ಲಿನ ಲಯ,ಶಬ್ದ, ನಾದಗಳು ಬಹುಕಾಲ ಓದುಗರೆದೆಯಲ್ಲಿ ಮಾರ್ದನಿಸುತ್ತದೆ.

ಬುದ್ಧನನ್ನು ಮೆರೆಸುವ ಭರದಲ್ಲಿ ಕವಿಯು ಉಳಿದ ಪಾತ್ರಗಳನ್ನು ಅವಗಣಿಸಿಲ್ಲ. ಬುದ್ಧಚರಣದ ಅನೇಕ ಪಾತ್ರಗಳು ತಮ್ಮ ಬಗ್ಗೆ ಧ್ಯಾನಿಸುವಂತೆ ಓದುಗರನ್ನು ಆಹ್ವಾನಿಸಬಲ್ಲವು. ಕೆಲವು ಸ್ತ್ರೀ ಪಾತ್ರಗಳಂತೂ ಅತ್ಯಂತ ಗಟ್ಟಿಯಾದವು, ಶಕ್ತಿಶಾಲಿಯಾದವು. ಎಚ್ಚೆಸ್ವಿ ತಮ್ಮನ್ನು ತಾವು 'ಮಾತೃಗೋತ್ರ'ದ ಕವಿಯೆಂದು

ವರ್ಣಿಸಿಕೊಂಡವರು. ಅಜ್ಜಿಯರು ಹಾಗೂ ತಾಯಿಯ ಆರೈಕೆಯಲ್ಲಿ ತಮ್ಮ ಅಂತಃಕರಣವನ್ನು ಸಂಪನ್ನಗೊಂಡವರಾದ್ದರಿಂದ ತಮ್ಮ ಕಾವ್ಯದ ಸ್ತ್ರೀ ಪಾತ್ರಗಳನ್ನು ಅನಾವರಣಗೊಳಿಸುವಲ್ಲಿ ಕಕ್ಕುಲಾತಿ ಉಕ್ಕಿ ಹರಿದಿದೆ. ಬುದ್ಧನ ಇಬ್ಬರು ತಾಯಂದಿರಾದ ಮಾಯಾದೇವಿ(ಹೆತ್ತ ತಾಯಿ) ಮತ್ತು ಗೌತಮಿ(ಬೆಳೆಸಿದ ತಾಯಿ)ಯರು ಸಮರ್ಥವಾಗಿ ಮುನ್ನಲೆಗೆ ಬರುವುದರೊಂದಿಗೆ ಯಶೋಧರಸ, ಆಮ್ರಪಾಲಿ, ಪ್ರಜಾಪತಿ ಮುಂತಾದ ಪಾತ್ರಗಳು ಕೂಡ ಹೆಚ್ಚು ಆರ್ದ್ರತೆಯಿಂದ ಅನಾವರಣಗೊಂಡಿವೆ.

ಯಶೋಧರೆಯ ಪಾತ್ರವನ್ನು ಹೆಚ್ಚು ನೆನಪಿನಲ್ಲುಳಿಯುವಂತಾದ್ದು. "ಎಲ್ಲ ಸುಖದಲ್ಲೂ ನನ್ನ ಜತೆ ಇದ್ದವನು ಮುಕ್ತಿ ಸುಖದಲ್ಲಿ ಮಾತ್ರ ಹೀಗೆ ಅಗಲಿದ್ದೇಕೆ?" ಎಂದು ಮೆಲುದನಿಯಲ್ಲಿ ಪ್ರಶ್ನಿಸುವಳಾದರೂ ಅದು ಕುಮಾರವ್ಯಾಸನ ದ್ರೌಪದಿಯು "ಸ್ತ್ರೀಮತವನುತ್ತರಿಸಲಾಗದೆ?" ಎಂದು ದಿಟ್ಟತನದಿಂದ ಪ್ರಶ್ನಿಸಿದಷ್ಟೇ ತೀವ್ರತೆ ಯಶೋಧರೆಯ ಪ್ರಶ್ನೆಗಿದೆ, ಅಷ್ಟೇ ಪರಿಣಾಮಕಾರಿಯಾಗಿದೆ. ಮಾಸ್ತಿಯವರ ಯಶೋಧರೆಯ ನೆನಪು ಇಲ್ಲಿ ಆವರಿಸಿದರೆ ಅಚ್ಚರಿಯೇನಿಲ್ಲ. ಆದರೆ ಎಚ್ಚೆಸ್ವಿಯವರ ಯಶೋಧರೆ ಪ್ರಗತಿಪರ ಧೋರಣೆಯವಳಾದರೂ ಸಮಚಿತ್ತದಿಂದ ಸಂದರ್ಭವನ್ನು ಸರಿದೂಗಿಸಿಕೊಂಡು ಹೋಗುವಲ್ಲಿ ಹೆಚ್ಚು ಪ್ರಬುದ್ಧಳಾಗಿ ಚಿತ್ರಿತಳಾಗಿರುವುದು ಆಕಸ್ಮಿಕವಲ್ಲ, ಬದಲಿಗೆ ವರ್ತಮಾನದ ಮನೋಧರ್ಮಕ್ಕೆ ಯಶೋಧರೆ ಮಾದರಿಯಂತಿದ್ದಾಳೆ.

ಬುದ್ಧಚರಣವನ್ನು ಓದಿದ ನಂತರ ನಮ್ಮನ್ನು ಹಿಡಿದು ನಿಲ್ಲಿಸುವ ಮಿಂಚಿನಂತಹ ಅನೇಕ ವಾಕ್ಯಗಳು ಕೃತಿಯುದ್ದಕ್ಕೂ ಇಡಿಕಿರಿದಿವೆ. ಕೆಲವು ಝಲಕುಗಳನ್ನು ನೋಡಿ.

* **ಹಸಿರೆಲೆಗಳಿಂದ ಇಡಿಕಿರಿದಿದ್ದ ಅರಳಿಮರ**
  **ಈಗ ನೋಡಿದರೆ ಎಲೆಯಿರದ ರೇಖಾಚಿತ್ರ.**
* **ಕಳೆದುಕೊಳ್ಳುತ್ತಿವೆ ಮರ ಗಿಡ ಬಳ್ಳಿ ಪೊದೆಗಳು**
  **ತಮ್ಮ ವಿವರಗಳನ್ನ! ಆಗುತ್ತ ಕತ್ತಲಿನ ಕಿರುಮೊತ್ತ.**

* **ಬೀರುವನು ಬೆಳ್ದಿಂಗಳನು ಬಿಸಿಲ ತಾನುಂಡು.**
* **ಕೊಂದವನದ್ದಲ್ಲ ಕಾದವನದು ಹಕ್ಕಿಯ ಹಕ್ಕು.**

* **ನಿಲುವೆ ನರ್ತನವಾದ ಹಾಗೆ ನೀಲಾಂಗಿಯರು**
  **ಹಾಡಿಗಾಕಾರ ಬರೆಯುತ್ತಾರೆ ಬೆಡಗಲ್ಲಿ.**

* ಬೆಂಕಿಗೆ ಎಣ್ಣೆ ಹುಯ್ಯುವುದು ಶಮನಕ್ಕೆ ದಾರಿಯೇ?

* ಬಟ್ಟೆಯಲಿ ಜ್ಯೋತಿಯನು ಕಟ್ಟಿಡಲಾಗುವುದೆ?

* ಬೋಳಾದ ತಲೆಯ ನೇವರಿಸುವನು ಅಭ್ಯಾಸ ಬಲದಿಂದ
ಏನಿದೆ ಅಲ್ಲಿ ಈಗ ನೇವರಿಸೆ?

ಇಂತಹ ಉಪಯುಕ್ತವೂ ಪ್ರಭಾವಶಾಲಿಯೂ ಆದ ಮಾತುಗಳ ಸರಣಿಯೇ ಈ ಕಾವ್ಯದಲ್ಲಿ ನಮಗೆ ಎದಿರಾಗುವುದು.

ತಾಳ್ಮೆಯಿಂದ, ವ್ಯವಧಾನದಿಂದ ಬುದ್ಧಚರಣವನ್ನು ಓದಿದಾಗ ಎತ್ತರದ ಬದುಕಿನ ಜೊತೆಯಲ್ಲಿ ನಾವೂ ನಡೆದ ಅನುಭವವಾಗುತ್ತದೆ. ಎದೆ ಸ್ವಚ್ಛಗೊಂಡು ಹಗುರಕ್ಕೆ ಸಲ್ಲುತ್ತದೆ. ಉತ್ತಮ ಕಾವ್ಯವೊಂದು ಉಂಟು ಮಾಡಬಲ್ಲ ಎಲ್ಲ ಧನಾತ್ಮಕ ಪರಿಣಾಮಗಳಿಗೂ ಬುದ್ಧಚರಣ ಆಸ್ಪದವೀಯುವುದರಿಂದ ಇದು ನಮ್ಮ ಕಾಲದ ಮಹಾಕಾವ್ಯ ಮಾತ್ರವಲ್ಲ ಮಹತ್ವಾಕಾಂಕ್ಷೆಯ ಕಾವ್ಯವೂ ಆಗಿದೆ. ಇಂಥ ಕೃತಿರಚನೆಯ ಕಾರಣಕ್ಕಾಗಿಎಚ್ಚೆಸ್ವಿಯವರಿಗೆ ಕನ್ನಡ ಕಾವ್ಯ ರಸಿಕರ ಅಭಿನಂದನೆಗಳು ಮತ್ತು ಕೃತಜ್ಞತೆಗಳೆರಡೂ ಸಲ್ಲಬೇಕು.

**–ಡಾ. ಎಚ್.ಎಸ್. ಸತ್ಯನಾರಾಯಣ**
ಸಾಹಿತಿ, ಕನ್ನಡ ಉಪನ್ಯಾಸಕರು, ಚಿಕ್ಕಮಗಳೂರು

# ಕನ್ನಡ ಭಾಷೆ ಹಾಗೂ ಕೃತಕ ಬುದ್ಧಿಮತ್ತೆ(AI)

¤ ಡಾ. ಸಂತೋಷ್ ಕುಮಾರ್ ಆರ್ ಎಂ.

ಭಾರತದ ವಿವಿಧ ಭಾಷಾ ಸಾಹಿತ್ಯಗಳ ಪೈಕಿ ಕನ್ನಡ ಸಾಹಿತ್ಯವು ತನ್ನ ವೈವಿಧ್ಯಮಯ ಶೈಲಿ, ಪರಂಪರೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಜೈನ ಸಾಹಿತ್ಯದಿಂದ ಹಿಡಿದು ವಚನ ಸಾಹಿತ್ಯ, ನವೋದಯ ಚಳುವಳಿಯಿಂದ ಹಿಡಿದು ಸಮಕಾಲೀನ ಕಾವ್ಯವರೆಗೆ ವ್ಯಾಪಿಸಿರುವ ಕನ್ನಡ ಸಾಹಿತ್ಯವು ಜನಮಾನಸದ ಪ್ರತಿರೂಪವಾಗಿದೆ. ಇಂತಹ ಭಾಷಾ ಸಾಹಿತ್ಯವನ್ನು ನವತಂತ್ರಜ್ಞಾನಗಳ ಸಹಯೋಗದ ಕಲಿಕೆಯೊಳಗೆ ಹೊಸ ಆಯಾಮವನ್ನು ತಂದಿದೆ.

ಕನ್ನಡ ಭಾಷಾಸಾಹಿತ್ಯವು ಸಾವಿರಾರು ವರ್ಷಗಳ ಪರಂಪರೆ ಹೊಂದಿರುವ ವಿಶಾಲ ಕ್ಷೇತ್ರ. ಈ ಸಾಹಿತ್ಯ ಪರಂಪರೆಯಲ್ಲಿರುವ ಮಾಹಿತಿಯನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಪೂರೈಸುವಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ ಮಹತ್ವವಾದುದು. ಕನ್ನಡ ಭಾಷೆ, ಸಾಹಿತ್ಯ ದಶಮಾನಗಳ ಪರಂಪರೆಯನ್ನು ಹೊಂದಿರುವ ಸಂಸ್ಕೃತಿಯ ದರ್ಪಣವಾಗಿದೆ. ಕಥೆಗಳು, ಕವಿತೆಗಳು, ನಾಟಕಗಳು, ನುಡಿಮುತ್ತುಗಳು ಮತ್ತು ವಿಮರ್ಶಾತ್ಮಕ ಸಾಹಿತ್ಯ – ಇವು ಎಲ್ಲಾ ಜೀವಂತ ಸಮಾಜದ ಪ್ರತಿಬಿಂಬಗಳಾಗಿವೆ. ಇಂಥ ಸಾಹಿತ್ಯವನ್ನು ಡಿಜಿಟಲ್ ಯುಗದಲ್ಲಿ ಸಂರಕ್ಷಣೆ ಮಾಡುವುದು, ವಿಶ್ಲೇಷಣೆ ಮಾಡುವುದು, ಹಾಗೂ ಹೊಸ ತಲೆಮಾರಿಗೆ ತಲುಪಿಸುವಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರದ ಕುರಿತು ಚರ್ಚೆ ಮಾಡುವುದು ಅತ್ಯಂತ ಪ್ರಸ್ತುತವಾಗಿದೆ.

'ಕೃತಕ ಬುದ್ಧಿಮತ್ತೆ' (Artificial Intelligence- AI) ಎಂಬುದು ಮಾನವ ಬುದ್ಧಿಯ ಗುಣಗಳನ್ನು ಯಂತ್ರಗಳಿಗೆ ವರ್ಗಾಯಿಸುವ ತಂತ್ರಜ್ಞಾನ. ಸರಳವಾಗಿ ಹೇಳುವುದಾದರೆ, ಯಂತ್ರಗಳು ಅಥವಾ ಕಂಪ್ಯೂಟರ್‌ಗಳು "ಚಿಂತನೆ", "ಅರ್ಥ ಗ್ರಹಣ", "ಆಲೋಚನೆ", "ನಿರ್ಣಯ" ಇತ್ಯಾದಿ ಮಾನವನ ಬುದ್ಧಿವಂತಿಕೆ ಹಾಗೂ

ಚಾತುರ್ಯತೆಗೆ ಅಗತ್ಯವಿರುವ ಕಾರ್ಯಗಳನ್ನು ತಾನಾಗಿ ನಿರ್ವಹಿಸಲು ಸಮರ್ಥವಾಗಿರುವ ಬುದ್ಧಿಮತ್ತೆಯ ತಂತ್ರಜ್ಞಾನವು ಕಾರ್ಯ ನಿರ್ವಹಿಸುವ ಸಾಮರ್ಥ್ಯವನ್ನು ಪಡೆದಿರುವುದು ಶ್ಲಾಘನೀಯ.

ಇಂತಹ ತಂತ್ರಜ್ಞಾನದ ಕೆಲವು ಪ್ರಮುಖ ಉಪಶಾಖೆಗಳನ್ನು ಹೊಂದಿವೆ. ಅವೆಂದರೆ,

• Natural Language Processing (NLP) – ಭಾಷೆಯ ಅರ್ಥಗ್ರಹಣ ಮತ್ತು ಸಂವಹನ

• Machine Learning – ಯಂತ್ರಗಳು ಅನುಭವದಿಂದ ಕಲಿಯುವಿಕೆ

• Text Generation & Analysis – ಪಠ್ಯ ನಿರ್ಮಾಣ ಮತ್ತು ವಿಶ್ಲೇಷಣೆ

ಇವುಗಳು ಪ್ರಸ್ತುತ ನಾವಿನ್ಯತೆಯ ಮೂಲಕ ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿವೆ – ಆರೋಗ್ಯ ಸೇವೆ, ಶಿಕ್ಷಣ, ಮಾಧ್ಯಮ, ಇ–ಕಾಮರ್ಸ್, ಕಾನೂನು, ಕಮ್ಯೂನಿಕೇಷನ್, ಇತರೆ ಅನೇಕ ಸಮಾಜಮುಖಿ ಕ್ಷೇತ್ರಗಳು, ಭಾಷೆ, ಸಂವಹನ ಮತ್ತು ಸೃಜನಾತ್ಮಕ ಚಟುವಟಿಕೆಗಳಲ್ಲಿಯೂ ಇದರ ಬಳಕೆ ವ್ಯಾಪಕವಾಗಿವೆ. ಸಾಹಿತ್ಯ ಕ್ಷೇತ್ರವೂ ಇದರ ಪ್ರಭಾವದಿಂದ ದೂರವಿಲ್ಲ ಪಾಠ ಬರವಣಿಗೆ, ಧ್ವನಿ ಪರಿವರ್ತನೆ, ಅನುವಾದ, ಪಠ್ಯ ವಿಶ್ಲೇಷಣೆ, ಪಠ್ಯ ಶುದ್ಧೀಕರಣ ಮತ್ತು ಇಲ್ಲಿಯವರೆಗೆ ಅಪರೂಪವಾಗಿದ್ದ ಸಾಹಿತ್ಯ ಸಂಪತ್ತಿನ ಡಿಜಿಟಲೀಕರಣದಲ್ಲೂ AI ತನ್ನ ಸ್ಥಾನವನ್ನು ಪಡೆಯುತ್ತಿದೆ.

ಮಾನವ ಸಮಾಜವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅದ್ಭುತ ಸಾಧನೆಗಳನ್ನು ಮುನ್ನಡೆಸುತ್ತಿರುವ 21ನೇ ಶತಮಾನದಲ್ಲಿ, AI ಎನ್ನುವುದು ಹೊಸ ಯುಗದ ಚೇತನಶಕ್ತಿಯಾಗಿ ಮೂಡಿಬಂದಿದೆ. ಈ ಶತಮಾನವು ತಂತ್ರಜ್ಞಾನದ ಮಹಾಪರಿವರ್ತನೆಯ ಯುಗವಾಗಿದೆ. ಅಲ್ಲದೆ AI ಎನ್ನುವುದು ಮಾನವ ಬದುಕಿನ ಎಲ್ಲ ಕ್ಷೇತ್ರಗಳನ್ನೂ ತಲುಪಿರುವ ಕ್ರಾಂತಿಕಾರಿ ಸಾಧನವಾಗಿದೆ. ಭಾಷಾ ತಂತ್ರಜ್ಞಾನದಲ್ಲಿ ನಡೆದಿರುವ ಕ್ರಾಂತಿಕಾರಿ ಬದಲಾವಣೆಗಳಿಂದ ಸ್ಥಳೀಯ ಭಾಷೆಗಳ ಶಕ್ತಿಶಾಲಿ ಪುನರುತ್ಥಾನಕ್ಕೆ ಅವಕಾಶಗಳು ಉದ್ಭವವಾಗಿವೆ. ಈ ಹಿನ್ನೆಲೆಯಲ್ಲಿ, ಕನ್ನಡ ಭಾಷೆ ಮತ್ತು ಸಾಹಿತ್ಯವು ತಂತ್ರಜ್ಞಾನದಿಂದ ಸ್ಪರ್ಶಗೊಂಡು ಹೊಸ ಆಯಾಮಗಳತ್ತ ಸಾಗುತ್ತಿರುವುದು ಗಮನಾರ್ಹವಾಗಿದೆ.

AI ನಂತಹ ತಂತ್ರಜ್ಞಾನಗಳು ಕನ್ನಡ ಪಠ್ಯಗಳ ಪಠಣ, ಅನುವಾದ, ಸೃಜನಾತ್ಮಕ ಬರವಣಿಗೆ, ಧ್ವನಿಸ್ಫೂರ್ತಿ (text-to-speech), ಮತ್ತು ನುಡಿಮುತ್ತು ಗುರುತಿಸುವಿಕೆ (keyword extraction) ಹೀಗೆ ಸಾಹಿತ್ಯ ಸಂಬಂಧಿತ ಹಲವಾರು

ಚಟುವಟಿಕೆಗಳಲ್ಲಿ ಅನುಪಯುಕ್ತವಾಗುತ್ತಿವೆ. ಜೊತೆಗೆ, ಈ ತಂತ್ರಜ್ಞಾನವು ಸಾಹಿತ್ಯವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಲು ಸಹ ಪೂರಕವಾಗಿದೆ. ವಿಶೇಷವಾಗಿ, ಕೃತಕ ಬುದ್ಧಿಮತ್ತೆ (Artificial Intelligence) ಎನ್ನುವುದು ಈ ಶತಮಾನದ ಅತ್ಯಂತ ಪ್ರಭಾವಿ ಉಪಕರಣವಾಗಿ ರೂಪುಗೊಂಡಿದ್ದು, ತನ್ನ ಶಕ್ತಿಯನ್ನು ತೋರಿಸುತ್ತಿದೆ. 21ನೇ ಶತಮಾನವು ತಂತ್ರಜ್ಞಾನ ಮತ್ತು ವೈಜ್ಞಾನಿಕ ಸಾಧನೆಗಳ ಕ್ರಾಂತಿಯುಗವಾಗಿದೆ. ಈ ತಂತ್ರಜ್ಞಾನಗಳ ಪ್ರಭಾವವು ಎಲ್ಲಾ ಕ್ಷೇತ್ರಗಳನ್ನು ಆವರಿಸಿದಂತೆ, ಭಾಷಾ ಅಧ್ಯಯನ ಮತ್ತು ಸಾಹಿತ್ಯ ಲೋಕಕ್ಕೂ ಪ್ರವೇಶಿಸಿದೆ. ಕನ್ನಡ ಸಾಹಿತ್ಯವು ತನ್ನದೇ ಆದ ಶೈಲಿಕ ವೈಶಿಷ್ಟ್ಯತೆಗಳು, ಧ್ವನಿಸೌಂದರ್ಯ, ಶಬ್ದಶಕ್ತಿಗಳು ಮತ್ತು ತಾತ್ವಿಕ ಆಳತೆಯಿಂದ ಕೂಡಿದ ಪರಿಣಾಮಕಾರಿಯುತ ಪರಂಪರೆಯನ್ನು ಹೊಂದಿದೆ. ಇಂತಹ ಶ್ರೀಮಂತ ಸಾಹಿತ್ಯ ಪರಂಪರೆಯನ್ನು ಕೃತಕ ಬುದ್ಧಿಮತ್ತೆಯಂತಹ (Artificial Intelligence - AI) ಆಧುನಿಕ ತಂತ್ರಜ್ಞಾನಗಳೊಂದಿಗೆ ಹೇಗೆ ಸಮನ್ವಯಗೊಳಿಸಬಹುದೆಂಬುದು ಈ ಅಧ್ಯಯನದ ಕೇಂದ್ರಬಿಂದುವಾಗಿದೆ.

## ಉದ್ದೇಶ :

ಈ ಲೇಖನದ ಉದ್ದೇಶವು ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಅದರ ಉಪಶಾಖೆಗಳಾದ Natural Language Processing-NLP – (ಭಾಷೆಯ ಅರ್ಥಗ್ರಹಣ ಮತ್ತು ಸಂವಹನ), Machine Learning (ಯಂತ್ರಗಳು ಅನುಭವದಿಂದ ಕಲಿಯುವಿಕೆ), Text Generation & Analysi (ಪಠ್ಯ ನಿರ್ಮಾಣ ಮತ್ತು ವಿಶ್ಲೇಷಣೆ) ಮುಂತಾದ ತಂತ್ರಜ್ಞಾನಗಳ ಮೂಲ ತತ್ತ್ವಗಳನ್ನು ಪರಿಚಯಿಸುವುದಾಗಿದೆ. ಈ ತಂತ್ರಜ್ಞಾನಗಳು ಭಾಷೆಯ ಸಂಸ್ಕರಣೆಯಲ್ಲಿ ಹೇಗೆ ಉಪಯೋಗವಾಗುತ್ತವೆ ಎಂಬುದರ ಅರಿವನ್ನು ಮೂಡಿಸುವುದು ಮತ್ತು AI ತಂತ್ರಜ್ಞಾನಗಳ ಬಳಕೆಯ ಸಾಧ್ಯತೆಗಳನ್ನು ವಿಶ್ಲೇಷಿಸುವುದು ಇಲ್ಲಿ ಮುಖ್ಯವಾಗಿದೆ. AI ತಂತ್ರಜ್ಞಾನಗಳ ಮೂಲಕ ಪಾಠ ಶುದ್ಧೀಕರಣ, ಹಳೆಯ ಪಠ್ಯಗಳ ಡಿಜಿಟಲೀಕರಣ, ಧ್ವನಿಮಾದರಿಗಳ ರೂಪದಲ್ಲಿ ಪಠ್ಯ ವಾಚನ, ಅನುವಾದ ಸೇವೆಗಳು ಹಾಗೂ ಆಡಿಯೋ ಪುಸ್ತಕಗಳ ಸೃಷ್ಟಿಯ ಉಪಯೋಗಗಳ ಕುರಿತ ಅಧ್ಯಯನವೂ ಸೇರಿದೆ. ಸಾಹಿತ್ಯ ಸೃಜನಶೀಲತೆಯಲ್ಲಿ AIಯ ಸಹಾಯದಿಂದ ಹೊಸ ಸಾಧ್ಯತೆಗಳ ಅರಿವು ಮೂಡಿಸುವುದೂ ಈ ಅಧ್ಯಯನದ ಭಾಗವಾಗಿದೆ. ಕವಿತೆ, ಕಥೆ, ನಾಟಕಗಳಂತಹ ಸಾಹಿತ್ಯ ಪ್ರಕಾರಗಳಲ್ಲಿ AIಯನ್ನು ಉಪಯೋಗಿಸಿ ಹೊಸ ಪ್ರಾಯೋಗಿಕ ಪ್ರಯತ್ನಗಳನ್ನು ನಿರ್ವಹಿಸಲು ಪಠ್ಯಗಳು ಹೇಗೆ ರೂಪುಗೊಳ್ಳಬಹುದು ಎಂಬುದನ್ನು ಈ ಕೆಳಕಂಡಂತೆ

ವಿಶ್ಲೇಷಿಸಲಾಗುತ್ತದೆ.

1. Natural Language Processing (NLP) – ಭಾಷೆಯ ಅರ್ಥಗ್ರಹಣ ಮತ್ತು ಸಂವಹನ

ಮಾನವ ಜೀವನದಲ್ಲಿ ಭಾಷೆ ಅತೀವ ಮಹತ್ವದ್ದಾಗಿದೆ. ಮಾನವನ ಭಾವನೆಗಳು, ವಿಚಾರಗಳು, ಜ್ಞಾನ ಹಾಗೂ ಅನುಭವಗಳನ್ನು ಹಂಚಿಕೊಳ್ಳಲು ಭಾಷೆಯ ಮೇಲೆ ಅವಲಂಬಿತನಾಗಿದ್ದಾನೆ. ಇತಿಹಾಸದ ಪ್ರಾರಂಭದಿಂದಲೂ ಭಾಷೆ ಸಂವಹನದ ಪ್ರಧಾನ ಸಾಧನವಾಗಿದ್ದು, ಸಮಾಜದ ಅಭಿವೃದ್ಧಿಗೆ ಆಧಾರ ಸ್ತಂಭವಾಗಿದೆ. ಇಂಥ ಭಾಷೆಯ ಅರ್ಥವನ್ನು ಯಂತ್ರಗಳು ಅರ್ಥಮಾಡಿಕೊಳ್ಳುವುದು ಸಹಜವಲ್ಲದ ಕಾರ್ಯವಾದರೂ ಇದನ್ನು ಸಾಧ್ಯವಾಗಿಸುವ ತಂತ್ರಜ್ಞಾನವೇ Natural Language Processing (NLP).

ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ (NLP) ಎಂದರೆ, ಮಾನವ ಭಾಷೆಯನ್ನು ಕಂಪ್ಯೂಟರ್ಗಳು ಅರ್ಥಮಾಡಿಕೊಳ್ಳಲು, ಸಂಸ್ಕರಿಸಲು ಹಾಗೂ ಪ್ರತಿಕ್ರಿಯಿಸಲು ಬಳಸುವ ತಂತ್ರಜ್ಞಾನ. ಇದು ಕೃತಕ ಬುದ್ಧಿಮತ್ತೆ (AI) ಮತ್ತು ಯಂತ್ರ ಅಧ್ಯಯನ (Machine Learning) ಎಂಬ ವಿಜ್ಞಾನ ಕ್ಷೇತ್ರಗಳ ಜೊತೆಯಲ್ಲಿ ಬೆಳೆಯುತ್ತಿರುವ ಪ್ರಮುಖ ಪ್ರಕಾರವಾಗಿದೆ. ಓಐಕ ಯಿಂದ ಕಂಪ್ಯೂಟರ್ಗಳು ಭಾಷೆಯ ಶಬ್ದ, ವಾಕ್ಯರಚನೆ, ವ್ಯಾಕರಣ, ಸಾಂದರ್ಭಿಕ ಅರ್ಥ ಮತ್ತು ಭಾವನಾತ್ಮಕ ಅಂಶಗಳನ್ನು ಗುರುತಿಸಿ, ಮಾಹಿತಿಯ ಪ್ರಕ್ರಿಯೆಗೊಳಿಸಿ ನಿಖರವಾಗಿ ಪ್ರತಿಕ್ರಿಯಿಸಬಲ್ಲವು.

ಕನ್ನಡ ಸೇರಿದಂತೆ ಸ್ಥಳೀಯ ಭಾಷೆಗಳಿಗೂ ಓಐಕ ಉಪಯೋಗಿಸಬಹುದಾದ ಸಾಮರ್ಥ್ಯ ಹೊಂದಿದೆ. ಈ ಮೂಲಕ ನವೋನ್ನತ ತಂತ್ರಜ್ಞಾನವು ಪ್ರಾದೇಶಿಕ ಭಾಷೆಗಳಲ್ಲೂ ಇದನ್ನು ಉಪಯೋಗಿಸಿಕೊಳ್ಳಬಹುದು. ಇಂತಹ ಮಹೋನ್ನತ ಕಾರ್ಯಗಳಿಂದ ಭಾಷಾ ಸಂಸ್ಕೃತಿಯ ಶಾಶ್ವತ ರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.

ಈ ಲೇಖನದಲ್ಲಿ, NLPಯ ತತ್ವಗಳಿಗೆ ಸಂಬಂಧಿಸಿದ, ಅಂದರೆ ಆಲೋಚನೆ, ತರ್ಕ ಮತ್ತು ಅರ್ಥವನ್ನು ವಿವರಿಸುವುದು ಹಾಗೂ ಅದರ ಪ್ರಮುಖ ತಂತ್ರಜ್ಞಾನಗಳು, ಉಪಯೋಗ ಮತ್ತು ಭಾಷೆಯ ಅರ್ಥಗ್ರಹಣ ಹಾಗೂ ಸಂವಹನದ ಪೂರಕತೆಯನ್ನು ಚರ್ಚಿಸಲಾಗುತ್ತದೆ. ಭಾಷೆಯು ನಶಿಸದಂತೆ ಮಾಡುವ ಉದ್ದೇಶದಿಂದ, ತಂತ್ರಜ್ಞಾನವೂ ಭಾಷೆಯ ಉಳಿವಿಗೆ ಪೂರಕವಾಗುವ ದಿಸೆಯಲ್ಲಿ ಹೆಜ್ಜೆಹಾಕುತ್ತಿರುವ ಈ ಕಾಲಘಟ್ಟದಲ್ಲಿ NLPನ ಮಹತ್ವದ ವಿಶ್ಲೇಷಣೆಯು ಅಗತ್ಯವಾಗಿದೆ.

## NLP ತಂತ್ರಜ್ಞಾನದ ಉಪಯೋಗಗಳು

### 1. ಭಾಷಾನುವಾದ (Language Translation)

NLP ತಂತ್ರಜ್ಞಾನದಲ್ಲಿ ಪ್ರಮುಖವಾದ ಒಂದು ವಿಭಾಗವಾಗಿದೆ. ತಂತ್ರಜ್ಞಾನದ ಮೂಲಕ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪಠ್ಯವನ್ನು ಅನುವಾದ ಮಾಡಲು ಅಥವಾ ಪರಿವರ್ತಿಸಲು ಉಪಯೋಗಿಸಲಾಗುತ್ತದೆ. ಇದು ಬಹುಭಾಷಾ ಸಂವಹನವನ್ನು ಸುಲಭಗೊಳಿಸುತ್ತದೆ. ಅಂದರೆ ಒಂದು ಭಾಷೆಯ ಪಠ್ಯವನ್ನು ಅಥವಾ ಮಾತುಗಳನ್ನು ಇನ್ನೊಂದು ಭಾಷೆಗೆ ಸ್ವಯಂಚಾಲಿತವಾಗಿ ಅಥವಾ ಸ್ವಲ್ಪ ಮಾನವ ಸಹಾಯದೊಂದಿಗೆ ಸರಳವಾಗಿ, ಶುದ್ಧವಾಗಿ ಮತ್ತು ಅರ್ಥಪೂರ್ಣವಾಗಿ ಅನುವಾದಿಸುವ ಪ್ರಕ್ರಿಯೆ.

ಉದಾ:

♦ Google Translate – ಇಂಗ್ಲಿಷ್ನಿಂದ ಕನ್ನಡ, ಹಿಂದಿಯಿಂದ ಇಂಗ್ಲಿಷ್, ಅಥವಾ ಇತರೆ 100+ ಭಾಷೆಗಳಲ್ಲಿ ಅನುವಾದ. 'Welcome to Bangalore' 'ಬೆಂಗಳೂರುಗೆ ಸ್ವಾಗತ' 'Knowledge is power'– 'ಜ್ಞಾನವೇ ಶಕ್ತಿ'

♦ Microsoft Translator ಕೂಡ ಪ್ರಚಲಿತ ಸಾಧನಗಳು. PowerPoint ನಲ್ಲಿ ನೇರ ಭಾಷಾಂತರವಾಗುವ ಫೀಚರ್.

Facebook – Auto Translate ಪೋಸ್ಟ್ಗಳನ್ನು ಸ್ಥಳೀಯ ಭಾಷೆಯಲ್ಲಿ ತೋರಿಸುವ ವ್ಯವಸ್ಥೆ.

♦ YouTube Subtitles – Auto Translate ವೀಡಿಯೋ ಶೀರ್ಷಿಕೆ ಮತ್ತು ಡೈಲಾಗ್ಗಳನ್ನು ಕನ್ನಡಕ್ಕೆ ತರುವಿಕೆ.

**ಯಂತ್ರ ಅನುವಾದದ ವಿಧಗಳು:**

♦ (Rule-Based MT (RBMT) ನಿಗದಿತ ನಿಯಮಗಳು ಮತ್ತು ಪದಕೋಶಗಳ ಆಧಾರದ ಮೇಲೆ ಅನುವಾದ.

♦ Statistical MT (SMT) ಶತಮಾನದ ಸಂಖ್ಯಾತ್ಮಕ ಮಾದರಿಗಳ ಆಧಾರದಲ್ಲಿ. ಉದಾ: Google SMT version.

♦ Neural MT (NMT) ನ್ಯೂರಲ್ ನೆಟ್ವರ್ಕ್ (Deep Learning) ಆಧಾರಿತ. ಉದಾ: Google Neural Machine Translation.

ಬಹುಭಾಷಿಕ ಸಂವಹನ ಸಾಧ್ಯವಾಗಿಸುವುದರೊಂದಿಗೆ, ಜ್ಞಾನ, ಮಾಹಿತಿ ಮತ್ತು ಸಂಸ್ಕೃತಿಯ ಹಂಚಿಕೆಯನ್ನು ಸುಲಭಗೊಳಿಸುತ್ತದೆ. ಯಂತ್ರ ಅನುವಾದ

(Machine Translation) ದಿಂದ ವಿದೇಶಿ ಪುಸ್ತಕ, ಲೇಖನಗಳು, ಜಾಲತಾಣಗಳ ಅನುವಾದ, ವ್ಯಾಪಾರಿಕ ಇಮೇಲ್ ಅಥವಾ ಪತ್ರಗಳನ್ನು ಅನುವಾದಿಸುವುದು, ಭಾಷಾ ಕಲಿಕೆಗೆ ಸಹಾಯಕವಾಗಿರುವ ಅಪ್ಲಿಕೇಶನ್ಗಳು, ಸಹಾಯ ಕೇಂದ್ರಗಳಲ್ಲಿ ಗ್ರಾಹಕರ ಪ್ರಶ್ನೆಗಳಿಗೆ ತಕ್ಷಣದ ಅನುವಾದಗಳನ್ನು ಮಾಡಬಹುದು.

## 2. ಧ್ವನಿ ಗುರುತು (Speech Recognition)

ಧ್ವನಿ ಗುರುತು ಅಂದರೆ ಮಾನವ ಧ್ವನಿ ಆಧಾರಿತ ಆಜ್ಞೆಗಳನ್ನು ಗುರುತಿಸಿ, ಕಂಪ್ಯೂಟರ್ ಅಥವಾ ಮೊಬೈಲ್ ಸಾಧನಗಳು ಗುರುತಿಸಿ, ಅದನ್ನು ಪಠ್ಯ ರೂಪಕ್ಕೆ ಪರಿವರ್ತಿಸುವ ಪ್ರಕ್ರಿಯೆ. ಇದು ವಾಯ್ಸ್ ಇನ್ಪುಟ್ ಅನ್ನು ಟೆಕ್ಸ್ಟ್ ಔಟ್ಪುಟ್ ಆಗಿ ಬದಲಾಯಿಸುವ ಬಹುಮುಖ್ಯ ತಂತ್ರಜ್ಞಾನವಾಗಿದೆ.

ಉದಾಹರಣೆ: Siri, Google Assistant, Amazon Alexa.

♦ Google Voice Typing (Android) ನೀವು ಮಾತನಾಡಿದಂತೆ ಪಠ್ಯವಾಗಿ ಗೋಚರಿಸುತ್ತದೆ.

ಉದಾ: "ನಾನು ಇವತ್ತು ಕಾಲೇಜಿಗೆ ಹೋಗುತ್ತಿದ್ದೇನೆ" ಪಠ್ಯ ರೂಪದಲ್ಲಿ ಟೈಪ್ ಆಗುತ್ತದೆ.

♦ Siri (iOS): “What’s the weather today?” ಎಂದು ಕೇಳಿದರೆ, ಖುಡಿ ಧ್ವನಿಯನ್ನು ಗುರುತುಮಾಡಿ ಉತ್ತರ ನೀಡುತ್ತದೆ.

♦ YouTube Voice Search: ವೀಡಿಯೋ ಹುಡುಕಲು ಟೈಪ್ ಮಾಡುವ ಬದಲು ನೇರವಾಗಿ ಹೇಳಬಹುದು.

♦ Google Translate – Voice Input: ಕನ್ನಡದಲ್ಲಿ ಮಾತನಾಡಿದರೆ, ಆಂಗ್ಲದಲ್ಲಿ ಅನುವಾದವಾಗುತ್ತದೆ:

ಉದಾ: **“**ನೀವು ಹೇಗಿದ್ದೀರಾ?**”** "How are you?"

### ಉಪಯೋಗ ಕ್ಷೇತ್ರಗಳು (Applications)

| ಕ್ಷೇತ್ರ | ವಿವರಣೆ |
|---|---|
| 1. ಮೊಬೈಲ್ ಅಸಿಸ್ಟೆಂಟ್ಸ್ : | Siri, Google Assistant, Bixby ಮೊದಲಾದವುವು ಧ್ವನಿ ಆಧಾರಿತ. |
| 2. ವಾಯ್ಸ್ ಟೈಪಿಂಗ್ : | ವೈದ್ಯರು, ಪತ್ರಕರ್ತರು ಅಥವಾ ಅಂಧತೆ ಇರುವವರು ಬಳಸುತ್ತಾರೆ. ಉದಾ: Google Voice Typing |
| 3. ಕಾಲ್ ಕಾಲ್ ಸೆಂಟರ್ಗಳು : | ಗ್ರಾಹಕರ ಧ್ವನಿ ಆಧರಿಸಿ ಪ್ರಶ್ನೆಗಳಿಗೆ ತ್ವರಿತ ಉತ್ತರ. |

4. ಶಿಕ್ಷಣ ಕ್ಷೇತ್ರ : Dyslexia ಇರುವ ಮಕ್ಕಳಿಗೆ dictation software ಗಳಿಂದ ನೆರವು.

5. ಭಾಷಾಂತರ ಸೇವೆಗಳು: Google Translateನಲ್ಲಿ ವಾಯ್ಸ್ ಇನ್ಪುಟ್.

6. ವಾಹನಗಳಲ್ಲಿ ಧ್ವನಿ ನಿಯಂತ್ರಣ: "Play music," "Call home" – ಚಾಲಕರಿಗೆ ಅನುಕೂಲ, ನಾವಿಗೇಶನ್ ನಿಯಂತ್ರಣ(GPS), ಕ್ಲೈಮೆಟ್ ಕಂಟ್ರೋಲ್, ವಾಹನದ ವೈಶಿಷ್ಟ್ಯ ನಿಯಂತ್ರಣಗಳು (Turn on headlights, Open sunroof, Switch on wipers)

ಧ್ವನಿ ಗುರುತು ತಂತ್ರಜ್ಞಾನವು ಮನುಷ್ಯ–ಯಂತ್ರ ಸಂವಹನವನ್ನು ಹೆಚ್ಚು ನೈಸರ್ಗಿಕ, ವೇಗದ ಮತ್ತು ಸುಲಭವಾಗಿಸುತ್ತಿದೆ. ಇದು ದೈನಂದಿನ ಜೀವನದಲ್ಲಿ ತಂತ್ರಜ್ಞಾನ ಬಳಕೆಯನ್ನು ಬಹಳಷ್ಟು ಸುಧಾರಿಸಿದೆ.

## 3. ಸ್ವಯಂಚಾಲಿತ ಉತ್ತರ ನೀಡುವ ವ್ಯವಸ್ಥೆ (Chatbots)

ಚಾಟ್ಬಾಟ್ (Chatbot) ಎಂದರೆ, ಮಾನವನಂತೆ ಮಾತನಾಡಲು ಹಾಗೂ ಬಳಕೆದಾರರೊಂದಿಗೆ ಸಂವಹನ ನಡೆಸಲು ವಿನ್ಯಾಸಗೊಳಿಸಲಾದ ಕೃತಕ ಬುದ್ಧಿಮತ್ತೆ (AI) ಮತ್ತು ನೈಸರ್ಗಿಕ ಭಾಷಾ ಪ್ರಕ್ರಿಯೆ (NLP) ಆಧಾರಿತ ತಂತ್ರಾಂಶಗಳಾಗಿವೆ. ಇವು ತಿಜಛುಝಿಣಗಳು, ಮೊಬೈಲ್ Appಗಳು, ಮೆಸ್ಸೆಂಜರ್ ಸೇವೆಗಳು ಮತ್ತು ಇತರೆ ಡಿಜಿಟಲ್ ಫ್ಲಾಟ್ಫಾರಂಗಳಲ್ಲಿ ಬಳಕೆದಾರನ ಪ್ರಶ್ನೆಗಳಿಗೆ ತಕ್ಷಣ, ನಿರಂತರ ಹಾಗೂ ಸರಿಯಾದ ಉತ್ತರಗಳನ್ನು ನೀಡುವಲ್ಲಿ ಈ ವ್ಯವಸ್ಥೆ ನಿಖರವಾಗಿ ಕಾರ್ಯನಿರ್ವಹಿಸುತ್ತದೆ.

**ಚಾಟ್ಬಾಟ್ಗಳ ಮುಖ್ಯ ಉದ್ದೇಶ:**

ಗ್ರಾಹಕರ ಪ್ರಶ್ನೆಗಳಿಗೆ ತಕ್ಷಣ ಉತ್ತರ ನೀಡುವುದು, ಸರಳ ಸೇವೆಗಳನ್ನು, ಸ್ವಯಂಚಾಲಿತಗೊಳಿಸುವುದು, ಮನುಷ್ಯರ ಹಸ್ತಕ್ಷೇಪದ ಅಗತ್ಯವಿಲ್ಲದೆ ಪರಿಹಾರ ನೀಡುವುದು

**ಚಾಟ್ಬಾಟ್ಗಳ ಉಪಯೋಗ ಸ್ಥಳಗಳು:**

♦ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಲ್ಲಿ: **"ಬ್ಯಾಲೆನ್ಸ್ ಎಷ್ಟು?"** ಅಥವಾ **"ಅಕೌಂಟ್ ಸ್ಟೇಟ್ಮೆಂಟ್ ಕೊಡಿ"** ಎಂಬಂತೆ ಬಳಕೆದಾರ ಕೇಳಿದರೆ, ಚಾಟ್ಬಾಟ್ ತಕ್ಷಣ ಉತ್ತರ

ನೀಡುತ್ತದೆ. ಉದಾ: HDFC Eva Bot, SBI Intelligent Assistant.

♦ ಈ–ಕಾಮರ್ಸ್ ತಾಣಗಳಲ್ಲಿ: ಗ್ರಾಹಕರಿಗೆ ಆರ್ಡರ್ ಸ್ಟೇಟಸ್, ರಿಟರ್ನ್ ಪಾಲಿಸಿಗಳು, ಉತ್ಪನ್ನ ಮಾಹಿತಿ ಇತ್ಯಾದಿ ನೀಡುವುದು. ಉದಾ: Amazon's Alexa Chat Support, Flipkart's chatbot.

♦ ಆರೋಗ್ಯ ಸೇವೆಯಲ್ಲಿ: ರೋಗ ಲಕ್ಷಣಗಳನ್ನು ಕೇಳಿ ಸರಳ ಸಲಹೆ ನೀಡುವುದು, ಡಾಕ್ಟರ್ ಅಪಾಯಿಂಟ್ಮೆಂಟ್ ಬುಕ್ ಮಾಡುವುದು. ಉದಾ: Apollo Hospitals' chatbot, Practo Bot.

♦ ಶೈಕ್ಷಣಿಕ ಸಂಸ್ಥೆಗಳಲ್ಲಿ: ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡುವುದು (ಅಡ್ಮಿಷನ್, ಕೋರ್ಸ್ ಮಾಹಿತಿ, ಪರೀಕ್ಷಾ ವೇಳಾಪಟ್ಟಿ). ಉದಾ: EduBot, College ERP-integrated bots.

♦ ಸರಕಾರಿ ಸೇವೆಗಳು: ಸರ್ಕಾರಿ ವೆಬ್ ಸೈಟ್‌ಗಳಲ್ಲಿ ಮಾಹಿತಿ ನೀಡುವುದು ಉದಾ: ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ. UMANG App chatbot.

**ಲಾಭಗಳು :**

♦ ಆರ್ಥಿಕವಾಗಿ ಲಾಭದಾಯಕ: ಸಿಬ್ಬಂದಿ ವೆಚ್ಚ ಕಡಿಮೆ

♦ ಸಮಯದ ಉಳಿತಾಯ: ತಕ್ಷಣ ಪರಿಹಾರ

♦ ಸೇವೆಯ ಗುಣಮಟ್ಟ: ನಿರಂತರ ಮತ್ತು ನಿಖರವಾದ ಸೇವೆ

♦ ಮಹತ್ವದ ಮಾಹಿತಿಯನ್ನು ಸಂಗ್ರಹ: ಬಳಕೆದಾರರ ಅಭಿರುಚಿ, ಪ್ರಶ್ನೆಗಳ ಪ್ಯಾಟರ್ನ್ಗಳು

**ಸವಾಲುಗಳು:**

♦ ನಿಖರ ಭಾಷಾ ಅರ್ಥಗ್ರಹಣ ಸಂದರ್ಭಗಳು

♦ ಸಂವೇದನಾಶೀಲ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವಲ್ಲಿ ಮಿತಿ

♦ ಸ್ಥಳೀಯ ಭಾಷೆಗಳ (ಕನ್ನಡ ಸೇರಿದಂತೆ) ಬೆಂಬಲ ಇನ್ನೂ ವಿಸ್ತಾರಗೊಳ್ಳಬೇಕಿದೆ

**4. ಭಾವನಾತ್ಮಕ ವಿಶ್ಲೇಷಣೆ** (Sentiment Analysis)

ಭಾವನಾತ್ಮಕ ವಿಶ್ಲೇಷಣೆ ಎಂಬುದು NLP (Natural Language Processing) ಯ ಒಂದು ಉಪಪ್ರಯೋಗವಾಗಿದ್ದು, ಬರಹ ಅಥವಾ ಮಾತಿನ ಹಿಂದೆ ಇರುವ ವ್ಯಕ್ತಿಯ ಭಾವನೆಗಳನ್ನು ಗುರುತು ಮಾಡುವ ತಂತ್ರಜ್ಞಾನ. ಇದನ್ನು "Opinion Mining" ಎಂದೂ ಕರೆಯುತ್ತಾರೆ. ಇದು ವ್ಯಕ್ತಿಯ ಅಭಿಪ್ರಾಯವು ಧನಾತ್ಮಕ

(Positive), ಋಣಾತ್ಮಕ (Negative) ಅಥವಾ ತಟಸ್ಥ (Neutral) ಎಂಬುದನ್ನು ನಿರ್ಧರಿಸಲು ಸಹಾಯ ಮಾಡುತ್ತದೆ.

| | |
|---|---|
| Twitter #Hashtag- | ಪ್ರಚಾರದ ಬಗ್ಗೆ ಸಾರ್ವಜನಿಕ ಅಭಿಪ್ರಾಯ |
| Facebook- | ಪೋಸ್ಟರ್‌ಗಳ ಲೈಕ್/ ಕಮೆಂಟ್‌ಗಳ ಭಾವನೆ ವಿಶ್ಲೇಷಣೆ |
| Instagram- | ಬ್ರಾಂಡ್‌ಗಳ ಕುರಿತ ಅಭಿಪ್ರಾಯಗಳು |
| YouTube- | ವಿಡಿಯೋ ಕಮೆಂಟ್‌ಗಳ ಧ್ವನಿ ತಾತ್ಪರ್ಯ |
| | ಜಾಲತಾಣಗಳಲ್ಲಿ ಉಪಯೋಗಿಸುತ್ತಾರೆ. |

**ಉದಾಹರಣೆಗಳು :**

ಚುನಾವಣೆ ಅಭಿಪ್ರಾಯ ವಿಶ್ಲೇಷಣೆ: ಚುನಾವಣಾ ಸಮಯದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಜನರು ನಾಯಕರ ಬಗ್ಗೆ ಬರೆದಿರುವ ಟ್ವೀಟ್ಗಳು ಅಥವಾ ಕಮೆಂಟ್ಗಳನ್ನು ವಿಶ್ಲೇಷಿಸಿ – ಯಾವ ಅಭ್ಯರ್ಥಿಗೆ ಹೆಚ್ಚು ಸಕಾರಾತ್ಮಕ ಪ್ರತಿಕ್ರಿಯೆ ಇದೆ ಎನ್ನುವುದು ಕಂಡುಹಿಡಿಯಬಹುದು.

**ಉತ್ಪನ್ನ ವಿಮರ್ಶೆಗಳು :** ಉದಾ: "ಈ ಮೊಬೈಲ್ ಕ್ಯಾಮೆರಾ ಒಳ್ಳೆಯದು ಆದರೆ ಬ್ಯಾಟರಿ ಬೇಗ ಖಾಲಿಯಾಗುತ್ತದೆ" – ಈ ಅಭಿಪ್ರಾಯದಲ್ಲಿ ಒಂದು ಭಾಗ ಧನಾತ್ಮಕ, ಮತ್ತೊಂದು ಋಣಾತ್ಮಕ.

**ಚಲನಚಿತ್ರ ವಿಮರ್ಶೆ :** "ಚಿತ್ರದ ಕಥೆ ಚೆನ್ನಾಗಿದೆ, ಆದರೆ ಅಭಿನಯ ನಿರಾಸೆಗೊಳಿಸಿದೆ" – ಮಿಶ್ರ ಭಾವನೆಗಳು.

**ಸವಾಲುಗಳು :**

ವ್ಯಂಗ್ಯ (sarcasm) – ಅಥವಾ ಕಡುಭಾಷೆಗಳನ್ನು ಅರ್ಥಮಾಡಿಕೊಳ್ಳುವುದು ಸವಾಲಿನ ವಿಷಯ

**ಭಾಷಾ ಭಿನ್ನತೆಗಳು** – ಕನ್ನಡ, ಇಂಗ್ಲಿಷ್, ಹಿಂದಿ ಮಿಶ್ರ ಬಳಕೆ
ಮೀನಿಂಗ್ ಬೇರೆ ಇಮೋಜಿ ಅಥವಾ ಮೀಮ್ಗಳಲ್ಲಿ
ಭಾವನಾತ್ಮಕ ವಿಶ್ಲೇಷಣೆ (Sentiment Analysis) ಎನ್ನುವುದು ಓಐಕ ಯ ಅತ್ಯಂತ ಪ್ರಬಲ ಉಪಯೋಗವಾಗಿದ್ದು, ಡಿಜಿಟಲ್ ಯುಗದಲ್ಲಿ ಸಮಾಜದ ನೈಜ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಪ್ರಮುಖ ಸಾಧನವಾಗಿದೆ. ಸಾಮಾಜಿಕ

ಮಾಧ್ಯಮಗಳಲ್ಲಿ ಜನರು ನೀಡುವ ಪ್ರತಿಕ್ರಿಯೆಗಳ ಆಧಾರದಲ್ಲಿ ನಾವೀಗ ತ್ವರಿತ, ಪರಿಣಾಮಕಾರಿ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು.

**5. ಪಠ್ಯ ಸಂಕ್ಷೇಪಣೆ** (Text Summarization)

ಟೆಕ್ಸ್ಟ್–ಸಮ್ಮೆರೈಜೆಷನ್ ಎಂದರೆ – ಒಂದು ಉದ್ದವಾದ ಲೇಖನ ಅಥವಾ ಡಾಕ್ಯುಮೆಂಟ್ನ ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ, ಅರ್ಥಪೂರ್ಣವಾಗಿ, ಸ್ಪಷ್ಟವಾಗಿ ಒದಗಿಸುವ ಪ್ರಕ್ರಿಯೆ. ಇದು ಭಾಷೆಯ ಅರ್ಥ ಗ್ರಹಣ ಹಾಗೂ ಸೂಕ್ಷ್ಮ ಮಾಹಿತಿಯ ಸಂಕ್ಷಿಪ್ತ ರೂಪ ನೀಡಲು ಉಪಯುಕ್ತವಾಗಿದೆ. ಪಠ್ಯ ಸಂಕ್ಷೇಪಣೆ ಕಾರ್ಯವನ್ನು ವರದಿಗಳು, ಸುದ್ದಿ ಸಂಕ್ಷೇಪಗಳಲ್ಲಿ ಅಧಿಕವಾಗಿ ಬಳಕೆ ಮಾಡುವರು.

**ಉದ್ದೇಶ:**

ವಿಶಾಲ ಮಾಹಿತಿ ಸಮೂಹದಿಂದ ಮುಖ್ಯಾಂಶಗಳನ್ನು ತಿಳಿದುಕೊಳ್ಳುವುದು, ಓದುಗರ ಸಮಯವನ್ನು ಉಳಿಸುವುದು, ಮಾಹಿತಿಯ ಸುಲಭ ಗ್ರಹಣಕ್ಕೆ ನೆರವಾಗುವುದು, ನಿರ್ಧಾರ ಕೈಗೊಳ್ಳುವಲ್ಲಿ ಸಹಾಯಮಾಡುವುದು ಮುಂತಾದವು...

**ಪಠ್ಯ ಸಂಕ್ಷೇಪಣೆಯ ಪ್ರಕಾರಗಳು:**

**1. ಆಹರಣಾತ್ಮಕ ಸಂಕ್ಷೇಪಣೆಯ ವಿಧಾನ** (Extractive Summarization):

ಮೂಲ ಪಠ್ಯದಲ್ಲಿರುವ ಪ್ರಮುಖ ವಾಕ್ಯಗಳನ್ನು ಅಥವಾ ಭಾಗಗಳನ್ನು ಆಯ್ಕೆ ಮಾಡಿ ಸಂಕ್ಷಿಪ್ತ ರೂಪದಲ್ಲಿ ನೀಡಲಾಗುತ್ತದೆ. ಅಂದರೆ, ಮೂಲ ವಾಕ್ಯಗಳ ಆಯ್ಕೆ – ಯಾವುದೇ ಬದಲಾವಣೆ ಇಲ್ಲದೆ ಸಮಾನ ಅರ್ಥವನ್ನು ನೀಡುವ ಕಾರ್ಯವನ್ನು ಮಾಡುತ್ತದೆ.

ಉದಾ:

ಮೂಲ ಲೇಖನ: "ಅತ್ಯಾಧುನಿಕ ತಂತ್ರಜ್ಞಾನದಿಂದ ಶಸ್ತ್ರಚಿಕಿತ್ಸೆ ಸುಲಭವಾಗಿದೆ. ರೋಬೊಟಿಕ್ ಸರ್ಜರಿ ಕೂಡ ಬೆಳೆಯುತ್ತಿದೆ." ಸಾರಾಂಶ: "ಶಸ್ತ್ರಚಿಕಿತ್ಸೆಯಲ್ಲಿ ರೋಬೊಟಿಕ್ ತಂತ್ರಜ್ಞಾನ ಬಳಸಲಾಗುತ್ತಿದೆ."

**2. ಸಾರಾಂಶಾತ್ಮಕ (ಅವತಾರಾತ್ಮಕ) ಸಂಕ್ಷೇಪಣೆಯ ವಿಧಾನ** (Abstractive Summarization):

ಮನುಷ್ಯರು ಲೇಖನ ಓದಿ, ತಾವು ಅರ್ಥಮಾಡಿಕೊಂಡ ರೀತಿಯಲ್ಲಿ ಮೂಲ ಪಠ್ಯವನ್ನು ಓದಿ, ಅದರ ಅರ್ಥವನ್ನು ಗ್ರಹಿಸಿ, ಹೊಸ ವಾಕ್ಯಗಳಲ್ಲಿ ಅರ್ಥಪೂರ್ಣವಾಗಿ

ಪುನರ್–ರಚಿಸಿ ಹೊಸ ಪದಗಳಲ್ಲಿ ಸಾರಾಂಶ ನೀಡುತ್ತದೆ.

**ಉದಾ:**

**ಮೂಲ ಲೇಖನ :** ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ತಂಡ ಚಟುವಟಿಕೆ, ನಾಯಕತ್ವ ಮತ್ತು ಸ್ವಾಭಿಮಾನ ವೃದ್ಧಿಯಾಗುತ್ತದೆ.

**ಸಾರಾಂಶ:** "ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಇಂತಹ ಚಟುವಟಿಕೆಗಳು ಸಹಕಾರಿಯಾಗುತ್ತವೆ. ಇವುಗಳಲ್ಲದೆ

- ♦ ಶಿಕ್ಷಣ ಕ್ಷೇತ್ರದಲ್ಲಿ – ಪಠ್ಯಪುಸ್ತಕದ ಸಾರಾಂಶ, ವಿದ್ಯಾರ್ಥಿಗಳಿಗೆ ಟಿಪ್ಪಣಿಗಳು
- ♦ ಪತ್ರಿಕೋದ್ಯಮ ಕ್ಷೇತ್ರದಲ್ಲಿ – ಸುದ್ದಿ ಪ್ರಬಂಧಗಳ ಶೀರ್ಷಿಕೆ ಹಾಗೂ ಸಾರಾಂಶ
- ♦ ಉದ್ಯಮ ಕ್ಷೇತ್ರದಲ್ಲಿ – ದೊಡ್ಡ ವರದಿಗಳ ತಾತ್ಕಾಲಿಕ ಪಠ್ಯ
- ♦ ಸಂಶೋಧನಾ ಕ್ಷೇತ್ರದಲ್ಲಿ – ಜರ್ನಲ್ ಲೇಖನಗಳ ಶೀರ್ಷಿಕೆ ಹಾಗೂ ಸಾರಾಂಶ
- ♦ ಕಾನೂನು ಕ್ಷೇತ್ರದಲ್ಲಿ – ಕೇಸ್ ಸ್ಟಡಿ ಗಳ ಸಾರಾಂಶ
- ♦ ನಿಜ ಜೀವನದಲ್ಲಿ Abstractive Summarization
- ♦ Google News : ಪ್ರತಿದಿನದ ಸುದ್ದಿಗಳ ಮುಖ್ಯಾಂಶ ಒದಗಿಸುತ್ತದೆ.
- ♦ Scholarcy/Resoomer Tools: ಸಂಶೋಧನಾ ಲೇಖನಗಳ ಸಂಕ್ಷಿಪ್ತ ರೂಪ ತಯಾರಿಸುತ್ತವೆ.
- ♦ YouTube Summary Tools : ವೀಡಿಯೋ ವಿವರಣೆ ಅಥವಾ ಸ್ಪೀಚ್ ಸಮ್ಮೆರೈಸ್ ಮಾಡುತ್ತದೆ.
- ♦ Flipboard App: ಲೇಖನದ ಶೀರ್ಷಿಕೆ ಮತ್ತು ಪ್ರಾರಂಭಿಕ ಭಾಗವನ್ನು ಔಟಿಟಥಿ ಖಣಟಟಚಿಡಿಥಿ ರೂಪದಲ್ಲಿ ನೀಡುತ್ತದೆ.

ಟೆಕ್ಸ್ಟ್–ಸಮ್ಮೆರೈಜೆಷನ್, ನಾವೀಗ ಮಾಹಿತಿಯ ಮಹಾಪೂರದಲ್ಲಿ ತೇಲುತ್ತಿದ್ದಾಗ – ಮುಖ್ಯ ವಿಷಯಗಳನ್ನು ತ್ವರಿತವಾಗಿ ತಿಳಿದುಕೊಳ್ಳಲು ಅತ್ಯಗತ್ಯ ಸಾಧನವಾಗಿದೆ. ಇದು ಓಐಕ ಯ ಒಂದು ಅತ್ಯಂತ ಪ್ರಭಾವಶಾಲಿ ಉಪಯೋಗವಾಗಿದ್ದು, ಪ್ರತಿದಿನವೂ ಹೊಸ ಆಯಾಮಗಳನ್ನು ಪಡೆಯುತ್ತಿದೆ.

2. Machine Learning – ಯಂತ್ರಗಳು ಅನುಭವದಿಂದ ಕಲಿಯುವಿಕೆ

Machine Learning ಎಂದರೆ, ಯಂತ್ರಗಳು (ಕಂಪ್ಯೂಟರ್ಗಳು) ವಿಶಿಷ್ಟವಾಗಿ ಕೊಡುವ ನಿಯಮಗಳು ಇಲ್ಲದೆಯೇ, ಹಿಂದಿನ ಅನುಭವ ಅಥವಾ ಡೇಟಾ ಆಧಾರದ

ಮೇಲೆ ಹೊಸ ಕಾರ್ಯಗಳನ್ನು ಕಲಿಯುವ ಮತ್ತು ನಿರ್ವಹಿಸುವ ಶಕ್ತಿ ಹೊಂದುವುದು. ಇದು ಕೃತಕ ಬುದ್ಧಿಮತ್ತೆ (AI)ಯ ಪ್ರಮುಖ ಭಾಗವಾಗಿದೆ, ಅಲ್ಲಿ ಯಂತ್ರವು ಸ್ವತಃ ನಿರ್ಧಾರ ತೆಗೆದುಕೊಳ್ಳುವುದು ಅಥವಾ ಮಾಡಬೇಕಾದ ಕಾರ್ಯವನ್ನು ಕಲಿಯುತ್ತದೆ. ಮುಖ್ಯ ಉದ್ದೇಶಗಳೆಂದರೆ, ಡೇಟಾ ಆಧಾರಿತ ನಿರ್ಧಾರ ತೆಗೆದುಕೊಳ್ಳುವುದು, ಮನುಷ್ಯರ ಹಸ್ತಕ್ಷೇಪವಿಲ್ಲದೇ ತಾಂತ್ರಿಕ ಕಾರ್ಯಗಳನ್ನು ನಿರ್ವಹಿಸುವುದು, ಭವಿಷ್ಯವಾಣಿಗಳನ್ನು ನೀಡುವುದು (Predictions), ನ್ಯೂನ್ಯತೆಗಲನ್ನು (Error)ಗಳನ್ನು ತಿದ್ದುವುದು.

Machine learning **ಕಾರ್ಯನಿರ್ವಹಿಸುವ ಬಗೆಯನ್ನು ನೋಡುವುದಾದರೆ**

Training Data (**ತರಬೇತಿ ಡೇಟಾ**)**:** ಬಹುಮಾನಿತ, ಶ್ರೇಣೀಕೃತ ಅಥವಾ ಗುಂಪುಗೊಳಿಸಲಾದ ಡೇಟಾವನ್ನು ಬಳಸಲಾಗುತ್ತದೆ.

Model Creation (**ಮಾದರಿ ನಿರ್ಮಾಣ**)**:** ಆ ಡೇಟಾದ ಆಧಾರದ ಮೇಲೆ ಯಂತ್ರ ಕಲಿಯುತ್ತದೆ.

Evaluation (**ಮೌಲ್ಯಮಾಪನ**)**:** ಹೊಸ ಡೇಟಾ ಮೇಲೆ ಪರೀಕ್ಷಿಸಿ, ಯಂತ್ರ ಕಲಿತದ್ದು ಎಷ್ಟು ನಿಖರ ಎಂಬುದನ್ನು ಅಳೆಯಲಾಗುತ್ತದೆ.

Deployment (**ಅನ್ವಯ**)**:** ಕಲಿತ ಮಾದರಿಯನ್ನು ನೈಜ ಪರಿಸ್ಥಿತಿಗೆ ಅನ್ವಯಿಸಿ ಉಪಯೋಗಿಸಲಾಗುತ್ತದೆ.

Machine learning**ನ ಪ್ರಕಾರಗಳು :**

Supervised learning (ಮಾರ್ಗದರ್ಶನ ನೀಡಿದ ಕಲಿಕೆ) : Output-Labels ನೊಂದಿಗೆ ತರಬೇತಿ ನೀಡಲಾಗುತ್ತದೆ. ಉದಾ: ಇಮೇಲ್ "Spam" ಅಥವಾ "Not Spam" ಎಂದು ಗುರುತಿಸುವುದು.

Unsupervised Learning (**ಮಾರ್ಗದರ್ಶನವಿಲ್ಲದ ಕಲಿಕೆ**) **:** ಯಂತ್ರಕ್ಕೆ ಉತ್ತರ ನೀಡಲಾಗುವುದಿಲ್ಲ. ಅದು ಡೇಟಾದ ಪ್ಯಾಟರ್ನ್ಗಳನ್ನು ತಾನೇ ಹುಡುಕುತ್ತದೆ. ಉದಾ: ಗ್ರಾಹಕರ ಗುಂಪುಗಳ ಪತ್ತೆ (Customer Segmentation).

Reinforcement learning (**ಪ್ರತಿಕ್ರಿಯಾ ಆಧಾರಿತ ಕಲಿಕೆ**)**:** ಯಂತ್ರವು ಪರಿಸ್ಥಿತಿಗಳಲ್ಲಿ ತಾನಾಗಿ ನಿರ್ಧಾರ ತೆಗೆದು, ಉತ್ತಮ ಫಲಿತಾಂಶಕ್ಕಾಗಿ ಕಲಿಯುತ್ತದೆ. ಉದಾ: ಆಟವಾಡುವ ಬಾಟ್ಗಳು, ಸ್ವಯಂಚಾಲಿತ ವಾಹನ.

ಪ್ರಯೋಗ ಕ್ಷೇತ್ರಗಳು ಮತ್ತು ಉದಾಹರಣೆಗಳು

| | ಕ್ಷೇತ್ರ | ಉಪಯೋಗ | ಉದಾ |
|---|---|---|---|
| ✓ | ಮನೋರಂಜನೆ | ವೈಯಕ್ತಿಕ ಶಿಫಾರಸು | Netflix, Spotify |
| ✓ | ಇ-ಕಾಮರ್ಸ್ ಉತ್ಪನ್ನ | ಶಿಫಾರಸು | Amazon, Flipkart |
| ✓ | ಬ್ಯಾಂಕಿಂಗ್ | ವಂಚನೆ ಪತ್ತೆ | Credit Card Fraud Detection |
| ✓ | ಕಾಲ್ ಸೆಂಟರ್ | ಗ್ರಾಹಕರ ಕಣ್ಗಾವಲು | Call Routing System |
| ✓ | ವಾಹನಗಳು | ಸ್ವಯಂಚಾಲಿತ ಚಾಲನೆ | Tesla Autopilot |
| ✓ | ಆರೋಗ್ಯ | ರೋಗ ಪತ್ತೆ | Cancer Diagnosis using ML |
| ✓ | ಇಮೇಲ್ | ಸ್ಪಾಮ್ ಪತ್ತೆ | Gmail Spam Filter |
| ✓ | ಭಾಷಾ ಸಂವಹನ ಭಾಷಾಂತರ | ಧ್ವನಿ ಗುರುತು | Google Translate, Siri |

**ಅಂತರ್ಜಾಲದಲ್ಲಿ ML ಚಟುವಟಿಕೆ ಉದಾ:**

YouTube: ನೀವು ಯಾವ ರೀತಿಯ ವಿಡಿಯೋಗಳು ನೋಡುತ್ತೀರಿ ಎಂಬ ಮಾಹಿತಿಯಿಂದ ಪಾಠ ಕಲಿತು, ಸಮಾನ ವಿಷಯದ ವಿಡಿಯೋ ಶಿಫಾರಸು ಮಾಡುತ್ತದೆ.

Google Maps: ಹಿಂದಿನ ಸಂಚಾರದ ಡೇಟಾದ ಆಧಾರದಲ್ಲಿ ತೀವ್ರತೆ ಊಹಿಸಿ ಮಾರ್ಗವನ್ನು ಸೂಚಿಸುತ್ತದೆ.

Facebook/Instagram: ನಿಮ್ಮ ಇಷ್ಟ ಮತ್ತು ಅಭಿಪ್ರಾಯಗಳ ಆಧಾರದಲ್ಲಿ ಪೋಸ್ಟ್ಗಳನ್ನು ತೋರಿಸುತ್ತದೆ.

Machine Learning ಎನ್ನುವುದು ಡೇಟಾದಿಂದ ಕಲಿಯುವ ಯಂತ್ರಗಳ ತಂತ್ರಜ್ಞಾನ. ಇದು ಇಂದು ಬಹುಪಾಲು ತಂತ್ರಜ್ಞಾನದ ಹಿನ್ನಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೈನಂದಿನ ಜೀವನವನ್ನು ನಿಖರ, ವೈಯಕ್ತಿಕೀಕೃತ ಮತ್ತು ದಕ್ಷಗೊಳಿಸುತ್ತಿದೆ. ಇದು ನಮ್ಮ ಸಮಾಜದ ಬಹು ಕ್ಷೇತ್ರಗಳಲ್ಲಿ ಕ್ರಾಂತಿ ತರಲು ಕಾರಣವಾಗುತ್ತಿರುವ ಅತ್ಯಂತ ಪ್ರಬಲ ಸಾಧನವಾಗಿದೆ.

3. Text Generation & Analysis - ಪಠ್ಯ ನಿರ್ಮಾಣ ಮತ್ತು ವಿಶ್ಲೇಷಣೆ

ಪಠ್ಯ ನಿರ್ಮಾಣ (Text Generation) ಅಂದರೆ ಕಂಪ್ಯೂಟರ್ ಅಥವಾ ಯಂತ್ರವು ಸ್ವತಃ ಪಠ್ಯವನ್ನು ರಚಿಸುವ ಪ್ರಕ್ರಿಯೆ. ಇದು ನಿರ್ದಿಷ್ಟ ಮಾಹಿತಿ ಅಥವಾ ಶೈಲಿಯ ಆಧಾರದ ಮೇಲೆ ನೈಜ ಭಾಷೆಯ ಪಠ್ಯವನ್ನು ತಯಾರಿಸುತ್ತದೆ.

ಪಠ್ಯ ವಿಶ್ಲೇಷಣೆ (Text Analysis) ಅಂದರೆ ಈಗಾಗಲೇ ಇರುವ ಪಠ್ಯವನ್ನು ವಿಶ್ಲೇಷಿಸಿ, ಅದರ ಅರ್ಥ, ಭಾವನೆ, ವಿಷಯದ ಸ್ಪಷ್ಟತೆ, ಅಥವಾ ಯಾವುದೇ ಮಾಹಿತಿಯನ್ನು ತೆಗೆದುಹಾಕುವ ಪ್ರಕ್ರಿಯೆ.

| | ಕ್ಷೇತ್ರ | ಉಪಯೋಗ | ಉದಾ |
|---|---|---|---|
| ✓ | ಮಾಧ್ಯಮ | ಸುದ್ದಿಗಳ ಸಮ್ಮಿಷ್ರಣ | AI-Generated News Summary" |
| ✓ | ಶಿಕ್ಷಣ | ನೈಜ ಭಾಷೆಯ ಉತ್ತರಗಳು | ವಿದ್ಯಾರ್ಥಿಗಳಿಗೆ ಪ್ರಶ್ನೆ–ಉತ್ತರ ರೂಪದಲ್ಲಿ ವಿಷಯ |
| ✓ | ಉದ್ಯಮ | ಇಮೇಲ್ ರಚನೆ, | ವರದಿ ತಯಾರಿಕೆ Auto-Generated Business Reports" |
| ✓ | ಸೃಜನಶೀಲತೆ | ಕಥೆ, ಕವನ,, ಸ್ಕ್ರಿಪ್ಟ್ ರಚನೆ | ಂಖ ಕಥೆ ಬರೆಯುವ ಸಾಧನಗಳು |
| ✓ | ಸಂವಾದ ವ್ಯವಸ್ಥೆ | ಚಾಟ್‌ಬಾಟ್ಗಳು, ಸಹಾಯಗಾರರು | "Hello! How may I help you?" |

**Text Analysis ಬಳಕೆ**

| | ಕ್ಷೇತ್ರ | ಉಪಯೋಗ | ಉದಾ |
|---|---|---|---|
| ✓ | ವ್ಯವಹಾರ | ಗ್ರಾಹಕರ ಅಭಿಪ್ರಾಯ | "Customer review sentiment analysis" |
| ✓ | ಕಾನೂನು | ದಾಖಲೆಗಳ ವಿಶ್ಲೇಷಣೆ | "Contract clause detection" |
| ✓ | ವೈದ್ಯಕೀಯ | ವೈದ್ಯರ ನೋಟ್ ವಿಶ್ಲೇಷಣೆ | "Disease diagnosis from patient notes" |
| ✓ | ಭಾಷಾಶಾಸ್ತ್ರ | ಭಾಷಾ ಮಾದರಿ ಅಧ್ಯಯನ | "Frequency of metaphors in Kannada poetry" |
| ✓ | ಮಾರುಕಟ್ಟೆ | ಸಾಮಾಜಿಕ ಮಾಧ್ಯಮ ವಿಶ್ಲೇಷಣೆ | "Trending topics analysis in Twitter" |

## Text Generation ತಂತ್ರಜ್ಞಾನಗಳು :

GPT (Generative Pre-trained Transformer)

LSTM (Long Short-Term Memory)

Transformer models (BERT, GPT-3, GPT-4…)

RNN (Recurrent Neural Networks)

**ಕನ್ನಡದಲ್ಲಿ ಉಪಯೋಗ:**

ಪಠ್ಯ ರೂಪಾಂತರ: ಮಾತನಾಡಿದ ಮಾತನ್ನು ಪಠ್ಯವನ್ನಾಗಿ ಮಾಡಿ ಲಿಪ್ಯಂತರ.

**ಪಠ್ಯ ಸೃಜನೆ :** 'ಕಥೆ ಬರೆಯುವ ಯಂತ್ರ' ಅಥವಾ 'ಕವನ ತಯಾರಿಸುವ ಸಾಧನ'.

ಪಠ್ಯ ವಿಶ್ಲೇಷಣೆ: ನುಡಿಮುತ್ತುಗಳಲ್ಲಿ ಬರುವ ಭಾವವನ್ನು ಗುರುತಿಸುವುದು.

Text Generation & Analysis ಎಂಬುದು NLPದ ತಂತ್ರಜ್ಞಾನದಲ್ಲಿ ಬಹುಪಾಲು ಪಡೆದಿರುವ ಶಾಖೆಗಳಾಗಿದ್ದು, ಇದು ಸೃಜನಾತ್ಮಕ ಬರವಣಿಗೆ, ಮಾಹಿತಿಯ ಸಂಗ್ರಹ, ಮತ್ತು ವ್ಯವಸ್ಥಿತ ವಿವರಣೆಗೆ ನೆರವಾಗುತ್ತದೆ.

**ಉಪಸಂಹಾರ :**

ಕೃತಕ ಬುದ್ಧಿಮತ್ತೆ ಎನ್ನುವುದು ಕೇವಲ ತಂತ್ರಜ್ಞಾನವಲ್ಲ; ಅದು ನವೋತ್ಸಾಹ, ಹೊಸ ಸಂಶೋಧನೆ, ಮತ್ತು ಸೃಜನಶೀಲತೆಯ ಹೊಸ ಚಟುವಟಿಕೆಗೆ ದಾರಿ ತೆರೆದಿದೆ. ಕನ್ನಡ ಸಾಹಿತ್ಯದ ಪರಂಪರೆಯು ಎಷ್ಟು ಸಮೃದ್ಧವಾಗಿದ್ದರೂ ಸಹ, ಅದನ್ನು ಮುಂದಿನ ಪೀಳಿಗೆಗೆ ತಲುಪಿಸಲು ಆಧುನಿಕ ಸಾಧನೆಗಳ ಅವಶ್ಯಕತೆ ಇರುತ್ತದೆ. ಂಖ ನ ಬಳಕೆಯು

ಈ ಉದ್ದೇಶಕ್ಕೆ ಬಲವರ್ಧಕವಾಗಿ ಪರಿಣಮಿಸಬಹುದಾದರೂ, ನೈತಿಕತೆ, ಸಾಂಸ್ಕೃತಿಕ ಪ್ರಾಮುಖ್ಯತೆ ಮತ್ತು ಮೌಲ್ಯಮಾಪನದ ಎಚ್ಚರಿಕೆಯೂ ಅವಶ್ಯಕವಾಗಿದೆ.

ತಂತ್ರಜ್ಞಾನ ಮತ್ತು ಭಾಷಾ ಪರಂಪರೆಯ ನಡುವೆ ಸಮತೋಲನೆ ಸಾಧಿಸುವಲ್ಲಿ ನಾವು ಯಶಸ್ವಿಯಾಗಿದರೆ ಮಾತ್ರ, ಕೃತಕ ಬುದ್ಧಿಮತ್ತೆಯು ಕನ್ನಡ ಸಾಹಿತ್ಯದ ಪ್ರಗತಿಗೆ ಸತ್ಯವಾದ ಸೇತುವೆಯಾಗಿ ಮಾರ್ಪಡುವ ಸಾಧ್ಯತೆ ಇದೆ. ಈ ಸಂಧರ್ಭದಲ್ಲಿ, ತಂತ್ರಜ್ಞಾನವು ವ್ಯಕ್ತಿಯ ಬುದ್ಧಿವಂತಿಕೆಯ ಆಳವನ್ನೂ, ಸಾಹಿತ್ಯದ ತಾತ್ವಿಕತೆಯ ಶ್ರೇಷ್ಟತೆಯನ್ನೂ ಒಗ್ಗೂಡಿಸಲು ಒಂದು ಅಮೂಲ್ಯ ಸಾಧನಗಳಾಗಿ ಪರಿಣಮಿಸಬಹುದು.

**ಆಕರ ಗ್ರಂಥಗಳು:**

1. ಡಾ. ಎಂ. ಎಸ್. ಲಕ್ಷ್ಮೀಕಾಂತ್: ಕೃತಕ ಬುದ್ಧಿಮತ್ತೆ ಮತ್ತು ಭಾಷಾ ತಂತ್ರಜ್ಞಾನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

2. ಡಾ. ಎನ್. ಶ್ರೀನಿವಾಸ್ ನಾಯಕ್: ಭಾಷಾ ಗಣಕಶಾಸ್ತ್ರ : ಕನ್ನಡದಲ್ಲಿ NLP, ಪ್ರಕಾಶಕರು: ಕನ್ನಡ ವಿಶ್ವವಿದ್ಯಾಲಯ, ಹಂಪಿ

3. Editors from IIIT Hyderabad NLP Group., Introduction to Artificial Intelligence in Indian Languages

4. AI4Bharat – Kannada NLP Datasets- Website: https://ai4bharat.org

5. Kannada Wikisource., Project Madurai (for classical texts), NLP models in Kannada

6. IIIT-Hyderabad Language Technologies Research Centre (LTRC).,Kannada POS Tagger, Morph Analyzer tools

7. CLTK (Classical Language Toolkit)., focused on Sanskrit/ Pali, Kannada modules under development

**ಡಾ. ಸಂತೋಷ್ ಕುಮಾರ್ ಆರ್ ಎಂ.**
ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಸಂತ ಫ್ರಾನ್ಸಿಸ್ ಕಾಲೇಜು,
ಕೋರಮಂಗಲ, ಬೆಂಗಳೂರು–560034.

# ಕನ್ನಡ ಸಾಹಿತ್ಯದ ಕಾವ್ಯ ಪರಂಪರೆ ನಡೆದು ಬಂದ ದಾರಿ ಅದರ ಗತಿಬಿಂಬ

¤ ಮನೋಜ್.ಎಂ ¤ ಡಾ. ರಾಜೇಶ್ ಬೆಜ್ಜಂಗಳ

ಭಾಷೆಯ ಹುಟ್ಟು ಮಾನವ ವಿಕಾಸದಲ್ಲಿ ಮಹತ್ವದ ಮೈಲಿಗಲ್ಲು. ಶಿಲ್ಪಕಲೆ, ಸಂಗೀತ, ನೃತ್ಯ, ದೃಶ್ಯ ಕಲೆಗಳು ಮತ್ತು ಸಾಹಿತ್ಯ ಸೇರಿದಂತೆ ವಿವಿಧ ಕಲಾತ್ಮಕ ಅಭಿವ್ಯಕ್ತಿಗಳ ಮೂಲಕ ತಮ್ಮ ಅನುಭವಗಳ ಸಂಕೀರ್ಣತೆಯನ್ನು ವ್ಯಕ್ತಪಡಿಸಲು ಇದು ವ್ಯಕ್ತಿಗಳಿಗೆ ಅನುವು ಮಾಡಿಕೊಟ್ಟಿತು. ಸಾಹಿತ್ಯ, ನಿರ್ದಿಷ್ಟವಾಗಿ, ಅಭಿವ್ಯಕ್ತಿಗೆ ಪ್ರಬಲವಾದ ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ಸಾಹಿತ್ಯವು ಜೀವನವನ್ನು ಪ್ರತಿಬಿಂಬಿಸುತ್ತದೆ, ಮಾನವ ಅನುಭವಗಳ ಪ್ರತಿಬಿಂಬವಾಗಿ ಕಾರ್ಯನಿರ್ವಹಿಸುತ್ತದೆ ಎಂದು ವಿದ್ವಾಂಸರು ಗಮನಿಸಿದ್ದಾರೆ.

ಜೀವನವು ಚಲನಶೀಲವಾಗಿದೆ, ಹರಿಯುವ ನದಿಗೆ ಹೋಲುತ್ತದೆ, ಮತ್ತು ಸಾಹಿತ್ಯವು ಈ ನಿರಂತರವಾದ ಅಸ್ತಿತ್ವದ ಹರಿವನ್ನು ಸಾಕಾರಗೊಳಿಸುತ್ತದೆ, ನಿರಂತರವಾಗಿ ವಿಕಸನಗೊಳ್ಳುತ್ತದೆ ಮತ್ತು ತನ್ನನ್ನು ನವೀಕರಿಸುತ್ತದೆ. ಮಾನವನ ಮನಸ್ಸು ಜೀವನದ ಬದಲಾವಣೆಗಳು ಮತ್ತು ಬದಲಾವಣೆಗಳಿಗೆ ಹೊಂದಿಕೊಳ್ಳುತ್ತದೆ, ಸಾಹಿತ್ಯ ಇತಿಹಾಸವು ಹಂತಗಳಲ್ಲಿ ಬೆಳವಣಿಗೆಯಾಗುತ್ತದೆ. ಈ ವಿಕಸನವು ನಿರ್ದಿಷ್ಟ ಅವಧಿಗಳ ಸಾಹಿತ್ಯಿಕ ಸಾಧನೆಗಳನ್ನು ಮಾತ್ರವಲ್ಲದೆ ಸಮಾಜದ ಸಾಂಸ್ಕೃತಿಕ ಇತಿಹಾಸವನ್ನು ಬೆಳಗಿಸುತ್ತದೆ, ವಿಭಿನ್ನ ಯುಗಗಳ ಬದಲಾಗುತ್ತಿರುವ ಮನಸ್ಥಿತಿಗಳನ್ನು ಬಹಿರಂಗಪಡಿಸುತ್ತದೆ.ಪ್ರತಿಯೊಂದು ಭಾಷೆಯು ತನ್ನದೇ ಆದ ವಿಶಿಷ್ಟ ಸಾಹಿತ್ಯಿಕ ಪರಂಪರೆಯನ್ನು ಹೊಂದಿದೆ ಮತ್ತು ಕನ್ನಡವು ಈ ನಿಯಮಕ್ಕೆ ಹೊರತಾಗಿಲ್ಲ. ಮಹಾಭಾರತ, ರಾಮಾಯಣ ಮತ್ತು ಪುರಾಣಗಳಂತಹ ಪ್ರಾಚೀನ ಗ್ರಂಥಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಮೂಲವನ್ನು ಪತ್ತೆ ಹಚ್ಚಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ನಂತರದ ಅವಧಿಗಳಲ್ಲಿ, ಕಲ್ಪರಾಹಗಳು ಈ ಸಾಹಿತ್ಯಿಕ ಪ್ರಯಾಣದ

ನಿರಂತರ ದಾಖಲೆಗಳಾಗಿ ಕಾರ್ಯನಿರ್ವಹಿಸುತ್ತವೆ. ಚಕ್ರವರ್ತಿ ಅಶೋಕನ ಆಳ್ವಿಕೆಯ ಕಾಲದ ಕ್ರಿಸ್ತಪೂರ್ವ 3ನೇ ಶತಮಾನದ ಶಾಸನಗಳನ್ನು ಆರಂಭಿಕ ಕನ್ನಡ ಭಾಷೆಗೆ ಜೋಡಿಸಲು ಕೆಲವರು ಪ್ರಯತ್ನಿಸಿದರೆ, ಕ್ರಿ.ಶ 5ನೇ ಶತಮಾನದಿಂದ ಹಲ್ಮಿಡಿ ಕಲ್ಬರಹದಲ್ಲಿ ಆರಂಭಿಕ ಖಚಿತವಾದ ಪುರಾವೆಗಳು ಕಂಡುಬರುತ್ತವೆ. ಈ ಶಾಸನವನ್ನು ಅಡಿಪಾಯದ ಉಲ್ಲೇಖವಾಗಿ ತೆಗೆದುಕೊಂಡರೂ ಸಹ, ಕನ್ನಡ ಸಾಹಿತ್ಯವು ಸುಮಾರು ಹದಿನಾರು ನೂರು ವರ್ಷಗಳ ಕಾಲ ಶ್ರೀಮಂತ ಇತಿಹಾಸವನ್ನು ಹೊಂದಿದೆ ಎಂದು ಸೂಚಿಸುತ್ತದೆ, ಇದು ಸಮಯ, ಭೌಗೋಳಿಕತೆ, ಪರಿಸರ ಮತ್ತು ಸಾಮಾಜಿಕ ಅಗತ್ಯಗಳಂತಹ ವಿವಿಧ ಅಂಶಗಳಿಗೆ ಪ್ರತಿಕ್ರಿಯೆಯಾಗಿ ವಿಕಸನಗೊಳ್ಳುತ್ತದೆ. ಈ ಸಾಹಿತ್ಯಿಕ ವಿಕಾಸವನ್ನು ಕವಿ, ಐತಿಹಾಸಿಕ ಅವಧಿ, ಧಾರ್ಮಿಕ ಪ್ರಭಾವಗಳು, ಸೌಂದರ್ಯದ ಆದ್ಯತೆಗಳು ಮತ್ತು ಭಾಷಾ ಗುಣಲಕ್ಷಣಗಳನ್ನು ಒಳಗೊಂಡಂತೆ ಮಾನದಂಡಗಳ ಆಧಾರದ ಮೇಲೆ ಹಳೆಗನ್ನಡ, ನಡುನ್ನಡ ಮತ್ತು ಹೊಸಗನ್ನಡ ಎಂದು ವರ್ಗೀಕರಿಸಲಾಗಿದೆ.

ಹಲ್ಮಿಡಿ ಶಾಸನವು ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ದಾಖಲೆಯಾಗಿ ನಿಂತಿದೆ, ಭಾಷೆಯಲ್ಲಿ ತಿಳಿದಿರುವ ಅತ್ಯಂತ ಪ್ರಾಚೀನ ಶಾಸನವನ್ನು ಗುರುತಿಸುತ್ತದೆ ಮತ್ತು ದತ್ತಿ ವಿಷಯಗಳ ಮೇಲೆ ಕೇಂದ್ರೀಕರಿಸಿ ಕದಂಬ ರಾಜವಂಶದ ಕಾಕುಸ್ತವರ್ಮನ ಐತಿಹಾಸಿಕ ದಾಖಲೆಯನ್ನು ಒದಗಿಸುತ್ತದೆ. ತರುವಾಯ, ಶ್ರವಣಬೆಳಗೊಳದ ಶಾಸನವು 'ನಂದಿಸೇನ' ಎಂಬ ಹೆಸರಿನ ಆಕೃತಿಯನ್ನು ಪರಿಚಯಿಸುತ್ತದೆ, ಜೀವನದ ಕ್ಷಣಿಕ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ, ಅದನ್ನು ಮಳೆಬಿಲ್ಲು ಅಥವಾ ಮಿಂಚಿನ ಹೊಳಪಿಗೆ ಹೋಲಿಸುತ್ತದೆ. ಕ್ರಿಶ 7ನೇ ಶತಮಾನವು ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಮಹತ್ವದ ಯುಗವಾಗಿ ಹೊರಹೊಮ್ಮುತ್ತದೆ, ಇದು ಗೌರವಾನ್ವಿತ ವ್ಯಕ್ತಿ ಕಪ್ಪೆ ಅರಭಟ್ಟನನ್ನು ಚಿತ್ರಿಸುವ ಬಾದಾಮಿ ಶಾಸನದಿಂದ ಎತ್ತಿತೋರಿಸುತ್ತದೆ. ಈ ಶಾಸನವು ಹೆಚ್ಚುವರಿ ಸಾಹಿತ್ಯಿಕ ಪ್ರಾಮುಖ್ಯತೆಯನ್ನು ಹೊಂದಿದೆ ಏಕೆಂದರೆ ಇದು ತ್ರಿಪದಿಯ ಮೊದಲ ದಾಖಲಿತ ಬಳಕೆಯನ್ನು ಗುರುತಿಸುತ್ತದೆ, ಇದು ಕಾವ್ಯದ ರೂಪವಾಗಿದ್ದು ನಂತರ ಪ್ರಚಲಿತವಾಯಿತು. ಕೇವಲ ಕಪ್ಪೆ ಅರಭಟ್ಟರನ್ನು ಚಿತ್ರಿಸುವುದರ ಹೊರತಾಗಿ, ಇದು ಆ ಅವಧಿಯಲ್ಲಿ ಕನ್ನಡಿಗರ ಉದಾತ್ತ ಜೀವನವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿ ಕಾರ್ಯನಿರ್ವಹಿಸುತ್ತದೆ.

ಕನ್ನಡ ಸಾಹಿತ್ಯ ಸಂಪ್ರದಾಯದೊಳಗೆ ತಿಳಿದಿರುವ ಅತ್ಯಂತ ಹಳೆಯ ಕೃತಿ 'ಕವಿರಾಜಮಾರ್ಗ', ಇದನ್ನು 9ನೇ ಶತಮಾನದಲ್ಲಿ ರಾಷ್ಟ್ರಕೂಟ ರಾಜವಂಶದ ಅಡಿಯಲ್ಲಿ ನೃಪತುಂಗನ ಆಸ್ಥಾನಕ್ಕೆ ಸಂಬಂಧಿಸಿದ ಕವಿ ಶ್ರೀವಿಜಯ ಬರೆದಿದ್ದಾರೆ. ಈ ಮೂಲ ಪಠ್ಯವು ಹಲವಾರು ಆರಂಭಿಕ ಕವಿಗಳು ಮತ್ತು ಗದ್ಯ ಬರಹಗಾರರನ್ನು ದಾಖಲಿಸುವ

ಮೂಲಕ ಕನ್ನಡ ಸಾಹಿತ್ಯದ ಇತಿಹಾಸದ ಅಧ್ಯಯನಕ್ಕೆ ಗಣನೀಯ ಕೊಡುಗೆ ನೀಡಿದೆ. ಇದಲ್ಲದೆ, 'ಕವಿರಾಜಮಾರ್ಗ' ಕನ್ನಡ ಮಾತನಾಡುವ ಪ್ರದೇಶದ ಭೌಗೋಳಿಕ ಗಡಿಗಳನ್ನು ವಿವರಿಸುತ್ತದೆ, ಇದು "ಕಾವೇರಿಯಿಂದ ಗೋದಾವರಿ ನದಿಯವರೆಗೆ" ವಿಸ್ತರಿಸುತ್ತದೆ. ಇದು ಕನ್ನಡ ಜನತೆಯನ್ನು ಉತ್ತಮ ಸ್ವಭಾವದ, ಕಾವ್ಯಾತ್ಮಕ, ಕಲಾತ್ಮಕವಾಗಿ ಹಿತಕರವಾದ, ಸದ್ಗುಣಶೀಲ ಮತ್ತು ಕಾವ್ಯ ಪ್ರಯೋಗದಲ್ಲಿ ನುರಿತ ಸೇರಿದಂತೆ ಪ್ರಶಂಸನೀಯ ಲಕ್ಷಣಗಳನ್ನು ಹೊಂದಿದೆ ಎಂದು ನಿರೂಪಿಸುತ್ತದೆ. ಪಠ್ಯವು ವೈವಿಧ್ಯಮಯ ಧಾರ್ಮಿಕ ವಿಚಾರಗಳನ್ನು ನಿಜವಾದ ನಂಬಿಕೆಯ ವಿಶಿಷ್ಟ ಲಕ್ಷಣವಾಗಿ ಸ್ವೀಕರಿಸಲು ಪ್ರತಿಪಾದಿಸುತ್ತದೆ. ಆ ಮೂಲಕ ಸಹಬಾಳ್ವೆ, ಸಹೋದರತ್ವ, ಸಹಯೋಗ ಮತ್ತು ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ಒತ್ತಿಹೇಳುವ ಕನ್ನಡ ಕಾವ್ಯಕ್ಕೆ ದೃಢವಾದ ಅಡಿಪಾಯವನ್ನು ಸ್ಥಾಪಿಸುತ್ತದೆ. ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಮಹತ್ವದ ಕೊಡುಗೆ ಎಂದರೆ 'ವಡ್ಡಾರಾಧನೆ', ಇದು ಭಾಷೆಯ ಮೊದಲ ಗದ್ಯ ಕೃತಿ ಎಂದು ಗುರುತಿಸಲ್ಪಟ್ಟಿದೆ. ಈ ಪಠ್ಯವು ಅದರ ನಿರೂಪಣೆಯ ಕಲಾತ್ಮಕತೆಗೆ ಮಾತ್ರವಲ್ಲದೆ ಕಥೆ ಹೇಳುವ ಮೂಲಕ ಜೈನ ತತ್ವಗಳನ್ನು ತಿಳಿಸುವ ಪಾತ್ರಕ್ಕಾಗಿಯೂ ಗಮನಾರ್ಹವಾಗಿದೆ. ಶಿವಕೋಟಾಚಾರದಿಂದ ರಚಿಸಲ್ಪಟ್ಟ, 'ವಡ್ಡಾರಾಧನೆ' 19 ಕಥೆಗಳ ಸಂಗ್ರಹವನ್ನು ಒಳಗೊಂಡಿದೆ, ಅದು ಸತ್ಯತೆ, ಅಹಿಂಸೆ, ನಿರ್ಲಿಪ್ತತೆ, ಸ್ಥಿತಿಸ್ಥಾಪಕತ್ವ, ಏಕಾಗ್ರತೆ ಮತ್ತು ನ್ಯಾಯ ಮತ್ತು ಸದಾಚಾರದ ಅನುಸರಣೆಯಂತಹ ಮಾನವ ಸದ್ಗುಣಗಳನ್ನು ಅನ್ವೇಷಿಸುತ್ತದೆ.

10ನೇ ಶತಮಾನವನ್ನು ಸಾಮಾನ್ಯವಾಗಿ ಕನ್ನಡ ಸಾಹಿತ್ಯದ ಸುವರ್ಣ ಯುಗ ಎಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ, ಸಾಹಿತ್ಯವು ಸಂಸ್ಕೃತದಿಂದ ಹೆಚ್ಚು ಪ್ರಭಾವಿತವಾಯಿತು, ಇದು ಸಂಸ್ಕೃತ ಸಂಪ್ರದಾಯಗಳಿಂದ ಪಡೆದ 'ಮಾರ್ಗ' ಶೈಲಿಯಲ್ಲಿ ಕೃತಿಗಳ ಹೊರಹೊಮ್ಮುವಿಕೆಗೆ ಕಾರಣವಾಯಿತು. ಈ ಯುಗದ ಅನೇಕ ಕವಿಗಳು ಜೈನ ಧರ್ಮದೊಂದಿಗೆ ಸಂಬಂಧ ಹೊಂದಿದ್ದರು ಮತ್ತು ಪಂಪನ (ಗುಣವರ್ಮ–1) ಕಾಲಕ್ಕೆ ಮುಂಚಿತವಾಗಿ ಸ್ಥಾಪಿಸಲಾದ ಆಗಮಿಕ ಮತ್ತು ಲೌಕಿಕಗಳ ಕಾವ್ಯದ ರೂಪಗಳಿಗೆ ಬದ್ಧರಾಗಿದ್ದರು. ಆಗಮಿಕ ಕಾವ್ಯವು ವಿಶಿಷ್ಟವಾಗಿ ಜೈನ ತೀರ್ಥಂಕರರು, ಚಕ್ರವರ್ತಿಗಳು ಮತ್ತು ಗಮನಾರ್ಹ ವ್ಯಕ್ತಿಗಳ ಜೀವನದ ಮೇಲೆ ಕೇಂದ್ರೀಕರಿಸಿದೆ, ಆದರೆ ಲೌಕಿಕ ಕಾವ್ಯವು ಪೋಷಕ ರಾಜ, ಸಮಕಾಲೀನ ರಾಜಕೀಯ ಮತ್ತು ಮಹಾಭಾರತ ಮತ್ತು ರಾಮಾಯಣದಂತಹ ಮಹಾಕಾವ್ಯದ ನಿರೂಪಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೋಧಿಸಿತು.

ಈ ಸಂಯೋಜನೆಗಳನ್ನು ಪಾಂಡಿತ್ಯಪೂರ್ಣ ಆಳ ಮತ್ತು ಲಯಬದ್ಧ

ರಚನೆಯಿಂದ ನಿರೂಪಿಸಲಾಗಿದೆ, ಈ ಶತಮಾನದಲ್ಲಿ ಚಂಪೂ ರೂಪವು ಅದರ ಉತ್ತುಂಗವನ್ನು ತಲುಪಿತು. ಈ ಸಮಯದ ಕವಿಗಳು ಧಾರ್ಮಿಕ ವಿಷಯಗಳನ್ನು ಕಾವ್ಯಾತ್ಮಕ ಅಭಿವ್ಯಕ್ತಿಯೊಂದಿಗೆ ಕೌಶಲ್ಯದಿಂದ ಹೆಣೆದುಕೊಂಡರು, ಅವರ ಯುಗದ ಪ್ರತಿಬಿಂಬಿಸುವ ವೀರರ ಆದರ್ಶಗಳನ್ನು ಉತ್ತೇಜಿಸಿದರು.

ಕನ್ನಡ ಸಾಹಿತ್ಯದ ಮೊದಲ ಶ್ರೇಷ್ಠ ಕವಿ ಎಂದು ಪರಿಗಣಿಸಲ್ಪಟ್ಟ ಪಂಪ 10ನೇ ಶತಮಾನದ ಪ್ರಮುಖ ವ್ಯಕ್ತಿಯಾಗಿ ನಿಲ್ಲುತ್ತಾನೆ. ಅವರ ಸಾಹಿತ್ಯಿಕ ಕೊಡುಗೆಗಳು ಅನೇಕ ನಂತರದ ಜೈನ ಕವಿಗಳು ಅನುಸರಿಸುವ ಒಂದು ಪೂರ್ವನಿದರ್ಶನವನ್ನು ಸ್ಥಾಪಿಸಿದವು. ಅವರ ಗಮನಾರ್ಹ ಕೃತಿಗಳಲ್ಲಿ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಕಾವ್ಯಗಳು ಸೇರಿವೆ. ಆದಿಪುರಾಣವನ್ನು ಪಂಪ ಆಗಮಿಕ ಎಂದು ವರ್ಗೀಕರಿಸಲಾಗಿದೆ, ಮೊದಲ ತೀರ್ಥಂಕರ ಆದಿನಾಥ ಮತ್ತು ಮೊದಲ ಚಕ್ರವರ್ತಿ ಭರತನ ನಿರೂಪಣೆಗಳನ್ನು ಕೇಂದ್ರೀಕರಿಸುತ್ತದೆ. ಆದಿನಾಥನ ಕಥೆಯು ಬಯಕೆಯ ತ್ಯಜಿಸುವಿಕೆಯನ್ನು ಒತ್ತಿಹೇಳುತ್ತದೆ, ಆದರೆ ಭರತನ ಕಥೆಯು ಅಹಂಕಾರವನ್ನು ತ್ಯಜಿಸುವುದನ್ನು ಎತ್ತಿ ತೋರಿಸುತ್ತದೆ. ಪಂಪ ಭಾರತ ಎಂದೂ ಕರೆಯಲ್ಪಡುವ ವಿಕ್ರಮಾರ್ಜುನ ವಿಜಯವು ವ್ಯಾಸನ ಮಹಾಭಾರತವನ್ನು ಪಂಪ ಕನ್ನಡಕ್ಕೆ ಅಳವಡಿಸಿಕೊಂಡಿರುವುದನ್ನು ಪ್ರತಿನಿಧಿಸುತ್ತದೆ. ಈ ಕೃತಿಯಲ್ಲಿ, ಅವನು ನಾಯಕ ಅರ್ಜುನ ಮತ್ತು ಅವನ ಪೋಷಕ ಅರಿಕೇಸರಿಯ ನಡುವಿನ ಸಮಾನಾಂತರಗಳನ್ನು ಚಿತ್ರಿಸುತ್ತಾನೆ, ಆದರೆ ಅವನ ಸಮಯದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಾನೆ.

ಕನ್ನಡ ಸಾಹಿತ್ಯದ ಮೇಲೆ ಪಂಪನ ಪ್ರಭಾವ ಗಾಢವಾಗಿದೆ, ಅವರು ಮುಂದಿನ ಪೀಳಿಗೆಯ ಕವಿಗಳಿಗೆ ದಾರಿ ಮಾಡಿಕೊಟ್ಟರು. ನಿರೂಪಣೆ ಮತ್ತು ಸನ್ನಿವೇಶವನ್ನು ಸಂಯೋಜಿಸುವ ಅವರ ಸಾಮರ್ಥ್ಯವನ್ನು ಆನೆಯು ಕಾಡಿನ ಮೂಲಕ ಹಾದಿಯನ್ನು ಮುನ್ನುಗ್ಗುವಂತೆ ಹೋಲಿಸಲಾಗಿದೆ. ಈ ರೂಪಕವು ಅವರ ಕೊಡುಗೆಗಳ ಮಹತ್ವವನ್ನು ಒತ್ತಿಹೇಳುತ್ತದೆ, ಕವಿ ನಾಗರಾಜನು "ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ" ಎಂದು ಪ್ರತಿಪಾದಿಸಲು ಕಾರಣವಾಯಿತು, ಸಾಹಿತ್ಯ ಪರಂಪರೆಯಲ್ಲಿ ಪಂಪನ ಗೌರವಾನ್ವಿತ ಸ್ಥಾನಮಾನವನ್ನು ಎತ್ತಿ ತೋರಿಸುತ್ತದೆ. ಪಂಪ ತನ್ನ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಲ್ಲದೆ, ಮುಂಬರುವ ಶತಮಾನಗಳವರೆಗೆ ಪ್ರತಿಧ್ವನಿಸುವ ಸಾಂಸ್ಕೃತಿಕ ಮತ್ತು ವೀರರ ವಿಷಯಗಳ ಪರಿಶೋಧನೆಗೆ ಚೌಕಟ್ಟನ್ನು ಸ್ಥಾಪಿಸಿದನು. ಪಂಪ ಕನ್ನಡ ಸಾಹಿತ್ಯದಲ್ಲಿ ಮಹತ್ವದ ತಳಹದಿಯನ್ನು ಹಾಕಿದ, ನಂತರ ಗೌರವಾನ್ವಿತ ಕವಿ ಪೊನ್ನ, ರನ್ನನ ಜೊತೆಯಲ್ಲಿ ಕನ್ನಡ ಕಾವ್ಯದ ಮೂರು ರತ್ನಗಳೆಂದು ಕೊಂಡಾಡುತ್ತಾರೆ. ರನ್ನ ಮತ್ತು ಜನ್ನನ

ಜೊತೆಯಲ್ಲಿ ಕವಿ ಚಕ್ರವರ್ತಿಗಳಲ್ಲಿ ಒಬ್ಬನೆಂದು ಗುರುತಿಸಲ್ಪಟ್ಟ ಪೊನ್ನ, ರಾಷ್ಟ್ರಕೂಟರ ಮೂರನೇ ಆಡಳಿತಗಾರನಾದ ಅವನ ಪೋಷಕ 3ನೇ ಕೃಷ್ಣ ಪೊನ್ನನಿಂದ ನಿಯೋಜಿಸಲ್ಪಟ್ಟ ಶಾಂತಿಪುರಾಣ ಎಂಬ ಧಾರ್ಮಿಕ ಕಾರ್ಯಕ್ಕೆ ಹೆಸರುವಾಸಿಯಾಗಿದ್ದಾನೆ. ಈ ಕಾವ್ಯವು 16ನೇ ತೀರ್ಥಂಕರನಾದ ಶಾಂತಿನಾಥನ ಜೀವನವನ್ನು ನಿರೂಪಿಸುತ್ತದೆ ಮತ್ತು ಆಶ್ವಾಸಗಳು ಎಂದು ಕರೆಯಲ್ಪಡುವ ಹನ್ನೆರಡು ವಿಭಾಗಗಳಾಗಿ ರಚನೆಯಾಗಿದೆ. ಅತ್ತಿಮಬ್ಬೆ ಶಾಂತಿಪುರಾಣದ ಸಾವಿರ ಪ್ರತಿಗಳ ನಿರ್ಮಾಣಕ್ಕೆ ಅನುಕೂಲ ಮಾಡಿಕೊಟ್ಟಿದ್ದು ಗಮನಾರ್ಹ. ಹೆಚ್ಚುವರಿಯಾಗಿ, ಪೊನ್ನನು ರಾಮನ ಕಥೆಯನ್ನು ವಿವರಿಸುವ ಭುವನೈಕ ರಾಮಾಭ್ಯುದಯ ಎಂಬ ಜಾತ್ಯತೀತ ಕವಿತೆಯನ್ನು ಬರೆದನು ಮತ್ತು ಅವನಿಗೆ 'ಕುರುಗ್ಗಲ ಸವನ' ಎಂಬ ಬಿರುದನ್ನು ಗಳಿಸಿದನು. ಅವರು ಕನ್ನಡ ಕಾವ್ಯದ ಅನನ್ಯತೆಯನ್ನು ಧೈರ್ಯದಿಂದ ಪ್ರತಿಪಾದಿಸುತ್ತಾರೆ, ಅದರ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಅಪ್ರತಿಮವಾಗಿದೆ.

10ನೇ ಶತಮಾನದ ಒಬ್ಬ ಪ್ರಸಿದ್ಧ ಕವಿ ರನ್ನ ಅವರು ತಮ್ಮ ಅಜಿತ ತೀರ್ಥಂಕರ ಪುರಾಣದೊಂದಿಗೆ ಧಾರ್ಮಿಕ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ, ಇದು ಎರಡನೇ ಜೈನ ತೀರ್ಥಂಕರ, ಅಜಿತಸ್ವಾಮಿ ಮತ್ತು ಎರಡನೇ ಚಕ್ರವರ್ತಿ ಸಾಗರದ ಜೀವನವನ್ನು ವಿವರಿಸುವ ಹದಿನಾಲ್ಕು ಆಶ್ವಾಸಗಳ ಪದ್ಯಗಳನ್ನು ಒಳಗೊಂಡಿದೆ. ಅವರ ಜಾತ್ಯತೀತ ಕೃತಿ, 'ಸಾಹಸ ಭೀಮ ವಿಜಯಂ' ಅಥವಾ ಗದಾಯುದ್ಧ, ವ್ಯಾಸನ ಭಾರತದಿಂದ ಗದಾಸೌಪ್ತಿಕ ಪರ್ವವನ್ನು ಮರುವ್ಯಾಖ್ಯಾನಿಸುತ್ತದೆ, ಸಾಹಿತ್ಯಿಕ ಸೊಬಗನ್ನು ತುಂಬುತ್ತದೆ. ಇದು ಪಂಪನ 'ವಿಕ್ರಮಾರ್ಜುನವಿಜಯ,' ಭಾಸರ 'ಊರುಭಂಗ', ಮತ್ತು ಭಟ್ಟನಾರಾಯಣನ 'ವೇಣಿಸಂಹಾರ'ದಿಂದ ಸ್ಫೂರ್ತಿ ಪಡೆದರೆ, ರನ್ನನ ನಿರೂಪಣೆಯು ಗಮನಾರ್ಹವಾದ ಅತ್ಯಾಧುನಿಕತೆಯನ್ನು ಸಾಧಿಸುತ್ತದೆ. ಚಾಲುಕ್ಯ ಚಕ್ರವರ್ತಿಯಿಂದ ನಿಯೋಜಿಸಲ್ಪಟ್ಟ ಕವಿತೆ, ಭೀಮನನ್ನು ಕೇಂದ್ರ ನಾಯಕನಾಗಿ ಚಿತ್ರಿಸುತ್ತದೆ, ಅವನನ್ನು ಸತ್ಯಾಶ್ರಯದೊಂದಿಗೆ ಸಮೀಕರಿಸುತ್ತದೆ ಮತ್ತು ರನ್ನ ತನ್ನ ಕಾವ್ಯದ ಅಪ್ರತಿಮ ಗುಣಮಟ್ಟವನ್ನು ಪ್ರತಿಪಾದಿಸುವ ಮೂಲಕ ವಿಮರ್ಶಕರಿಗೆ ಸವಾಲು ಹಾಕುತ್ತಾನೆ, ಅದನ್ನು ಅಮೂಲ್ಯವಾದ ರತ್ನಕ್ಕೆ ಹೋಲಿಸುತ್ತಾನೆ. 'ಸಿಂಹಾಲೋಕನ ಕ್ರಮ' ಎಂಬ ಅವರ ಕಲಾತ್ಮಕ ವಿಧಾನವು ನಾಟಕೀಯ ಅಂಶಗಳನ್ನು ಪ್ರದರ್ಶಿಸುವುದಲ್ಲದೆ, ದುರ್ಯೋಧನನನ್ನು ನಿರೂಪಣೆಯೊಳಗೆ ಸುಯೋಧನ ಎಂದು ಮರು ವ್ಯಾಖ್ಯಾನಿಸುತ್ತದೆ. ಚಾವುಂಡರಾಯ ಗಂಗ ರಾಜವಂಶದ ರಾಜ ರಾಚಮಲ್ಲನ ಅಡಿಯಲ್ಲಿ ಮಂತ್ರಿ ಮತ್ತು ಸೇನಾಪತಿಯಾಗಿ ಸೇವೆ ಸಲ್ಲಿಸಿದ. ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರನ 57 ಅಡಿಯ ಆಕರ್ಷಕ ಪ್ರತಿಮೆಯನ್ನು ಸ್ಥಾಪಿಸಲು ಅವರು

ಪ್ರಸಿದ್ಧರಾಗಿದ್ದಾರೆ. ಅವರ ಸಾಹಿತ್ಯಿಕ ಕೊಡುಗೆ, ಚಾವುಂಡರಾಯ ಪುರಾಣವು 24 ತೀರ್ಥಂಕರರು ಮತ್ತು 63 ಶಲಕಪುರುಷರ ಜೀವನವನ್ನು ನಿರೂಪಿಸುವ ಗದ್ಯ ನಿರೂಪಣೆಯಾಗಿದೆ. ಈ ಕೃತಿಯನ್ನು 'ತ್ರಿಷಷ್ಟಿ ಲಕ್ಷಣ ಮಹಾಪುರಾಣಂ' ಎಂದೂ ಉಲ್ಲೇಖಿಸಲಾಗಿದೆ ಮತ್ತು ಇದರ ಸಾರವನ್ನು ಮೂರು ಪದಗಳಲ್ಲಿ ಅಡಕಗೊಳಿಸಲಾಗಿದೆ: 'ಗಂಭೀ, ಧಾರಾಳ, ಚೊಕ್ಕಟ,' ಎಂದು ರಾಮ್.ಶ್ರೀ ಅವರು ಗಮನಿಸಿದ್ದಾರೆ.

ನಾಗವರ್ಮನ ಜೊತೆಗಿನ ಮೊದಲ ಛಂದೋಂಬುಧಿ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಮೈಲಿಗಲ್ಲು. 'ಛಂದೋಂಬುಧಿ' ಎಂಬ ಶೀರ್ಷಿಕೆಯ ಈ ಕೃತಿಯು ಕನ್ನಡ ಭಾಷೆಯಲ್ಲಿ ಚೊಚ್ಚಲ ಛಂದೋಂಬುಧಿ ಎಂದು ಗುರುತಿಸಲ್ಪಟ್ಟಿದೆ ಮತ್ತು ಬಾಣನ ಸಂಸ್ಕೃತ ಕಾದಂಬರಿಯ ಅನುವಾದವಾಗಿ ಕಾರ್ಯನಿರ್ವಹಿಸುತ್ತದೆ. ಇದು ಆಳವಾದ ಪ್ರೀತಿಯ ಆದರ್ಶಗಳು, ಪುಂಡರೀಕ ಮತ್ತು ಮಹಾಶ್ವೇತೆಯಂತಹ ವ್ಯಕ್ತಿಗಳ ಪಾತ್ರದ ರೇಖಾಚಿತ್ರಗಳು ಮತ್ತು ಅಚ್ಛೋದ ಸರೋವರದ ಮೋಡಿ ಮಾಡುವ ವಿವರಣೆಯನ್ನು ಸ್ಪಷ್ಟವಾಗಿ ಚಿತ್ರಿಸುವ ಕಾವ್ಯ ರಚನೆಯಾಗಿದೆ. ಪಂಚತಂತ್ರ ಎಂದು ಕರೆಯಲ್ಪಡುವ ದುರ್ಗಸಿಂಹನ ಚಂಪೂಕಾವ್ಯವು ವಾಸು ಭಾಗಭಟ್ಟರ ಮೂಲ ಕೃತಿಯ ಕನ್ನಡ ರೂಪಾಂತರವನ್ನು ಪ್ರತಿನಿಧಿಸುತ್ತದೆ. 'ವಿರಚಿಸಿವೆಂ' ಎಂಬ ಶೀರ್ಷಿಕೆಯ ಈ ತುಣುಕು ಪ್ರಾಣಿಗಳು ಮತ್ತು ಪಕ್ಷಿಗಳನ್ನು ಒಳಗೊಂಡಿರುವ ನಿರೂಪಣೆಗಳ ಮೂಲಕ ನೈತಿಕ ಪಾಠಗಳನ್ನು ನೀಡುವ ಸೃಜನಶೀಲ ಮರುವ್ಯಾಖ್ಯಾನವಾಗಿದೆ. ಕವಿ ನಾಗಚಂದ್ರನನ್ನು ಸಾಮಾನ್ಯವಾಗಿ 'ಅಭಿನವ ಪಂಪ' ಎಂದು ಕರೆಯಲಾಗುತ್ತದೆ, ಅವರ 'ರಾಮಚಂದ್ರ ಚರಿತ ಪುರಾಣ' ಕೃತಿಗಾಗಿ 'ಪಂಪ ರಾಮಾಯಣ' ಎಂದೂ ಕರೆಯುತ್ತಾರೆ. ಈ ಪುರಾಣವು ಪ್ರಾಕೃತ ಕವಿ ವಿಮಲಸೂರಿಯವರ 'ಪಉಮಚರಿಮ'ದಿಂದ ಸ್ಫೂರ್ತಿ ಪಡೆಯುತ್ತದೆ. ಅವನ ಚಿತ್ರಣದಲ್ಲಿ, ನಾಗಚಂದ್ರ ರಾವಣನನ್ನು ವಿಶಿಷ್ಟವಾದ ಬೆಳಕಿನಲ್ಲಿ ಪ್ರಸ್ತುತಪಡಿಸುತ್ತಾನೆ, ಅವನು ಅಂತರ್ಗತವಾಗಿ ಸದ್ಗುಣಿ ಎಂದು ಚಿತ್ರಿಸುತ್ತಾನೆ ಆದರೆ ಅಂತಿಮವಾಗಿ ವಿಧಿಯಿಂದ ಅವನ ಮರಣಕ್ಕೆ ಕಾರಣವಾಯಿತು, ಗಾಳಿಯಿಂದ ತೂಗಾಡುವ ಕಮಲದ ಎಲೆಯಂತೆ. 'ಮಲ್ಲಿನಾಥ ಪುರಾಣ'ದಲ್ಲಿ ಶಾಂತಿಯ ಅನ್ವೇಷಣೆಯನ್ನು ಒತ್ತಿ ಹೇಳುತ್ತಾ, "ಜಿನೇಂದ್ರ, ನಿನಗೆ ಮಾತ್ರ ಶಾಂತಿ" ಎಂದು ಘೋಷಿಸುತ್ತಾನೆ.

'ನನ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗ'ಎಂಬ ಮಾತನ್ನು ಕಡೆಗಣಿಸಿದ ನಯಸೇನ, ಶುದ್ಧ ಕನ್ನಡಕ್ಕೆ ವೈಷಮ್ಯ ಬೇಕು ಎಂಬ ಅಭಿಪ್ರಾಯಕ್ಕೆ ಬದ್ಧರಾಗುವುದಕ್ಕಿಂತ ಸಂಘರ್ಷದ ನಡುವೆ ಶುದ್ಧ ಕನ್ನಡವನ್ನು ಪರಿಚಯಿಸುವುದು ಅತ್ಯಗತ್ಯ ಎಂದು ಪ್ರತಿಪಾದಿಸಿದರು. ಶುದ್ಧ ಕನ್ನಡದಲ್ಲಿ ಅವರ ಕಾವ್ಯದ ಕೊಡುಗೆ ಗಮನಾರ್ಹವಾಗಿದೆ,

ವಿಶೇಷವಾಗಿ ಅವರ ಗದ್ಯ ಕೃತಿ 'ಧರ್ಮಾಮೃತ', ಅಲ್ಲಿ ಅವರು ಪರಮಾತ್ಮನ ವಿಡಂಬನಾತ್ಮಕ ವ್ಯಾಖ್ಯಾನದ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ, ಆ ಮೂಲಕ ಹೊಸ ಸಾಹಿತ್ಯ ಸಂಪ್ರದಾಯವನ್ನು ಸ್ಥಾಪಿಸಿದರು. ನೇಮಿಚಂದ್ರ ಅವರ 'ಲೀಲಾವತಿ ಪ್ರಬಂಧ', ಅದರ ಸಾಲಿನ "ಸ್ತ್ರೀ ರೂಪಮೇ ರೂಪಂ ಶೃಂಗಾರ ರಸಮೇ ರಸಂ", ಶೃಂಗಾರ ರಸದ ಆರಂಭಿಕ ಅನ್ವೇಷಣೆಯನ್ನು ಗುರುತಿಸುವ ಕನ್ನಡ ಲಾಲಿತ್ಯ ಕಾವ್ಯಕ್ಕೆ ಒಂದು ಅನನ್ಯ ಕೊಡುಗೆಯನ್ನು ಪ್ರತಿನಿಧಿಸುತ್ತದೆ. ಈ ಶತಮಾನದಲ್ಲಿ ಹೊರಹೊಮ್ಮಿದ ಜ್ಯೋತಿಷ್ಯ, ಶೃಂಗಾರ ಸಾಹಿತ್ಯ, ಪಶುವೈದ್ಯಕೀಯ ವಿಜ್ಞಾನ ಮತ್ತು ಗಣಿತಶಾಸ್ತ್ರದ ಪಠ್ಯಗಳೊಂದಿಗೆ 'ನೇಮಿನಾಥ ಪುರಾಣ' ಅವರ ಇತರ ಗಮನಾರ್ಹ ಕೃತಿಗಳು. 12ನೇ ಶತಮಾನವು ಕನ್ನಡ ಸಾಹಿತ್ಯಕ್ಕೆ ಪರಿವರ್ತಕ ಯುಗವಾಗಿದ್ದು, ರಾಷ್ಟ್ರದ ಸಾರವನ್ನು ಪ್ರತಿಬಿಂಬಿಸುವ ನಾವೀನ್ಯತೆಯಿಂದ ನಿರೂಪಿಸಲ್ಪಟ್ಟಿದೆ. ಈ ಅವಧಿಯು ಸರಳ, ಆಡುಮಾತಿನ ಮತ್ತು ಜನಪ್ರಿಯ ಸಾಹಿತ್ಯದ ಉದಯವನ್ನು ಕಂಡಿತು, ಇದು ಸಾಮಾನ್ಯ ಜನರಿಗೆ ಪ್ರವೇಶಿಸಬಹುದು, ರಾಜಮನೆತನದಿಂದ ದೂರ ಸರಿಯಿತು. ಒಮ್ಮೆ ಆಯ್ದ ಕೆಲವರಿಗೆ ಸೀಮಿತವಾಗಿದ್ದ ಸಾಹಿತ್ಯವು ಜಾತ್ಯತೀತವಾಯಿತು ಮತ್ತು ಎಲ್ಲಾ ಸಾಮಾಜಿಕ ವರ್ಗಗಳಿಂದ ಸ್ವೀಕರಿಸಲ್ಪಟ್ಟಿತು. ಗಮನಾರ್ಹವಾಗಿ, ಈ ಸಮಯದಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ಸಾಹಿತ್ಯವನ್ನು ರಚಿಸಲು ಪ್ರಾರಂಭಿಸಿದರು. 'ವಚನ ಚಳುವಳಿ' ಕನ್ನಡದಲ್ಲಿ ಮಹತ್ವದ ಸಾಂಸ್ಕೃತಿಕ ಶಕ್ತಿಯಾಗಿ ಹೊರಹೊಮ್ಮಿತು, ಸಮಾನತೆ, ಸ್ವಾವಲಂಬನೆ ಮತ್ತು ದಾಸ್ಯರಹಿತತೆಯಂತಹ ಮೌಲ್ಯಗಳನ್ನು ಉತ್ತೇಜಿಸುತ್ತದೆ, ಇದು ಸಾಮಾನ್ಯ ಜನರ ಕ್ರಿಯೆಗಳು ಮತ್ತು ಅಭಿವ್ಯಕ್ತಿಗಳನ್ನು ಆಳವಾಗಿ ಪ್ರಭಾವಿಸಿತು. ವಚನವು ಅನುಭವದ ಗದ್ಯದ ಪ್ರಸಿದ್ಧ ರೂಪವಾಗಿ ವಿಕಸನಗೊಂಡಿತು, ಅದರ ಬರಹಗಾರರು, ಸಾಮಾನ್ಯವಾಗಿ ರೈತರು, ಈ ಸಾಹಿತ್ಯ ಪ್ರಕಾರವನ್ನು ಬೆಳೆಸಿದರು. ಪರಿಣಾಮವಾಗಿ, ವಚನ ಸಾಹಿತ್ಯವು ಕರ್ನಾಟಕದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತು, ಬಸವಣ್ಣನವರ ಮಾರ್ಗದರ್ಶನದಲ್ಲಿ ನೂರಾರು ಶರಣರು ವಚನಗಳನ್ನು ರಚಿಸಿದರು, ಅವರ ಪ್ರಭಾವವು ನಂತರದ ಕನ್ನಡ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ವಚನ ಕವಿಗಳಿಂದ ಪ್ರೇರಿತರಾದ ಹರಿಹರರು ತಮ್ಮ ಸಾಹಿತ್ಯ ಪಯಣದಲ್ಲಿ ವಿಶಿಷ್ಟ ಮಾರ್ಗವನ್ನು ರೂಪಿಸಿಕೊಂಡರು. ಅವರು ಪ್ರಾಥಮಿಕವಾಗಿ ರಗಳೆ ರೂಪವನ್ನು ಬಳಸಿಕೊಂಡರು, ನೂರಕ್ಕೂ ಹೆಚ್ಚು ಶಿವಶರಣರ ರಗಳೆಗಳ ಸಂಯೋಜನೆಗಳನ್ನು ನಿರ್ಮಿಸಿದರು, ಅದು ಪ್ರಮುಖ ರಗಳೆ ಕವಿಯಾಗಿ ಅವರ ಖ್ಯಾತಿಯನ್ನು ಸ್ಥಾಪಿಸಿತು.

ಅವರ ರಗಳೆಗಳೊಳಗಿನ ನಿರೂಪಣೆಗಳು ಶಿವ ಶರಣರ ಕಥೆಗಳ ಸುತ್ತ, ಭಕ್ತಿಯ ವಿಷಯದಿಂದ ಹೆಚ್ಚು ಸೆಳೆಯುತ್ತವೆ. ಇದಲ್ಲದೆ, ಅವರು ಚಂಪೂ ಕಾವ್ಯ 'ಗಿರಿಜಾಕಲ್ಯಾಣ'ವನ್ನು ರಚಿಸುವ ಮೂಲಕ ರಗಳೆ ಕಾವ್ಯವನ್ನು ಮೀರಿ ತಮ್ಮ ಬಹುಮುಖತೆಯನ್ನು ಪ್ರದರ್ಶಿಸಿದರು. ಹರಿಹರನ ಸೋದರಳಿಯನಾದ ರಾಘವಾಂಕನು ತನ್ನ ಕಾವ್ಯದ ಪ್ರಯತ್ನಗಳಿಗೆ ಶತನಾದಿ ರೂಪವನ್ನು ಅಳವಡಿಸಿಕೊಂಡನು, ಈ ಶೈಲಿಯನ್ನು ಉದಾಹರಿಸುವ ಕೃತಿಗಳನ್ನು ರಚಿಸಿದನು. ಅವರ ಗಮನಾರ್ಹ ಕೊಡುಗೆಗಳಲ್ಲಿ ಹರಿಶ್ಚಂದ್ರನ ಮೇಲಿನ ಕವನವು ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮವಾದದ್ದು ಎಂದು ಪರಿಗಣಿಸಲಾಗಿದೆ. 'ಹರನ ಸತ್ಯವನ್ನು ಸಾಕಾರಗೊಳಿಸುತ್ತದೆ ಮತ್ತು ಸತ್ಯವು ಹರಣವಾಗಿದೆ' ಎಂಬ ಕಲ್ಪನೆಯನ್ನು ಅವರು ಪ್ರತಿಪಾದಿಸಿದರು, ಕಾವ್ಯವು ಅದರ ಓದುಗರ ಜೀವನವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂಬ ಅವರ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ನಾಡು ನುಡಿಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸರ್ವಜ್ಞ ಅವರು ತ್ರಿಪದಿಯನ್ನು ಮಾಧ್ಯಮವಾಗಿ ಬಳಸುವುದರ ಮೂಲಕ ತಮ್ಮ ಸಂದೇಶಗಳನ್ನು ನೇರವಾಗಿ ಜನತೆಗೆ ತಲುಪಿಸಲು ಕಟುವಾದ ಭಾಷೆಯನ್ನು ಬಳಸುತ್ತಿದ್ದಾರೆ. 'ಸರ್ವಜ್ಞನ ಮಾತಿಗೆ ಮಣಿಯದ ಎಲೆಯಿಲ್ಲ; ಯಾವುದೇ ವಿಷಯವನ್ನು ಅವರು ತಿಳಿಸದೆ ಉಳಿದಿದ್ದಾರೆ' ಎಂಬುದು ಅವರ ಪ್ರವೇಶವನ್ನು ಒತ್ತಿಹೇಳುತ್ತದೆ. ಅವರು ಜ್ಞಾನದ ಮಹತ್ವ, ಗುರುವಿನ ಪಾತ್ರ, ಸಾಮಾಜಿಕ ನಿಯಮಗಳು ಮತ್ತು ಆರೋಗ್ಯ, ಮಹಿಳೆಯರು ಮತ್ತು ಸತ್ಯತೆ ಸೇರಿದಂತೆ ಜೀವನದ ವಿವಿಧ ಅಂಶಗಳನ್ನು ಮೂರು ಶ್ಲೋಕಗಳಲ್ಲಿ ಒಳಗೊಂಡಿರುವ ವಿಷಯಗಳನ್ನು ಕೌಶಲ್ಯದಿಂದ ಪರಿಶೋಧಿಸುತ್ತಾರೆ.

ಮಧ್ಯ ಕನ್ನಡ ಸಾಹಿತ್ಯದಲ್ಲಿ ಮತ್ತೊಬ್ಬ ಪ್ರಖ್ಯಾತ ವ್ಯಕ್ತಿ ಕುಮಾರ ವ್ಯಾಸ, ಮಹಾಭಾರತವನ್ನು ಪುನರಾವರ್ತನೆ ಮಾಡುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಆರು ಪದ್ಯಗಳ ಕಾವ್ಯಕ್ಕೆ ಹೆಸರುವಾಸಿಯಾಗಿದ್ದಾನೆ. ಈ ಕೃತಿಯಲ್ಲಿ, ಅವರು ಕೃಷ್ಣನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತಾರೆ, ಬುದ್ಧಿವಂತರು ಕೃಷ್ಣನ ನಿರೂಪಣೆಯನ್ನು ಆಚರಿಸಬೇಕೆಂದು ಸೂಚಿಸುತ್ತಾರೆ. ಅವನು ತನ್ನನ್ನು ಕವಿ ಮತ್ತು ಬರಹಗಾರನಾಗಿ ಗುರುತಿಸಿಕೊಂಡಿದ್ದಾನೆ, ವ್ಯಾಪಕವಾದ ಮಹಾಕಾವ್ಯವನ್ನು ರಚಿಸಿದನು, ಅದು ಅವನಿಗೆ ವಿಮರ್ಶಕರಿಂದ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ತಂದುಕೊಟ್ಟಿತು, ಅವನ ರೂಪಕಗಳ ಸಮೃದ್ಧ ಬಳಕೆಯಿಂದಾಗಿ. ಕುವೆಂಪು ಅವರ ಕಾವ್ಯಪ್ರವೀಣತೆಯನ್ನು ಗುರುತಿಸಿ, 'ಕುಮಾರ ವ್ಯಾಸನ ಹಾಡುಗಳು ಕಲಿಯುಗವನ್ನು ದ್ವಾಪರವಾಗಿ ಪರಿವರ್ತಿಸುತ್ತವೆ ಮತ್ತು ಭಾರತವು ಗೌರವದಿಂದ ನಮಸ್ಕರಿಸಲಿದೆ' ಎಂದು ಸೂಕ್ತವಾಗಿ

ಹೇಳಿದ್ದಾರೆ.

ಈ ಯುಗದಲ್ಲಿ ಉಪಮೆಗಳಿಗೆ ಹೆಸರಾದ ಲಕ್ಷ್ಮೀಶ ಮತ್ತು ಅಲ್ಲಮಪ್ರಭುವನ್ನು ತನ್ನ ಕಾವ್ಯದ ಮಾರ್ಗದರ್ಶಕ ಎಂದು ಪರಿಗಣಿಸಿದ ಚಾಮರಸ, ಪ್ರತಿಯೊಬ್ಬರೂ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ಬಗೆಯಲ್ಲಿ ಕಾವ್ಯಗಳನ್ನು ಕೆತ್ತಿದ್ದಾರೆ. ವಚನ ಮತ್ತು ಕೀರ್ತನ ಸಾಹಿತ್ಯದ ನಡುವಿನ ಸಂಬಂಧವನ್ನು ಒಂದೇ ನಾಣ್ಯದ ಎರಡು ಬದಿಗಳಿಗೆ ಹೋಲಿಸಬಹುದು, ಹರಿದಾಸ ಕೀರ್ತನೆಗಳ ಪ್ರಮುಖ ಸಂಯೋಜಕ. ಅವರ ಕೃತಿಗಳು ದೈವಿಕ ಸ್ತುತಿ, ದೇವರ ನಾಮಸ್ಮರಣೆ, ಆತ್ಮಾವಲೋಕನ, ನೈತಿಕ ಪರಿಗಣನೆ, ಸಾಮಾಜಿಕ ವಿಮರ್ಶೆ ಮತ್ತು ಅಜ್ಞಾನದ ನಿರಾಕರಣೆ ಮುಂತಾದ ವಿಷಯಗಳನ್ನು ಉದ್ದೇಶಿಸಿ ಉತ್ತಮ ಸಮಾಜವನ್ನು ಬೆಳೆಸುವ ಗುರಿಯನ್ನು ಹೊಂದಿದ್ದವು. ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು ಸೇರಿದಂತೆ ಅಸಂಖ್ಯಾತ ಕೀರ್ತನೆ ಲೇಖಕರು ಈ ಸಾಹಿತ್ಯ ರಚನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಇದಲ್ಲದೆ, ಕೀರ್ತನೆಗಳ ಜೊತೆಗೆ ಹೊರಹೊಮ್ಮಿದ ತಾತ್ವಿಕ ಪದ್ಯಗಳು ಸಾಮಾನ್ಯ ಜನರ ಭಾವನೆಗಳ ನಿಜವಾದ ಅಭಿವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತವೆ.

ರತ್ನಾಕರವರ್ಣಿಯು 'ಶೃಂಗಾರ ಕವಿ' ಎಂಬ ಬಿರುದನ್ನು ಗಳಿಸಿ ಸಾಂಗತ್ಯದ ಅಗ್ರಗಣ್ಯ ಕವಿಯಾಗಿ ನಿಲ್ಲುತ್ತಾನೆ. ಅವರ ಸ್ಮಾರಕ ಕೃತಿ, ಭರತೇಶ ವೈಭವ, ತ್ಯಾಗ ಮತ್ತು ಆನಂದದ ನಡುವಿನ ಸಮತೋಲನವನ್ನು ಪ್ರತಿಪಾದಿಸುವ ಹತ್ತು ಸಾವಿರ ಪದ್ಯಗಳನ್ನು ಒಳಗೊಂಡಿರುವ ಒಂದು ವ್ಯಾಪಕವಾದ ಕವಿತೆಯಾಗಿದೆ. ಮತ್ತೊಂದು ಮಹತ್ವದ ಕೃತಿ, ಸಂಚಿ ಹೊನ್ನಮ್ಮಳ ಅವರ ಹದಿಬದೆಯ ಧರ್ಮ, ಮಹಿಳಾ ಹಕ್ಕುಗಳನ್ನು ಪ್ರತಿಪಾದಿಸುವ ನೈತಿಕವಾಗಿ ಚಾಲಿತ ಕವಿತೆಯಾಗಿದೆ. ಮೈಸೂರು ಅರಸರ ಕಾಲವು ಕನ್ನಡ ಸಾಹಿತ್ಯದಲ್ಲಿ ಅನೇಕ ಪ್ರಮುಖ ಕೃತಿಗಳ ರಚನೆಯನ್ನು ಕಂಡಿತು. ಮಧ್ಯ ಕನ್ನಡ ಮತ್ತು ಹೊಸ ಕನ್ನಡವನ್ನು ಸೇತುವೆ ಮಾಡುವ ಕವಿ ಮುದ್ದಣ ಅವರನ್ನು ಸಾಮಾನ್ಯವಾಗಿ 'ಹೊಸ ಕನ್ನಡದ ಮುಂಗೋಳಿ' ಎಂದು ಕರೆಯಲಾಗುತ್ತದೆ, ಇದು ಹೊಸ ಕನ್ನಡ ಓದುಗರ ಆದ್ಯತೆಗಳು ಮತ್ತು ದೃಷ್ಟಿಕೋನಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತದೆ.

20ನೇ ಶತಮಾನದಲ್ಲಿ ಹೊರಹೊಮ್ಮಿದ ಆಧುನಿಕ ಕನ್ನಡ ಸಾಹಿತ್ಯವು 19ನೇ ಶತಮಾನದ ಉತ್ತರಾರ್ಧದಲ್ಲಿ ತನ್ನ ಬೇರುಗಳನ್ನು ಗುರುತಿಸುತ್ತದೆ. ಈ ಹೊಸ ಸಾಹಿತ್ಯ ಚಳುವಳಿಯು 20ನೇ ಶತಮಾನದಲ್ಲಿ ಅರಳಿತು, ಆ ಕಾಲದ ವಸಾಹತುಶಾಹಿ ಸಂಸ್ಕೃತಿ, ಹೊಸ ಶೈಕ್ಷಣಿಕ ವ್ಯವಸ್ಥೆಯ ಪರಿಚಯ, ಆಡಳಿತಾತ್ಮಕ ಬದಲಾವಣೆಗಳು, ಮುದ್ರಣದಲ್ಲಿನ ಪ್ರಗತಿಗಳು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ

ಬೆಳವಣಿಗೆಗಳು, ಇವೆಲ್ಲವೂ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಭೂದೃಶ್ಯವನ್ನು ಗಮನಾರ್ಹವಾಗಿ ರೂಪಿಸಿದವು. ಆಧುನಿಕ ಕನ್ನಡ ಸಾಹಿತ್ಯವು ಒಂದು ಶತಮಾನಕ್ಕೂ ಹೆಚ್ಚು ವ್ಯಾಪಿಸಿರುವ ಶ್ರೀಮಂತ ಇತಿಹಾಸವನ್ನು ಹೊಂದಿದೆ, ಇದು ಹಲವಾರು ಸಾಹಿತ್ಯಿಕ ವೈಶಿಷ್ಟ್ಯಗಳು ಮತ್ತು ನಡೆಯುತ್ತಿರುವ ಆವಿಷ್ಕಾರಗಳಿಂದ ನಿರೂಪಿಸಲ್ಪಟ್ಟಿದೆ. ಇದು ನವೋದಯ, ಪ್ರಗತಿಶೀಲ, ನವ್ಯ, ಮತ್ತು ದಲಿತ–ಬಂಡಾಯದಂತಹ ಮಹತ್ವದ ಚಳುವಳಿಗಳನ್ನು ಒಳಗೊಳ್ಳುತ್ತದೆ ಮತ್ತು ಕವನ, ಸಣ್ಣ ಕಥೆಗಳು, ಕಾದಂಬರಿಗಳು, ನಾಟಕ, ಪ್ರಬಂಧಗಳು, ಆತ್ಮಚರಿತ್ರೆಗಳು, ಜೀವನಚರಿತ್ರೆಗಳು ಮತ್ತು ಸಾಹಿತ್ಯ ವಿಮರ್ಶೆ ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಪ್ರವರ್ಧಮಾನಕ್ಕೆ ಬಂದಿದೆ.

ನವೋದಯ ಚಳುವಳಿಯು ಹೊಸ ಕನ್ನಡ ಸಾಹಿತ್ಯದ ಆರಂಭಿಕ ಮಹತ್ವದ ಹಂತವನ್ನು ಗುರುತಿಸುತ್ತದೆ. 'ನವೋದಯ' ಪದವು 'ಹೊಸ ಹುಟ್ಟು' ಎಂದು ಅನುವಾದಿಸುತ್ತದೆ. ಬಿ.ಎಂ. ಶ್ರೀ ಅವರ ಕವನ ಸಂಕಲನ, 'ಇಂಗ್ಲಿಷ್ ಹಾಡುಗಳು,' ಹೊಸ ಕನ್ನಡ ಸಾಹಿತ್ಯದ ಔಪಚಾರಿಕ ಆರಂಭವೆಂದು ಗುರುತಿಸಲ್ಪಟ್ಟಿದೆ. ಈ ಪುನರುಜ್ಜೀವನವು ಪಾಶ್ಚಾತ್ಯ ಮತ್ತು ಪೂರ್ವ ಸಿದ್ಧಾಂತಗಳಿಂದ ರೂಪುಗೊಂಡಿತು, ಶೆಲ್ಲಿ, ಕೀಟ್ಸ್, ಬರ್ನ್ಸ್, ಟೆನ್ನಿಸನ್ ಮತ್ತು ಷೇಕ್ಸ್‌ಪಿಯರ್‌ನಂತಹ ಪ್ರಸಿದ್ಧ ಕವಿಗಳಿಂದ ಸ್ಫೂರ್ತಿ ಪಡೆಯಿತು. ಇದು ರಾಷ್ಟ್ರೀಯತೆ, ವೈದಿಕ ಪ್ರಜ್ಞೆ, ಐತಿಹಾಸಿಕ ಮತ್ತು ಪೌರಾಣಿಕ ನಿರೂಪಣೆಗಳು ಮತ್ತು ಬುದ್ಧ, ಬಸವಣ್ಣ, ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿಯವರಂತಹ ಪ್ರಭಾವಿ ವ್ಯಕ್ತಿಗಳ ತಾತ್ವಿಕ ಒಳನೋಟಗಳನ್ನು ಪ್ರತಿಬಿಂಬಿಸುತ್ತದೆ. ಈ ವಿಷಯಗಳನ್ನು ಕುವೆಂಪು, ಬೇಂದ್ರೆ, ಡಿ.ವಿ.ಜಿ., ಪು.ತಿ.ನ., ಮತ್ತು ಶಿವರಾಮ ಕಾರಂತರಂತಹ ಬರಹಗಾರರು ವ್ಯಕ್ತಪಡಿಸಿದ್ದಾರೆ, ಅವರು ಭಾಷೆಗೆ ಭಾವನಾತ್ಮಕ ಆಳ, ಚಿಂತನಶೀಲ ಪರಿಗಣನೆ ಮತ್ತು ವೈಜ್ಞಾನಿಕ ಮಸೂರದಿಂದ ಪ್ರವೇಶಿಸಬಹುದಾದ ಮತ್ತು ಜನಪ್ರಿಯ ಭಾಷೆಯನ್ನು ಬಳಸಿದರು.

'ಪ್ರಗತಿಪರ' ಹೊಸ ಕನ್ನಡ ಎಂದು ಕರೆಯಲ್ಪಡುವ ನಂತರದ ಹಂತವು ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಅದನ್ನು ಹೆಚ್ಚು ಸಹನೀಯವಾಗಿಸುವ ಗುರಿಯನ್ನು ಹೊಂದಿದೆ. ಸೌಂದರ್ಯ ಮತ್ತು ಪ್ರೀತಿಯ ವಿಷಯಗಳ ಮೂಲಕ ಮಧ್ಯಮ ವರ್ಗದ ಪ್ರಣಯ ಸಂವೇದನೆಗಳನ್ನು ಪೂರೈಸುವ ಹಿಂದಿನ ನವೋದಯ ಸಾಹಿತ್ಯಕ್ಕೆ ವ್ಯತಿರಿಕ್ತವಾಗಿ, ಈ ಹಂತವು ಸಮಾಜವಾದ, ಸಮಾನತಾವಾದ, ವಾಸ್ತವಿಕತೆ, ಉದಾರವಾದ ಮತ್ತು ಮಾನವತಾವಾದದಂತಹ ಸೈದ್ಧಾಂತಿಕ ಚಳುವಳಿಗಳಿಗೆ ಪ್ರತಿಕ್ರಿಯೆಯಾಗಿ ಹೊರಹೊಮ್ಮಿತು. ಅದು 'ಕಲೆ ಕಲೆಗಾಗಿ ಅಲ್ಲ; ಬದಲಿಗೆ ಕಲೆ ಜೀವನಾಧಾರಿತವಾಗಿರಬೇಕು.' ಈ ಅವಧಿಯ ಗಮನಾರ್ಹ ಬರಹಗಾರರು

ಎ.ಎನ್.ಮೂರ್ತಿರಾವ್ ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ ಅ.ನ.ಕೃ, ನಿರಂಜನ, ತರಾಸು, ಬಸವರಾಜ ಕಟ್ಟಿಮನಿ. ಉದಯೋನ್ಮುಖ 'ಹೊಸ' ಸಾಹಿತ್ಯಿಕ ಹಂತವು ಸ್ಥಳೀಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ ಸಂಪ್ರದಾಯಗಳ ವಿಕಸನ ಸಂವೇದನೆಗಳಿಂದ ಉದ್ಭವಿಸಿದ ಮಹತ್ವದ ಸಾಹಿತ್ಯ ಚಳುವಳಿಯನ್ನು ಪ್ರತಿನಿಧಿಸುತ್ತದೆ. ಈ ಹಂತವು ಸಾಹಿತ್ಯದ ಆಶಯಗಳನ್ನು ಪ್ರತಿಬಿಂಬಿಸುವ ಅಸ್ತಿತ್ವವಾದ, ಅನಾಕ್ರೊನಿಸಂ, ಮನೋವಿಶ್ಲೇಷಣೆ, ಮಾನವತಾವಾದ, ನಿರಾಕರಣವಾದ, ಸಾಂಕೇತಿಕತೆ, ಪ್ರತಿಮಾವಾದ ಮತ್ತು ಮಾರ್ಕ್ಸ್‌ವಾದವನ್ನು ಒಳಗೊಂಡಂತೆ ವಿವಿಧ ತಾತ್ವಿಕ ಮತ್ತು ಸೈದ್ಧಾಂತಿಕ ಪ್ರಭಾವಗಳನ್ನು ಒಳಗೊಳ್ಳುತ್ತದೆ. ಖ್ಯಾತ ಲೇಖಕರಾದ ವಿ.ಕೆ. ಗೋಕಾಕ, ಗೋಪಾಲಕೃಷ್ಣ ಅಡಿಗ, ಪಿ.ಲಂಕೇಶ್, ಗಂಗಾಧರ ಚಿತ್ತಾಲ, ಬಿ.ಸಿ. ರಾಮಚಂದ್ರ ಶರ್ಮ, ಸು.ರಂ. ಎಕ್ಕುಂಡಿ ಮತ್ತು ಚಂದ್ರಶೇಖರ ಕಂಬಾರರು ಈ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಹೊಸ ಕನ್ನಡ ಸಾಹಿತ್ಯದ ಮತ್ತೊಂದು ನಿರ್ಣಾಯಕ ಅಂಶವೆಂದರೆ 'ದಲಿತ–ಬಂಡಾಯ' ಹಂತ, ಇದು ಸಾಹಿತ್ಯಕ್ಕೆ ಸಾಮಾಜಿಕ ಪ್ರಜ್ಞೆಯ ವಿಧಾನವನ್ನು ಒತ್ತಿಹೇಳುತ್ತದೆ. ಈ ಆಂದೋಲನವು ತುಳಿತಕ್ಕೊಳಗಾದ, ಬಡವರ ಮತ್ತು ದಲಿತ ಸಮುದಾಯದ ಹಕ್ಕುಗಳು ಮತ್ತು ಪ್ರಾತಿನಿಧ್ಯಕ್ಕಾಗಿ ಪ್ರತಿಪಾದಿಸುತ್ತದೆ. ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್ ವಾದ, ದಲಿತ ಪ್ಯಾಂಥರ್ಸ್ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಸಾಹಿತಿಗಳಾದ ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಎಂ.ಎನ್. ಜವರಯ್ಯ, ಕುಂ.ವಿ, ಬರಗೂರು ರಾಮಚಂದ್ರಪ್ಪ, ಡಾ.ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ ಈ ಸಾಹಿತ್ಯ ಯುಗದಲ್ಲಿ ಪ್ರಮುಖ ವ್ಯಕ್ತಿಗಳಾಗಿ ಹೊರಹೊಮ್ಮಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕನ್ನಡ ಸಾಹಿತ್ಯದ ವಿಕಾಸದ ಉದ್ದಕ್ಕೂ ಇರುವ ನಿರೂಪಣೆಗಳು ಮತ್ತು ವಿಷಯಗಳು ಸಮಕಾಲೀನ ಜೀವನದ ನೈಜತೆಯನ್ನು ಆಯಾ ಐತಿಹಾಸಿಕ ಸಂದರ್ಭಗಳಿಂದ ರೂಪಿಸುತ್ತವೆ. ಇದಲ್ಲದೆ, ಕನ್ನಡ ಸಾಹಿತ್ಯವು ಜೀವನ ಮೌಲ್ಯಗಳನ್ನು ಬೆಳೆಸುವ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತದೆ, ಭವಿಷ್ಯವನ್ನು ಕಲ್ಪಿಸುವಾಗ ಭೂತಕಾಲವನ್ನು ವರ್ತಮಾನದೊಂದಿಗೆ ಸೇತುವೆ ಮಾಡುತ್ತದೆ.

***

**ಪರಾಮರ್ಶನ ಕೃತಿಗಳು :**

1. ಸಮಗ್ರ ಗದ್ಯ–3 – ಜಿ.ಎಸ್ ಶಿವರುದ್ರಪ್ಪ
2. ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ – ಬೆಂ.ವಿ.ವಿ
3. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ., ಕನ್ನಡ ಸಾಹಿತ್ಯ – ವಿಕಿಸೋರ್ಸ್
4. ಹತ್ತೊಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ – ಎ.ಎಸ್. ಜಯರಾಂ
5. ಕನ್ನಡ ನಾಡಿನ ಚರಿತ್ರೆ ಭಾಗ–1,2,3 – ಡಾ. ಬಿ.ಎ. ಸಾಲೆತ್ತೂರೆ/ ಡಾ. ದೇಸಾಯಿ ಪಾಂಡುರಂಗರಾಯರು, ಡಾ. ಎಸ್.ಸಿ. ನಂದಿಮಠ, ಡಾ. ಎಂ.ಎಚ್. ಕೃಷ್ಣ
6. ಬೆಂಗಳೂರು ಬಾಗಿನ–ಸ್ಮರಣ ಸಂಚಿಕೆ – ಸಂ. ಡಾ. ಬೈರಮಂಗಲ ರಾಮೇಗೌಡ, ಪ್ರೊ. ಎಂ.ಜಿ. ಚಂದ್ರಶೇಖರಯ್ಯ

**ಲೇಖಕರು : ಮನೋಜ್.ಎಂ**
ಸಂಶೋಧನಾ ವಿದ್ಯಾರ್ಥಿ,
ಸಾಮಾಜಿಕ ಮತ್ತು ಮಾನವಿಕ ವಿಭಾಗ,
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು,
ಸಹಾಯಕ ಪ್ರಾಧ್ಯಾಪಕರು,
ಸೆಂಟ್ ಫ್ರಾನ್ಸಿಸ್ ಕಾಲೇಜ್, ಬೆಂಗಳೂರು
manojm.cssh@srinivasauniversity.edu.in
manojm7190@gmail.com

**ಮಾರ್ಗದರ್ಶಕರು : ಡಾ. ರಾಜೇಶ್ ಬೆಜ್ಜಂಗಳ**
ಸಂಶೋಧನಾ ಮಾರ್ಗದರ್ಶಕರು
ಶ್ರೀನಿವಾಸ ವಿಶ್ವವಿದ್ಯಾಲಯ,
ಪಾಂಡೇಶ್ವರ., ಮಂಗಳೂರು

# ಕ್ಲಿಪ್ ಜಾಯಿಂಟ್ ಕಥೆಯಲ್ಲಿ ಎರಡು ಸಂಸ್ಕೃತಿಗಳ ಮೌಲ್ಯ ಶೋಧನೆ

¤ ಡಾ. ಮಹಾಂತೇಶ್ ದುರಗಣ್ಣವರ

ಸಣ್ಣ ಕಥೆಗಾರರಲ್ಲಿ ಯು. ಆರ್. ಅನಂತಮೂರ್ತಿ ಅವರದು ಬಲು ದೊಡ್ಡ ಹೆಸರು. ನಮ್ಮ ಯಾವ ಸಣ್ಣ ಕಥೆಗಾರರಲ್ಲಿಯೂ ಕಾಣಿಸದಂಥ ಘನೋದ್ದೇಶ ಅವರ ಕಥೆಗಳಿಗಿದೆ. ಜೀವನದ ಅರ್ಥವನ್ನು ಒಟ್ಟಿನಲ್ಲಿ ಶೋಧಿಸಬೇಕು ಗುರುತಿಸಬೇಕು ಎಂಬ ಮಹತ್ವಕಾಂಕ್ಷೆ ಅವರ ಕಥೆಗಳ ತಳದಲ್ಲಿದೆ. ಅದದರಿಂದಲೋ ಏನೋ ಅವರ ಕಥೆಗಳು ಸೃಷ್ಟಾತ್ಮಕ ಸಂದರ್ಭದಲ್ಲಿ ತಮ್ಮ ಅಳವಿಗೆ ಮೀರಿದ್ದೇನೋ ಎಣಿಸುವಷ್ಟನ್ನು ಹಿಡಿಯುವ ಯತ್ನದಲ್ಲಿ ತೊಡಗಿರುತ್ತವೆ ಎಂದೆನಿಸುತ್ತದೆ. ಆ ಮೂಲಕ ಕಥೆಗಳು ಆಹ್ವಾನಿಸಿಕೊಳ್ಳುತ್ತಿರುವ ಸೃಜನಾತ್ಮಕ ಸವಾಲು ಮಹತ್ವಪೂರ್ಣವಾದದ್ದಾಗುತ್ತದೆ. ಸಾಮಾನ್ಯವಾಗಿ ಬ್ರಾಹ್ಮಣ ಕೌಟುಂಬಿಕ ಜೀವನದ ಹಳ್ಳಿಯ ಪರಿಸರದಲ್ಲಿಯೇ ಅಥವಾ ಅದಕ್ಕೆ ಸಂಬಂಧಿಸಿದಂತೆ ಅವರ ಕಥೆಗಳ ಕ್ರಿಯಾ ಕೇಂದ್ರ ಇರುವಂತಾಗಿದೆ. ಇಲ್ಲಿ ಈ ಕ್ಲಿಪ್ ಜಾಯಿಂಟ್ ಕಥೆಯು ಇಂಗ್ಲೆಂಡಿನಲ್ಲಿ ಕಥೆ ನಡೆಯುವುದಾದರೂ ಕೇಶವನ ಬಹುತವೆಲ್ಲ ಅಷ್ಟಿಷ್ಟು ವರ್ತಮಾನ ಕೂಡ ಬ್ರಾಹ್ಮಣ ಪರಿಸರದಲ್ಲಿಯೇ ಮುಖ್ಯವಾಗಿ ಪರಿಣಾಮಗೊಂಡಿದ್ದಾಗಿದೆ. ಪರಂಪರಾಗತ ಮೌಲ್ಯಗಳನ್ನು ತೀವ್ರವಾದ ಪರೀಕ್ಷೆಗೆ ಶೋಧನೆಗೆ ಒಳಪಡಿಸುವ ಕಾಳಜಿಯುಳ್ಳ ಅವರ ಬರವಣಿಗೆ. ಬ್ರಾಹ್ಮಣ ಪರಿಸರ ಬಹುಶಃ ಅದರ ಗುಣದೋಷಗಳೆರಡರ ದೃಷ್ಟಿಯಿಂದಲೂ ಪ್ರಮಾಣದಲ್ಲಿ ಹೆಚ್ಚು ಜೀವಂತವಾಗಿರುವುದು ಇದಕ್ಕೆ ಒಂದು ಮುಖ್ಯ ಕಾರಣವಿರಬಹುದು. ಈ ಕ್ಲಿಪ್ ಜಾಯಂಟಿನಲ್ಲಿ ಕೇಶವನಿಗೆ ಎದುರಾಗಿ ಸ್ಟುಆರ್ಟ ಸಮರ್ಥವಾಗಿ ನಿಲ್ಲಿಸಲಾಗಿದೆ. ಅಲ್ಲಿನ ಸಮಸ್ಯೆ ನಮ್ಮ ಪರಂಪರಾಗತ ಮೌಲ್ಯಶೋಧನೆಯ ಮಿತಿಗೆ ಒಳಪಡದ ಎರಡು ಸಂಸ್ಕೃತಿಗಳ ಮೌಲ್ಯ ಶೋಧನೆಯಾಗಿದೆ. ಕೇಶವನ ವಿಚಾರ ಸರಣಿಗೆ ಎದುರಾಗಿ ನಿಲ್ಲುವ ಅಥವಾ

ವೈಚಾರಿಕತೆಯ ಇನ್ನೊಂದು ಮಗ್ಗುಲವಾಗಿ ಬಿಡುವ ಆ ಮೂಲಕ ಕೇಶವನ ಕಥೆಗಾರನ ಮುಖವಾಣಿ ಆಗಿಬಿಡದಂತೆ ನಿಯಂತ್ರಿಸುವ ಯತ್ನ ಇಲ್ಲಿ ಬಲುಮಟ್ಟಿಗೆ ಫಲಿಸಿದೆ.

ಕೇಶವನು ಮನುಷ್ಯನ ಉಡುಗೆ–ತೊಡುಗೆಗಳನ್ನು ಎರಡು ದೇಶಗಳ ಸಂಸ್ಕೃತಿಯ ಮಧ್ಯೆ ಹೋಲಿಸುತ್ತಾನೆ. ಗೆಳೆಯನಾದ ಸ್ಟುಅರ್ಟನ ಬಾಹ್ಯ ಉಡುಗೆ – ತೊಡುಗೆಯ ಸಂಸ್ಕೃತಿ ಹೇಗಿತ್ತು ಎಂಬುದನ್ನು ಹೀಗೆ ಹೇಳುವನು.” ಆರಿದ ಪೈಪನ್ನು ಜೇಬಿನಲ್ಲಿ ಇಟ್ಟುಕೊಂಡು ಸ್ಟುಅರ್ಟ ಕರೆ ಕರೆಯಾದ ಧ್ವನಿ, ಪಬ್ಲಿಕ್ ಸ್ಕೂಲಿನಿಂದ ಓದಿ ಬಂದ ಥೇಟು ಅರಿಸ್ಟೊಕ್ರಟಿಕ್ ಲಿಬರಲ್ ಇವ ಅಂಚು ಹೊಲಿಯದ ಉಲ್ಲನ್ ಟೈ, ಮಾಸಿದ ಗ್ರೇಫ್ಯಾನಲ್ ಬ್ಯಾಗ್ಸ್, ಹ್ಯಾರಿಸ್ ಟ್ವಿಡ್ ಜಾಕೆಟ್, ಉದ್ದೆಗೆ ಬೆಳೆಸಿದ ಎಣ್ಣೆ ಹಚ್ಚದ ಕ್ರಾಫ್, ಗಡ್ಡ ನೀಳವಾದ ಶರೀರ, ಆದರೆ ತನ್ನದು ತೋರವಾದ, ಮಂದವಾದ ಸ್ವರೂಪ.”[1] ಮುಂದುವರಿದ ರಾಷ್ಟ್ರಗಳನ್ನು ಗಮನಿಸಿದಾಗ ಧೂಮಪಾನದ ಪರಿಕರಗಳಲ್ಲಿ ಸುಧಾರಣೆಯಾಗಿರುವುದು ಕಂಡು ಬರುತ್ತದೆ. ನಮ್ಮ ದೇಶದ ಹಳ್ಳಿಗಾಡಿನ ಜನರು ಧೂಮಪಾನಕ್ಕೆ ಬಿಡಿಗಳು, ಸಿಗರೇಟ್, ಚಿಲುಮೆ ಹಾಗೂ ತಾತ್ಕಾಲಿಕವಾದ ವಿವಿಧ ಸಸ್ಯಗಳ ಎಲೆಯನ್ನು ಚಿಲುಮೆ ಆಕಾರದಲ್ಲಿ ಬಳಸಿ ತಂಬಾಕು ತುಂಬಿ ಸೇದುವ ಪ್ರವೃತ್ತಿ ಇದೆ. ಇಲ್ಲಿಯ ಸಂಪ್ರದಾಯವನ್ನು ಅಲ್ಲಿಯ ಆ ಪೈಪಿನ ಸಂಸ್ಕೃತಿಯೊಂದಿಗೆ ಹೋಲಿಸುತ್ತಾನೆ. ವಿದೇಶಿ ವ್ಯಕ್ತಿ ಹಾಗೂ ಸ್ವದೇಶಿ ವ್ಯಕ್ತಿಯ ಬಾಹ್ಯಚಹರಿಯನ್ನು ಹೋಲಿಸಲಾಗುತ್ತದೆ. ವಿದೇಶಿಗರು ತಮ್ಮದೇ ಸ್ವಾತಂತ್ರ್ಯಕ್ಕೆ ಅನುಗುಣವಾಗಿ ಯಾರ ಮುಲಾಜಿಗೂ ಒಳಗಾಗದೆ ಸ್ವಚ್ಛಂದವಾಗಿ ವಿಹರಿಸುವ ಸಂಸ್ಕೃತಿಯನ್ನು ಹೊಂದಿದ್ದಾರೆ. ಅದೇ ಭಾರತೀಯನಿಗೆ ದೇಶಿಯ ಸಂಸ್ಕೃತಿಗೆ ಅನುಗುಣವಾದ ಉಡುಗಿಯನ್ನು ಧರಿಸಬೇಕಾಗಿರುತ್ತದೆ. ವಿದೇಶಗನಾದ ತಮ್ಮ ದೇಶದ ಹವಾಗುಣಕ್ಕೆ ಅನುಗುಣವಾದ ದೈಹಿಕ ಎತ್ತರವನ್ನು ಹೊಂದಿದ್ದರೆ, ಕೇಶವನು ದೇಶಿಯ ಹವಾಗುಣಕ್ಕೆ ಸರಿಹೊಂದುವ ದೈಹಿಕ ಎತ್ತರವನ್ನು ಹೊಂದಿರುವುದನ್ನು ಇಲ್ಲಿ ನೋಡಬಹುದು.

ಇಂಗ್ಲೆಂಡಿನ ರೈಲ್ವೆ ಸ್ಟೇಷನ್ನಿನ ಪ್ಲಾಟ್ಫಾರ್ಮ್ ನ ವ್ಯವಸ್ಥೆಯು ಹೇಗಿತ್ತು ಎಂಬುದನ್ನು ಕೇಶವ ಅವರು ಚಿತ್ರಿಸುತ್ತಾರೆ. ಪ್ಲಾಟ್ ಫಾರ್ಮ್ ಬೆಂಚ್ ಲ್ಲಿರುವ ಅಡ್ವಟ್ರೈಸ್ಮೆಂಟ್ ನ ಸಂಸ್ಕೃತಿಯನ್ನು ಹೀಗೆ ಸೆರೆ ಹಿಡಿದಿದ್ದಾರೆ. “ ಕೈಕಟ್ಟಿ ನಡೆಯುತ್ತಾ ಪ್ಲಾಟ್ಫಾರ್ಮ್ ಸುತ್ತ ಕುತೂಹಲದಿಂದ ನೋಡಿ ಬೆಂಚು; ಅಡ್ವಾರಿಟೈಸ್ಮೆಂಟ್ ನ ಪೋಸ್ಟರು, ಸಿಗರೇಟಿನ, ಚಾಕ್ಲೇಟಿನ, ಹಾಲು, ಹಣ್ಣಿನ ರಸದ, ಬಿಸಿಬಿಸಿ ಕಾಫಿಯ ಸ್ಲಾಟ್ ಮಷೀನ್, ಬೆಂಚು; ಕಾರ್ಸೆಟ್ಟುಗಳನ್ನು ಅಡ್ವರ್ಟೈಸ್ಮೆಂಟ್ ಮಾಡುವ ಅರೇ ಬೆತ್ತಲೆ ಹೆಣ್ಣಿನ ದೇಹದ ಮೇಲೆ ಪೆನ್ಸಿಲ್ ಗೆರೆಗಳ ವ್ಯಭಿಚಾರ, ಇಂಡಿಯಾದ ಕಾಲೇಜಿನ

ಕಕ್ಕಸಿನ ಗೋಡೆಗಳು".[2] ಇಂಗ್ಲೆಂಡಿನ ರೈಲ್ವೆ ಸ್ಟೇಷನ್ ನ ಪ್ಲಾಟ್ಫಾರ್ಮಿನ ಬೆಂಚುಗಳನ್ನು ಜಾಹೀರಾತು ಪ್ರಚಾರಕ್ಕೆ ಸುಲಭವಾಗಿ ಬಳಕೆ ಮಾಡಿಕೊಂಡಿರುವುದು ತಿಳಿಯುತ್ತದೆ. ಅಲ್ಲಿ ಅಂಟಿಸಿರುವ ಅಡ್ವಟೈಸ್ಮೆಂಟಿನ ಪೋಸ್ಟರ್ಗಳನ್ನು ಗಮನಿಸಿದಾಗ ವ್ಯಾಪಾರ ವಹಿವಾಟಿನ ಭರಾಟೆಯು ಎದ್ದು ಕಾಣುವಂತಾಗಿದೆ. ರೈಲ್ವೆ ಸಾರಿಗೆಯನ್ನು ಹೆಚ್ಚು ಜನ ಪ್ರಯಾಣಿಕರು ಬಳಸುತ್ತಿರುವುದರಿಂದ ತಮ್ಮ ಕಂಪನಿಯ ಉತ್ಪನ್ನಗಳು ಬಹುಬೇಗನೆ ಜನ ಸಮುದಾಯಕ್ಕೆ ತಲುಪುತ್ತವೆ. ಎಂಬ ನಂಬಿಕೆ ಆ ಕಂಪನಿಗಳಿಗಿವೆ. ಕಂಪನಿಗಳು ಯಾವುದೇ ಉದ್ದೇಶ ಇಟ್ಟುಕೊಂಡು ಅಂಟಿಸಿದ ಚಿತ್ರಪಟದ ಜಾಹೀರಾತುಗಳ ಮೇಲೆ ಅಶ್ಲೀಲವಾದ ಬರೆಹಗಳು ಹಾಗೂ ಚಿಹ್ನೆಗಳನ್ನು ವಿಕೃತ ಮನಸ್ಥಿತಿಯವರು ಗೀಚಿರುವುದು ಗೋಚರಿಸುತ್ತದೆ. ಇದರಿಂದ ಆ ದೇಶದ ಸಂಸ್ಕೃತಿಯ ಮೌಲ್ಯ ಎಂತದು ಎಂಬುದನ್ನು ತಿಳಿಯಬಹುದು. ಇಂತಹ ಅಶ್ಲೀಲವಾದ ಬರೆಹಗಳು ಭಾರತದಲ್ಲಾದರೆ ಸಾರ್ವಜನಿಕ ಶೌಚಾಲಯದ ಗೋಡೆಯ ಮೇಲೆ ಗೋಚರಿಸುತ್ತವೆ. ಇಂತಹ ಬರೆಹಗಳ ಸಂಸ್ಕೃತಿಯನ್ನು ಎರಡು ಸಂಸ್ಕೃತಿಗಳ ಹೋಲಿಕೆಗೆ ಇಟ್ಟು ಮೌಲ್ಯವನ್ನು ಶೋಧಿಸಿದಾಗ; ಆಯಾ ದೇಶಗಳ ಸಂಸ್ಕೃತಿ ಎಂಥದು ಎಂಬುದನ್ನು ಅಳೆಯಬಹುದು. ಇಂಗ್ಲೆಂಡಿನಲ್ಲಿ ಅಂತಹ ಜನನಿ ಬಿಡ ಸ್ಥಳಗಳಲ್ಲಿ ಅಂತ ಬರವಣಿಗೆ ಗೋಚರಿಸುವುದರಿಂದ ಅವರ ವಿಕೃತವಾದ ಸಂಸ್ಕೃತಿ ಎಂದು ತಿಳಿಯಬಹುದು. ಇಂಡಿಯಾದ ಕಾಲೇಜಿನ ಕಕ್ಕಸಿನ ಗೋಡೆ ಬರಹಗಳು ಇಂಗ್ಲೆಂಡಿನ ಸುಸಂಸ್ಕೃತ ಸ್ಥಳದಲ್ಲಿ ಬಿತ್ತರಿಸುವುದರಿಂದ ಅವರ ಸಂಸ್ಕೃತಿ ಎಷ್ಟೊಂದು ಹದಗೆಟ್ಟಿದೆ ಎಂಬುದನ್ನು ಗಮನಿಸಿದೆ.

ಇಂಗ್ಲೆಂಡಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರೀತಿ ಪ್ರೇಮದ ವಿಷಯವನ್ನು ಸೂಚಿಸುವ ಬರಹಗಳನ್ನು ಕೇಶವ ಕಂಡುಕೊಳ್ಳುತ್ತಾನೆ. ಇದರಿಂದ ಭಾರತ ದೇಶದ ಸಂಸ್ಕೃತಿಯನ್ನು ಇಂಗ್ಲೆಂಡ್ ದೇಶದ ಸಂಸ್ಕೃತಿಯನ್ನು ತೌಲನಿಕವಾಗಿ ಮೆಲುಕು ಹಾಕುತ್ತಾನೆ. "ಭಾರತೀಯ ಕಾಲೇಜು ವಿದ್ಯಾರ್ಥಿಗಳಷ್ಟು ಅತೃಪ್ತ ತಪ್ತಕಾಮಿಗಳು ಜಗತ್ತಿನಲ್ಲಿ ಎಲ್ಲೂ ಇಲ್ಲ; ನನ್ನ ಹಾಗೆ ಕಾಲೇಜಲ್ಲಿ ಯಾರಾದರೂ ಒಬ್ಬ ಹುಡುಗ ಒಂದು ಹುಡುಗಿಯ ಜೊತೆಗೆ ಮರದ ಕೆಳಗೆ ಎದುರು ಬದರಾಗಿ ನಿಲ್ಲುವಷ್ಟು ಧೈರ್ಯ ತೋರಿಸಿದರೆ ಎಂದರೆ ಸಾಕು; ಅಪ್ರಬುದ್ಧ ಹುಡುಗರಿದ್ದಿರಲಿ ಎಷ್ಟೊಂದು ಪ್ರಬುದ್ಧ ಲೆಕ್ಚರ್ಗಳ ಕಣ್ಣು ಅವನ ಮೇಲೆ. ನನ್ನ ತಮ್ಮ ಪಕ್ಕದ ಮನೆಯ ಹುಡುಗಿಯ ಜೊತೆ ಕಿಟಕಿಯ ಮೂಲಕ ಕಣ್ಣಿನ ಸರಸ ನಡೆಸಿದ್ದಾನೆ ಎಂದು ತಿಳಿದು ನಾನು ಎಷ್ಟು ರೇಗಿದೆ; ರಂಪ ಮಾಡಿದೆ. ನಮ್ಮ ಭಾರತ ದೇಶದ ಕೆಲವೊಂದು ಕಾಲೇಜುಗಳಲ್ಲಿ ಒಂದು ಹುಡುಗ ಒಂದು ಹುಡುಗಿ ಎದುರು ಬದರು ನಿಂತು ಮಾತನಾಡುವುದು ಅಪರಾಧ ಎಂಬ ರೀತಿಯಲ್ಲಿ ಬಿಂಬಿತವಾಗಿದೆ. ವಿದ್ಯಾರ್ಥಿನಿಯರಿಗೆ ಮುಕ್ತವಾದ

ಸ್ವತಂತ್ರ ದೊರೆಯದಿರುವ ಸಂಗತಿಯನ್ನು ಕೇಶವರು ಉಲ್ಲೇಖಿಸುತ್ತಾರೆ. ಅಕಸ್ಮಾತ್ ಆ ವಿದ್ಯಾರ್ಥಿಗಳಲ್ಲಿ ಪ್ರೀತಿ ಪ್ರೇಮದ ಅಂಕುರವಾಗಿತ್ತೆಂದೂ ಅದನ್ನು ನಿವೇದಿಸಿಕೊಳ್ಳುವಷ್ಟು ಮುಕ್ತವಾದ ಅವಕಾಶವಿಲ್ಲ. ಇದರಿಂದ ಎಷ್ಟೋ ಪ್ರೇಮಾಂಕುರದ ಮನಸ್ಸುಗಳು ಅತೃಪ್ತತೆಯನ್ನು ಹೊಂದಿವೆ. ಒಂದು ವೇಳೆ ಆ ನಿಷ್ಠುರವಾದ ಸಂಗತಿಯನ್ನು ಭೇದಿಸಿ ಇಷ್ಟ ಬಂದ ರೀತಿಯಲ್ಲಿ ನಡೆದುಕೊಂಡರೆ; ಅದು ಶಿಕ್ಷಕರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಇಂಥ ದುರ್ವ್ಯವಸ್ಥೆ ನಮ್ಮ ಭಾರತೀಯ ಕಾಲೇಜುಗಳಲ್ಲಿ ಕಂಡುಬರುತ್ತದೆ. ಇದನ್ನೇ ಕೇಶವರು ಎರಡು ದೇಶಗಳ ಸಂಸ್ಕೃತಿಯ ಮೌಲ್ಯ ಏನೆಂಬುದನ್ನು ತೋರ್ಪಡಿಸಿದ್ದಾರೆ. ಈ ಪ್ರೀತಿ ಪ್ರೇಮದ ವಿಚಾರಗಳು ವಿದೇಶದಲ್ಲಿ ಸರ್ವೇಸಾಮಾನ್ಯವಾಗಿ ಕಂಡು ಬಂದರೆ; ನಮ್ಮ ಭಾರತದಂತ ರಾಷ್ಟ್ರಗಳಲ್ಲಿ ಅಪರಾಧದ ದೃಷ್ಟಿಯಿಂದ ನೋಡುವಂತಾಗಿದೆ.

ಕೇಶವನು ಭಾರತೀಯ ಹಾಗೂ ಇಂಗ್ಲೆಂಡ್ ಜನರ ಶಿಷ್ಟಾಚಾರವನ್ನು ಹೋಲಿಸಿ ನೋಡುವಂತ ಮನೋವೃತ್ತಿಯನ್ನು ಹೊಂದಿದ್ದಾರೆ. ಇಂಗ್ಲೆಂಡಿನ ಜನರಲ್ಲಿ ಯಾವುದು ಸಂಸ್ಕೃತಿ, ಯಾವುದು ವಿಸಂಸ್ಕೃತಿ ಎಂದು ತಿಳಿದುಕೊಳ್ಳುವುದರಲ್ಲಿ ಕೇಶವನು ಕನ್ಫ್ಯೂಸ್ ಆಗಿದ್ದಾರೆ. ಅಲ್ಲಿನ ಕೆಲವು ಸಂಗತಿಗಳನ್ನು ಹೀಗೆ ಹೇಳುತ್ತಾರೆ. " ತೇಗಿದರೆ ಕ್ಷಮಿಸು ಎನ್ನುವ ಈ ಜನ ಸಾರ್ವಜನಿಕ ಸ್ಥಳಗಳಲ್ಲಿ, ಬೆಂಚುಗಳ ಮೇಲೆ ಆ ಕಡೆಯೇ ನಡೆದ ಬೆಂಚೊಂದರ ಮೇಲೆ ಬೀಟಲ್ಸ್ ಕ್ರಾಫಿನ ಒಬ್ಬ ಹುಡುಗ, ಕೆಂಪು ಉಡುಪು ತೊಟ್ಟ ಹುಡುಗಿಯೊಬ್ಬಳನ್ನು ಅವಚಿಕೊಂಡು ಅವಳ ಕಿವಿಗಳನ್ನು ಕಡಿಯುತ್ತಾ ಪಿಸುಗುಟುತ್ತಿದ್ದ. ಕೇಶವ ನಿಂತ. ಅವಳು ನರಳುತ್ತಾ ಅವನ ಸ್ವೆಟರ್ ಒಳಗೆ ಕೈ ಹಾಕಿ ತಡವಾಡಿದಳು. ಕೇಶವ ಅಲ್ಲಿಂದ ಕಣ್ಣು ಕೀಳಲಾರದೆ ನಿಂತ. ಕನ್ಯಾಮಾಸದಲ್ಲಿ ನಾಯಿಗಳು ಮಾತ್ರ ಹೀಗೆ. ಹುಡುಗಿಯ ಮುಚ್ಚಿದ ಕಣ್ಣುಗಳನ್ನು ಬೆರಳಿನಿಂದ ಅರಳಿಸಿ, ನಾಲಿಗೆಯ ತುದಿಯಿಂದ ಕಿಲಕಿಲ ನಕ್ಕು ತಳ್ಳಿದಳು. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಯಾವುದು ಮಾನ ಮರ್ಯಾದಿಯ ಸಂಗತಿ ಆಗಿರುತ್ತದೆಯೋ, ಅದು ಪಾಶ್ಚಾತ್ಯರಲ್ಲಿ ಅದು ಸಹಜವಾದ ವರ್ತನೆಯಾಗಿ ಕಂಡುಬರುತ್ತದೆ. ಆದರೆ ಭಾರತೀಯರಿಗೆ ಯಾವುದು ಸಹಜತೆಯ ಕ್ರಿಯೆ ಯಾಗಿರುವುದು ಅದು ಇಂಗ್ಲೆಂಡಿನವರಲ್ಲಿ ಶಿಷ್ಟಾಚಾರದ ಸಂಪ್ರದಾಯವಾಗಿ ಕಂಡುಬಂದಿದೆ. ಒಂದು ಹುಡುಗ ಒಂದು ಹುಡುಗಿ ಸಾರ್ವಜನಿಕ ಸ್ಥಳಗಳಲ್ಲಿ ಕಾಮಕೇಳಿ ಕ್ರೀಡೆಯಲ್ಲಿ ತೊಡಗಿರುತ್ತಾರೆ ಎಂದರೆ ಅದು ಆ ದೇಶದ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ಅಂತಹ ಒಂದು ಪ್ರಕ್ರಿಯೆ ನಮ್ಮ ದೇಶದಲ್ಲಿ ಗೋಚರಿಸಿದರೆ ಅವರು ಜನರ ಕೆಂಗಣ್ಣಿಗೆ ಗುರಿಯಾಗುವರು. ಅಂತವರನ್ನು ಕಾನೂನಿನ ಚೌಕಟ್ಟಿಗೆ ಸಿಲುಕಿಸುವರು. ನಮ್ಮ ಭಾರತದಲ್ಲಿ ಎಲ್ಲೆಂದರಲ್ಲಿ ಸಾರ್ವಜನಿಕರಿಗೆ

ಗೋಚರಿಸುವ ಸ್ಥಳದಲ್ಲಿ ಕಾಮತೃಷೆಗೆ ನಿಷೇಧವಿದೆ. ವಿದೇಶಿಗರ ನಾಡಿನಲ್ಲಿ ಇದೆಲ್ಲದಕ್ಕೂ ಮುಕ್ತ ಅವಕಾಶ ಇರುವುದನ್ನು ನೋಡಿದರೆ ಅಲ್ಲಿ ಶಿಷ್ಟಾಚಾರ ಸಂಸ್ಕೃತಿ ಗೌಣವಾಗಿದೆ. ಇಂಗ್ಲೆಂಡಿನಲ್ಲಿನ ಸಾರ್ವಜನಿಕ ಸ್ಥಳದಲ್ಲಿ ಈ ರೀತಿಯ ಪ್ರೇಮಿಗಳ ಕಾಮತೃಷೆ ಸಂಗತಿಗಳನ್ನು ನಮ್ಮ ದೇಶಕ್ಕೆ ಹೋಲಿಸಿದರೆ ಚಿತ್ತಿಮಳೆಯ ಸಂದರ್ಭದಲ್ಲಿ ನಾಯಿಗಳು ಎಲ್ಲೆಂದರಲ್ಲಿ ಸರಸ ಸಲ್ಲಾಪದ ದೃಶ್ಯಗಳನ್ನು ನೆನಪಿಸುತ್ತವೆ. ಒಂದು ರೀತಿ ಹಿರಿಯ ಕಿರಿಯರೆಂಬ ಭಯ ಭಕ್ತಿ ಗೌರವದ ಭಾವನೆ ಕ್ಷೀಣಿಸಿದೆ ಎಂದು ಅರ್ಥೈಸಬಹುದು.

ಧೂಮಪಾನದ ಸಂಸ್ಕೃತಿಯು ಎರಡು ದೇಶಗಳಲ್ಲಿ ಕಂಡುಬರುತ್ತದೆ. ಆದರೆ ಧೂಮಪಾನದ ಪರಿಕರಗಳು ವಿಭಿನ್ನ ಸಂಸ್ಕೃತಿಯಿಂದ ಇರುವುದನ್ನು ಕೇಶವನು ಗುರುತಿಸುತ್ತಾನೆ. **"ಕೇಶವ ಸ್ಟುವರ್ಟಿಗೆ ಪ್ಯಾಕಿನಿಂದ ಸಿಗರೇಟ್ ಹಿಡಿದ; "ಥ್ಯಾಂಕ್ಸ್ ಬೇಡ ನಾನು ಪೈಪನ್ನೇ ಸೇದುತ್ತೇನೆ; ನೀನು ಹೇಳುವುದು ನನಗೆ ವಿಚಿತ್ರವೆನಿಸುತ್ತೆ"** ಎಂದು ಪೈಫನ್ನು ಕಚ್ಚಿ ಕೇಶವನ ಸಿಗರೇಟ್ ಹಚ್ಚಿ, ನಂತರ ತನ್ನ ಪೈಪನ್ನು ಹತ್ತಿಸಿ ಹೊಗೆ ಎಳೆದನು"[5]. ಭಾರತ ದೇಶ ಪುರಾತನ ಸಂಸ್ಕೃತಿಯನ್ನು ಹೊಂದಿರುವ ದೇಶ. ಇಲ್ಲಿ ಧೂಮಪಾನದ ಪರಿಕರಗಳಾಗಿ ಎಕ್ಕೆ ಗಿಡದ ಎಲೆಯಿಂದ ಬುತ್ತಿ.(ಚಿಲುಮೆ, ಮೊಸಿ) ಬಳಪದ ಕಲ್ಲಿನಿಂದ ತಯಾರಿಸಿದ ಬತ್ತಿಯನ್ನು, ರೈತರಾಗಿದ್ದರೆ ಹೊಲದಲ್ಲಿ ದೊರೆಯುವ ಅರಳಿನ ಜೋಳದ ರವಧಿಯಿಂದ ಮೊಸಿಯನ್ನು ತಯಾರಿಸಿಕೊಳ್ಳುವರು ಬಿಡಿಗಳನ್ನು, ಸಿಗರೇಟ್ ಗಳನ್ನು ಪಡೆದುಕೊಂಡು ತಮ್ಮ ಧೂಮಪಾನದ ಚಟವನ್ನು ತೀರಿಸಿಕೊಳ್ಳುವರು. ಆದರೆ ವಿದೇಶಿಯಲ್ಲಿ ದೊರೆಯುವಂತ ಎಲೆಕ್ಟ್ರಿಕಲ್ ಚಾರ್ಜೆಬಲ್ ಪೈಪ್ ನಂತಹ ದುಬಾರಿ ವೆಚ್ಚದಾಯಕ ಪರಿಕರವನ್ನು ಬಳಸುವುದು ಅಪರೂಪ.

ಸ್ಟುಆರ್ಟ್ ನೊಂದಿಗೆ ಕೇಶವ ಟ್ರೈನ್‌ನಲ್ಲಿ ಪ್ರಯಾಣಿಸುವಾಗ ಆ ಗಾಡಿಯೊಳಗೆ ಅಂಟಿಸಿರುವ ಕೆಲವು ಜಾಹೀರಾತುಗಳನ್ನು ಗಮನಿಸುತ್ತಾನೆ. ಅವುಗಳಲ್ಲಿ ಬಿತ್ತರಗೊಂಡಿರುವ ವಿಷಯ ವಸ್ತುವನ್ನು ಗಮನಿಸುತ್ತಾ, ಒಂದು ಕಡೆಯಿಂದ ಓದುತ್ತಾ ಬಂದ. ಈ ಹಣ್ಣಿನ ರಸ ಕುಡಿದು ತೆಳ್ಳಗಾಗು, ವಾಲ್ಸ್ ಸಾಸೇಜುಗಳನ್ನು ತಿನ್ನು, ಒಲಿಸಿಕೊಳ್ಳುವ ಗಂಡಸರೆಲ್ಲ ಬರ್ವ್ಯಾನಿನಲ್ಲಿ ತಯಾರಾದ ಸೂಟುಗಳನ್ನು ಹಾಕಿಕೊಳ್ಳುತ್ತಾರೆ. ರಷ್ಯಾದಲ್ಲಿ ಈ ರೀತಿಯ ಅಡ್ವಟೈಸ್ಮೆಂಟಿನ ಬದಲು, ಕಮ್ಯುನಿಸಂ ಪ್ರಚಾರದ ಬೋರ್ಡ್ ಗಳಿರಬಹುದು ಅಲ್ಲವೇ ಸ್ಟುಅರ್ಟ್ ? ಪಾರ್ಟಿ ಸೇರು ಯುವಕರ ಮುಂದಾಳಾಗು, ಚಂದ್ರಲೋಕಕ್ಕೆ ಬಾ."[6] ಇಂಗ್ಲೆಂಡ್ ದೇಶದ ಜಯರಾತುಗಳು ಹೆಚ್ಚು ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದ ಸಂಸ್ಕೃತಿಯನ್ನು ಬಿಂಬಿಸುವದಕ್ಕಿಂತ ದೊಡ್ಡ ದೊಡ್ಡ ಕಂಪನಿಗಳು ಬೆಳವಣಿಗೆಯ ದೃಷ್ಟಿಕೋನವನ್ನು ಹೊಂದಿವೆ. ವ್ಯಕ್ತಿಗಳ ವೈಯುಕ್ತಿಕ ಸೌಂದರ್ಯತೆಗೆ ಹೆಚ್ಚಿನ ಆದ್ಯತೆ ನೀಡಿರುವಂತಹ ಜಾಹೀರಾತುಗಳು

ಬಿತ್ತರಿಸುವುದು ಸಾಮಾನ್ಯವಾಗಿದೆ. ದೇಶ ದೇಶಗಳೊಂದಿಗೆ ತೌಲನಿಕವಾಗಿ ಹೋಲಿಸಿ ನೋಡುವಂತಹ ಪ್ರಯತ್ನವನ್ನು ಕೇಶವ ಮಾಡಿದ್ದಾರೆ. ಅವರು ಹೇಳುವಂತೆ ರಷ್ಯಾ ದೇಶದಲ್ಲಿನ ಜಾಹಿರಾತುಗಳು ರಾಜಕೀಯ ಪಕ್ಷದ ಪ್ರಚಾರದ ಸಂಸ್ಕೃತಿಯನ್ನು ಹೊಂದಿರುವಂತವುಗಳಾಗಿವೆ.

ಇಂಗ್ಲೆಂಡ್ ದೇಶದ ವಿವಾಹಿತ ಹುಡುಗಿಯರ ವೇಷ ಭೂಷಣದ ಸಂಸ್ಕೃತಿಯನ್ನು ಕೇಶವ ಅವಲೋಕಿಸುತ್ತಾನೆ. ಕೇಶವನು ಅಲ್ಲಿಯ ಸ್ತ್ರೀ ಸಮುದಾಯದ ಮುಕ್ತವಾದ ಸ್ವಾತಂತ್ರ್ಯವನ್ನು ನಮ್ಮ ದೇಶದ ಮಹಿಳೆಗೆ ಇರುವ ಸ್ವಾತಂತ್ರ್ಯವನ್ನು ಮೆಲ್ಲುಕ ಹಾಕುತ್ತಾನೆ. "ಈ ಹುಡುಗಿಯರು ಸರಿ: ನನ್ನ ತಂಗಿಯರ ಹಾಗಲ್ಲ; ಒಂಟಿಯಾಗಿ ಓಡಾಡುತ್ತಾರೆ. ಕೆಲಸ ಮಾಡುತ್ತಾರೆ. ತಮ್ಮ ಹುಡುಗನನ್ನು ತಾವೇ ಆರಿಸಿಕೊಂಡು ಮದುವೆಯಾಗುತ್ತಾರೆ. ನಮ್ಮ ಹುಡುಗಿಯರೋ? ಅವರ ನಾಚಿಕೆಯೇನು, ಅವರ ಸೆಳೆನಯೇನು, ಮೊಲೆಯ ಮೇಲಿನ ಸೀರಿಯ ಸೆರಗನ್ನು ಎಳೆದುಕೊಳ್ಳುತ್ತಾ, ಅವರ ಬಿಂಕ, ಬಡಿವಾರ ವಯ್ಯಾರಗಳೇನು. ಈ ಹುಡುಗಿಯರು ಮೊಲೆಗಳನ್ನು ಧ್ವಜದಂತೆ ತ್ತಿ ತಮ್ಮ ಮೋಹಕತೆಯನ್ನು ಸಾರುತ್ತಾ ನಡೆಯುತ್ತಾರೆ. ನೇರ ನಿರ್ಭಯ ನಮ್ಮ ದೇಶದಲ್ಲಿ ಮಧ್ಯಮ, ಶ್ರೀಮಂತ ವರ್ಗದ ಹುಡುಗಿಯರಿಗೆ ಅವರ ಅಂಗಾಂಗಗಳನ್ನು ಒದಗಿಸಿಟ್ಟ ಬ್ರಹ್ಮಾಸ್ತ್ರ. ನನ್ನ ತಂಗಿಯರು ಯಾಕೆ ಮನೆಯವರನ್ನು ಹೀಗೆ ಬಿಡಿಸಬೇಕು. ತಮ್ಮ ಗಂಡನನ್ನು ತಾವೇ ಹುಡುಕಿ ಯಾಕ ಮದುವೆಯಾಗಬಾರದು ಎನಿಸಿದುಂಟು. ಆದರೆ ಅದು ಬರೆ ಅನಿಸಿಕೆಯಷ್ಟೆ. ಹಾಗೇನಾದರೂ ಅವರು ನಡೆದರೆ ಮೊದಲು ರೇಗುವನು ತಾನು. ಪ್ರತಿ ಭಾರತೀಯ ಯುವಕನು ಮನೆಯಲ್ಲಿ ಸನಾತನಿ. ಮನೆಯವರಿಗೆ ಕ್ರಾಂತಿ ಜೀವಿ."[7] ಭಾರತೀಯ ಸ್ತ್ರೀಯರಿಗೂ, ಇಂಗ್ಲೆಂಡಿನ ಸ್ತ್ರೀಯರಿಗೂ ಇರುವಂತಹ ಅಸ್ತಿತ್ವ ತುಂಬಾ ಭಿನ್ನತೆಯನ್ನು ಹೊಂದಿದೆ. ಅಲ್ಲಿನ ಹುಡುಗಿಯರು ತಮ್ಮ ಕುಟುಂಬದ ಹಿಡಿತದಿಂದ ಮುಕ್ತರಾಗಿದ್ದಾರೆ. ಉಡುಗೆ – ತೊಡುಗೆ, ಕೊಡುಕೊಳ್ಳುವಿಕೆ, ಆಯ್ಕೆ ಪ್ರಕ್ರಿಯೆಯಲ್ಲಿ ತಮ್ಮದೇ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ನಮ್ಮ ಭಾರತದಂತ ಸಂಪ್ರದಾಯಸ್ಥ ಸಂಸ್ಕೃತಿಯಲ್ಲಿ ಮಹಿಳೆ ಕುಟುಂಬದ ಕೈಗೊಂಬೆಯಾಗಿದ್ದಾಳೆ. ಅಂತದರಲ್ಲಿ ಒಬ್ಬಂಟಿಯಾಗಿ ತಿರುಗಿದರೆ ಆಡಿಕೊಳ್ಳುವರ ಬಾಯಿಗೆ ಮಾತಾಗಿ ಬಿಡುತ್ತಾಳೆ. ತನ್ನ ಕೆಲಸವನ್ನು ತಾನೇ ಹುಡುಕಿಕೊಂಡರೆ, ಕುಟುಂಬದವರ ಹಾಗೂ ಊರಿನವರ ದೃಷ್ಟಿಯಲ್ಲಿ ಸಂದೇಹಕ್ಕಿಡಾಗುತ್ತಾಳೆ. ಇದರ ಮೇಲು ತನ್ನ ಗಂಡನನ್ನು ತಾನೇ ಹುಡುಕಿಕೊಂಡು ಮದುವೆಯಾದರೆ ಘೋರ ಅಪರಾಧ ಎಂಬಂತೆ ಕುಟುಂಬದವರು ಮನೆಯಿಂದ ಹೊರ ಹಾಕುತ್ತಾರೆ. ಇಂತಹ ಕಟಿಬದ್ಧ ಸಂಪ್ರದಾಯವನ್ನು ಹೊಂದಿರುವ ದೇಶವಾಗಿದೆ. ನಮ್ಮ ಭಾರತೀಯ ಸ್ತ್ರೀ

ಕುಲವು ತಮ್ಮ ದೇಹದ ಅವಯವಗಳ ಮೇಲಿನ ಬಟ್ಟೆ ಸರಿಯದಂತೆ ನಿಗಾ ವಹಿಸುತ್ತಾರೆ. ಕಾರಣ ತಮ್ಮ ಮಾನ ಮರ್ಯಾದಿ ಎಂಬುದು ತಮ್ಮ ಅವಯವಗಳಲ್ಲಿ ಅಡಗಿದೆ ಎಂದು ಅವರು ಪೂರ್ವ ನಿರ್ಧರಿತವಾಗಿರುತ್ತಾರೆ. ಅದೇ ವಿದೇಶ ಮಹಿಳೆಯರು ತಮ್ಮ ದೇಹದ ಅಂಗಾಂಗಗಳ ಬಗ್ಗೆ ಸಹಜ ಸ್ವಭಾವವನ್ನು ಹೊಂದಿರುತ್ತಾರೆ. ಇದರಿಂದ ಮೈ ತುಂಬಾ ಉಡುಗೆಯ ಸಂಸ್ಕೃತಿಯನ್ನು ಅವರು ಅಷ್ಟಕಷ್ಟೇ ಇಷ್ಟಪಡುತ್ತಾರೆ. ವಿದೇಶಿಗರ ಉಡುಗೆ – ತೊಡುಗೆಗಳಿಗೆ ಮಾರುಹೋದರೆ ಕುಟುಂಬದವರು ಕೆಂಡಮಂಡಲವಾಗುವಂತ ಸ್ಥಿತಿ ನಮ್ಮಲ್ಲಿದೆ.

ಮನುಷ್ಯನ ವಿಲಾಸಿ ಜೀವನಕ್ಕೆ ಏನೆಲ್ಲ ಬೇಕು ಅದನ್ನು ಅನುಭವಿಸಲು ನಿರ್ಬಂದ ಇಲ್ಲದಿರುವ ದೇಶ ಇಂಗ್ಲೆಂಡ್ ಅಂದರೆ ತಪ್ಪಾಗಲಾರದು. ಕೇಶವನ ಬರುಡಾದ ಬದುಕಿನ ಜೀವನವನ್ನು ಕುರಿತು ಸ್ಟು ಆರ್ಟ್ ಹೀಗೆ ಮಾತನಾಡುವನು.” ಇಂಗ್ಲೆಂಡಿನಲ್ಲಿ ಜೀವವಿಲ್ಲ – ಈ ಸುಖಿ ಸಮಾಜದಲ್ಲಿ ಜೀವನಕ್ಕೊಂದು ಉದ್ದೇಶ ಇಲ್ಲ, ನೀನು ಹೇಳುತಿ ನಿನ್ನ ಜೀವನ ಬಡತನದ ವಿರುದ್ಧ ಹೋರಾಡುವುದರಲ್ಲಿ ವ್ಯಯವಾಯಿತು. ಕಾಮದ ಅನುಭವವಿಲ್ಲದ ಮುರುಟಿತೂಂತು, ನನ್ನನ್ನೇ ತಗೋ ಕೇಶವ್, ‘ನನಗೆ ಬಡತನದ ಅನುಭವವಿಲ್ಲ; ಹಸಿವೆಂದರೆ ಏನಂತ ಗೊತ್ತಿಲ್ಲ; 16ನೇ ವರ್ಷದಿಂದ ಈವರೆಗೆ ಹೆಣ್ಣು ಬೇಕಂತ ಅನಿಸಿದಾಗೆಲ್ಲ ಹೆಣ್ಣಿನ ಸುಖ ಅಲಭ್ಯ ಅಂತ ಅನಿಸಿದ್ದಿಲ್ಲ. ಸಂತಾನ ನಿರೋಧ ಎಲ್ಲರಿಗೂ ಗೊತ್ತಿರೋ ಈ ದೇಶದಲ್ಲಿ ಹುಡಿಗಿಯರ ಜೊತೆ ಮಲಗೋದು ಭಯದ ವಿಷಯವಲ್ಲ. ಎಲ್ಲಾ ಆಯಿತು ತಿಂದೆ, ಉಂಡೆ, ಮಲಗಿದೆ, ಸಂಭೋಗಿಸಿದೆ, ಇನ್ನಷ್ಟು ತಿಂದೆ, ಮಲಗಿದೆ ಸಂಭೋಗಿಸಿದೆ. ಆಮೇಲೆ ಬದುಕಿನಲ್ಲಿ ಇನ್ನು ಯಾವ ಥ್ರಿಲ್ಲಿದೆ?.[8] ಒಬ್ಬ ಜವಾಬ್ದಾರಿತ ಹಾಗೂ ಸಂಸ್ಕೃತ ವ್ಯಕ್ತಿಯ ಎಂದರೆ ಹೇಗೆ ಎಂಬುದನ್ನು ಕೇಶವನಿಂದ ಅರಿಯಬಹುದು. ವಿಸಂಸ್ಕೃತಿಯ ದ್ಯೋತಕವಾಗಿ ಸ್ಟುವರ್ಟ್ ಇಲ್ಲಿ ಗೋಚರಿಸುತ್ತಾನೆ. ಎರಡು ಸಂಸ್ಕೃತಿಗಳು ಯಾವ ರೀತಿ ವಿಭಿನ್ನ ಧೋರಣೆಯನ್ನು ತಾಳಿವೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಇಂಗ್ಲೆಂಡಿನಲ್ಲಿ ಯುವಕರು ತಮ್ಮ ಆಸೆ ಹಾಗೂ ವಿಲಾಸಿ ಜೀವನಕ್ಕೆ ಯಾವುದೇ ಅಡೆ ತಡೆ ಇಲ್ಲದೆ ಎಗ್ಗಿಲ್ಲದೆ ನಡೆಸಿಕೊಂಡು ಹೋಗುತ್ತಾರೆ. ಜೀವನದ ಬಗ್ಗೆ ಭೂತ ಭವಿಷ್ಯದ ಯೋಚನೆಯನ್ನು ಎಳ್ಳಷ್ಟು ಮಾಡದವರಾಗಿರುತ್ತಾರೆ. ಭಾರತೀಯ ಜನರ ಕೌಟುಂಬಿಕ ಸಂಸ್ಕೃತಿ ಭೂತ ಭವಿಷ್ಯದ ಬಗ್ಗೆ ಕಣ್ಣು ತೆರೆಯುವಂತದ್ದಾಗಿದೆ. ಇಂಗ್ಲೆಂಡಿನ ಯುವ ಪೀಳಿಗೆ ಹಿರಿಯ ಕಿರಿಯರ ಭಯ–ಭಕ್ತಿ ಗೌರವತೆ ಇಲ್ಲದೆ ಸ್ವಚ್ಛಾಚಾರದ ಜೀವನದ ಸಂಸ್ಕೃತಿ ಸ್ಟುಅರ್ಟ ನಂತವರಲ್ಲಿ ಕಾಣಬಹುದು. ಸ್ಟುಅರ್ಟ ಹೇಳುವಂತೆ ಅಲ್ಲಿನ ಮಹಿಳೆಯರು ತಮಗಿರುವಂತ ಸ್ವಾತಂತ್ರವನ್ನು ಸ್ವೇಚ್ಛಾಚಾರವಾಗಿ

ಬಳಸಿಕೊಳ್ಳುತ್ತಿರುವುದು ಗಮನಕ್ಕೆ ಬರುತ್ತದೆ. ಇಂಗ್ಲೆಂಡಿನ ಯುವ ಸಮುದಾಯವು ಯಾವ ಬಯಕೆಗಳನ್ನು ಹದಮಿಟ್ಟುಕೊಳ್ಳದೆ ಅನುಭವಿಸಿದ್ದರಿಂದ ಜೀವನದ ಮುಂದಿನ ಕುತೂಹಲತೆಯನ್ನು ಅಲ್ಲಗಳೆಯುತ್ತಾರೆ. ಇದಕ್ಕೆ ಭಿನ್ನವಾಗಿ ಭಾರತೀಯ ಕೇಶವನು ಬದುಕಿನ ಭವಿಷ್ಯದ ಬಗ್ಗೆ ಅನಂತ ಕನಸನ್ನು ಕಟ್ಟಿಕೊಂಡಿರುವುದು ಅವಲೋಕಿಸಬಹುದು.

ಭಾರತವು ಬಹುತ್ವ ಸಂಸ್ಕೃತಿಗೆ ಹೆಸರುವಾಸಿಯಾದ ರಾಷ್ಟ್ರ. ಅದರಂತೆ ಇಲ್ಲಿ ಜೀವನ ನಡೆಸುವವರು ತಮ್ಮ ತಮ್ಮ ಕುಟುಂಬದವರೊಂದಿಗೆ ಗಟ್ಟಿ ಸಂಬಂಧ ಹೊಂದಿರುವ ಕೂಡು ಕುಟುಂಬಗಳು ಕಂಡುಬರುತ್ತವೆ. ಸ್ಟುಅರ್ಟ್ ಹೇಳುವಂತೆ ಭಾರತವನ್ನು ಇಂಗ್ಲೆಂಡಿನ ಸಂಸ್ಕೃತಿಗೆ ಹೋಲಿಸಿ ನೋಡಿದರೆ, ತುಂಬಾ ಭಿನ್ನತೆಗಳು ಎದ್ದು ಗೋಚರಿಸುತ್ತವೆ. ಭಾರತ ದೇಶ ಹಳ್ಳಿಗಳಿಂದ ಕೂಡಿದ ದೇಶವಾಗಿರುವುದರಿಂದ, ರಕ್ತ ಸಂಬಂಧಗಳು ಇನ್ನೂ ಗಟ್ಟಿಗೊಂಡಿವೆ. ಭಾರತದ ದೊಡ್ಡ ದೊಡ್ಡ ನಗರ ಪ್ರದೇಶಗಳಲ್ಲಿ ಈ ಕೂಡು ಕುಟುಂಬ ಪದ್ಧತಿ ಅಲ್ಲಲ್ಲಿ ಬಿರುಕು ಬಿಟ್ಟಿವೆ. ಆದರೆ ಇಂಗ್ಲೆಂಡನಂತ ಏಕಾಂಗಿತನತೆ ಸಂಸ್ಕೃತಿ ಮನೆ ಮಾಡಿಲ್ಲ. "ನಾನು ಉದ್ದೇಶದ ಮಾತು ಯಾಕೆ ಎತ್ತಿದನೆಂದರೆ, ಈ ದೇಶದಲ್ಲಿ ಜನ ತಮ್ಮದೇ ಆದ ಒಂದು ಸ್ವಾರ್ಥದ ಪುಟ್ಟ ಲೋಕದಲ್ಲಿ ಇದ್ದುಬಿಡುತ್ತಾರೆ. ಸಮಸ್ಥಿ ಕುಟುಂಬಗಳಿರುವ ನಿನ್ನಂತ ದೇಶದಲ್ಲಿ ಇನ್ನೂ ವ್ಯಕ್ತಿ ಸಮಾಜಗಳ ನಡುವೆ ರಕ್ತ ಸಂಬಂಧ ಉಳಿದಿದೆ. ಆದರೆ ನಮ್ಮಲ್ಲಿ ನೋಡು ಹದಿನಾರನೆಯ ವರ್ಷಕ್ಕೆ ಒಬ್ಬ ಹುಡುಗ ದುಡಿಯೋಕೆ ಪ್ರಾರಂಭಿಸುತ್ತಾನೆ. 18ಕ್ಕೆ ಮದುವೆಯಾಗುತ್ತಾನೆ. ಉದ್ಯೋಗ ದೊರೆಯದಿದ್ದರೆ ಅವನಿಗೆ ನಿರುದ್ಯೋಗ ವೇತನ ಸಿಗುತ್ತೆ. ಮುದುಕರಾದ ಅಪ್ಪ ಅಮ್ಮನನ್ನು ನೋಡಿಕೋಬೇಕು, ಯೌವ್ವನದಲ್ಲಿ ವೃದ್ಧಾಪ್ಯದ ಅನುಭವದ ಜೊತೆ ಸಂಬಂಧ ಬೇಕು ಅನಿಸುವ ಒತ್ತಾಯ ಇಲ್ಲ. ಅಪ್ಪ ಅಮ್ಮನನ್ನು ನೋಡಿಕೊಳ್ಳಲು ಓಲ್ಡ್ ಪೀಪಲ್ಸ್ ಹೋಮ್ ಇದ್ದಾವೆ."[9] ಇಂಗ್ಲೆಂಡ್ ದೇಶದಲ್ಲಿ ಕೂಡು ಕುಟುಂಬದ ಸಂಸ್ಕೃತಿ ಇಲ್ಲ. ಈ ಕೂಡು ಕುಟುಂಬ ಸಂಸ್ಕೃತಿಯಲ್ಲಿ ಉದ್ಯೋಗ ಮರೆಮಾಚಿಕೆಯಾಗಿರುತ್ತದೆ. ಯಾರೋ ದುಡಿಯುವರು, ಇನ್ಯಾರೋ ಕುಳಿತು ಉಣ್ಣುವಂತವರು ಇರುತ್ತಾರೆ. ಇಂಗ್ಲೆಂಡಿನಂತ ವಿಭಕ್ತ ಕುಟುಂಬದಲ್ಲಿ ವೈಯುಕ್ತಿಕ ಜವಾಬ್ದಾರಿ ಹೆಚ್ಚಾಗಿರುತ್ತದೆ. ಉಷ್ಣವಲಯದ ಪ್ರದೇಶಗಳಾಗಿರುವುದರಿಂದ ಅಲ್ಲಿಯ ಜನರು ಬಹುಬೇಗನೆ ಪ್ರಾಯಕ್ಕೆ ಬರುತ್ತಾರೆ. ಈ ಕಾರಣದಿಂದ ಬೇಗನೆ ಮದುವೆಯಾಗುತ್ತಾರೆ. ಶಿಕ್ಷಣ ಪದ್ಧತಿಯು ಕೌಶಲ್ಯಭರಿತವಾಗಿರುವುದರಿಂದ ತಮ್ಮ ಉದ್ಯೋಗವನ್ನು ತಾವೇ ಕಂಡುಕೊಳ್ಳುವರು. ಇದರಿಂದ ಅವರು ಯಾವುದೇ ಸರಕಾರಿ ನೌಕರಿಯನ್ನು ಕಾಯದೆ; ತಮ್ಮ ಹದಿನಾರನೇ ವಯಸ್ಸಿಗೆ ದುಡಿಮೆಯಲ್ಲಿ ತೊಡಗಿಕೊಳ್ಳುತ್ತಾರೆ. ಈ ಶಿಕ್ಷಣದ ಪದ್ಧತಿ ಭಾರತದಲ್ಲಿ ಭಿನ್ನತೆಯಾಗಿದೆ. ಇಲ್ಲಿನ

ಮುಕ್ಕಾಲು ಭಾಗದ ಜನರು ಸರಕಾರಿ ನೌಕರಿಗಾಗಿ 30 – 40 ವರ್ಷಗಳವರೆಗೆ ಕಾಯುತ್ತಿರುತ್ತಾರೆ. ಇದರಿಂದ ಅವರದೇ ಆದ ಸ್ವಂತ ದುಡಿಮೆಯು ಇಲ್ಲ; ಸರಿಯಾದ ವಯಸ್ಸಿಗೆ ಮದುವೆಯಾಗದೆ ಕಾಲ ಕಳೆಯುವಂತಹ ಸ್ಥಿತಿಯಲ್ಲಿದ್ದಾರೆ; ಇದು ಒಂದು ರೀತಿ ಕುಟುಂಬದೊಂದಿಗೆ ಸಂಬಂಧವನ್ನು ಗಟ್ಟಿಗೊಳಿಸುವ ಪರಿಯಾಗಿದೆ. ಭಾರತೀಯರಲ್ಲಿ ವಿದ್ಯಾವಂತರು ಅವಿದ್ಯಾವಂತರನ್ನು ಗಮನಿಸಿದಾಗ ಕೂಡು ಕುಟುಂಬದೊಂದಿಗೆ ನೆಲೆಸಿಕೊಂಡಿದ್ದಾರೆ. ಪಾಶ್ಚಾತ್ಯದ ಪ್ರಭಾವದಿಂದ ಮಹಾನಗರಗಳಲ್ಲಿ ಮಾತ್ರ ಬೆರಳು ಎಣಿಕೆಯ ಕುಟುಂಬಗಳು ತಮ್ಮ ಸ್ವಾರ್ಥತೆಯಿಂದ ವೃದ್ಧ ತಂದೆ ತಾಯಿಗಳನ್ನು ವೃದ್ಧಾಶ್ರಮಗಳಲ್ಲಿ ಸೇರಿಸುವುದು ಗೋಚರಿಸುತ್ತದೆ. ಇಂಗ್ಲೆಂಡಿನಲ್ಲಿ ಇದ್ದಂತೆ ಓಲ್ಡ್ ಪೀಪಲ್ಸ್ ಹೋಮ್ ಪರಿಪಾಠ ನಮ್ಮ ದೇಶದಲ್ಲಿ ಇರುವುದಿಲ್ಲ.

ಯು. ಆರ್. ಅನಂತಮೂರ್ತಿಯವರ ಈ ಕಥೆಯಲ್ಲಿ ಭಾರತ ಹಾಗೂ ಇಂಗ್ಲೆಂಡ್ ದೇಶದ ಸಂಸ್ಕೃತಿಯ ಮೌಲ್ಯವನ್ನು ತೌಲನಿಕವಾಗಿ ಗಮನಿಸಲಾಗಿದೆ. ಅಂತಹ ಸಂಸ್ಕೃತಿಗಳಾದ ಉಡುಗೆ – ತೊಡುಗೆಗಳು, ಜಾಹೀರಾತು ಸಂಸ್ಕೃತಿ, ಪ್ರೀತಿ – ಪ್ರೇಮದ ವಿಷಯಗಳು, ಜನರ ಜನರ ಮಧ್ಯೆ ಇರುವ ಶಿಷ್ಟಾಚಾರದ ಸಂಸ್ಕೃತಿ ಹಾಗೂ ಹವ್ಯಾಸಗಳ ಮನೋವೃತ್ತಿ, ವ್ಯಾಪಾರ ವಹಿವಾಟಿನ ರೀತಿಯಲ್ಲಿ ಪರಿಚಯಿಸುವಿಕೆ, ಅವಿವಾಹಿತ ಹುಡುಗ ಹುಡುಗಿಯರ ವರ್ತನೆಯ ಸಂಗತಿ, ವಿಲಾಸಿ ಜೀವನದ ನೋಟಗಳು, ಕೂಡು ಕುಟುಂಬದ ಸಂಸ್ಕೃತಿಯ ಕುರಿತು ಹೀಗೆ ಹತ್ತು ಹಲವಾರು ವಿಚಾರಗಳನ್ನು ಇಟ್ಟುಕೊಂಡು ಕಥೆಯ ರಚನೆಯಾಗಿರುತ್ತದೆ. ಕಥೆಯಲ್ಲಿ ಕೇಶವನು ಭಾರತೀಯ ಸಂಸ್ಕೃತಿಗೆ ಜೋತು ಬಿದ್ದಿರುವಂತದ್ದು ತಿಳಿಯುತ್ತದೆ. ಎಂತಹ ಕಷ್ಟದ ಸಂದರ್ಭ ಬಂದು ಒದಗಿದರೂ ಭಾರತೀಯ ಶಿಷ್ಟಾಚಾರದ ಸಂಸ್ಕೃತಿ ಮರೆಯದಿರುವುದು ಮುಖ್ಯವಾಗಿರುತ್ತದೆ. ಅದೇ ಸ್ಟುಅರ್ಟ್ ಯಾವುದೇ ಕಟ್ಟು ಪಾಡುಗಳಿಲ್ಲದೆ; ವಿಲಾಸಿ ಜೀವನ ಸುಖದಲ್ಲಿ ಮೈಪವಡಿಸುವುದು ಕಂಡುಬರುತ್ತದೆ.

## ಕೊನೆಯ ಟಿಪ್ಪಣಿಗಳು

1) ನಾಯಕ ಜಿ. ಎಚ್. (ಸಂ), ಕನ್ನಡ ಸಣ್ಣ ಕಥೆಗಳು, ಪುಟ ಸಂಖ್ಯೆ – 172.
2) ಅದೇ. ಪು. ಸಂ. – 173.
3) ಅದೇ. ಪು.ಸಂ. – 173.
4) ಅದೇ. ಪು.ಸಂ. – 173.
5) ಅದೇ. ಪು. ಸಂ. – 173.
6) ಅದೇ. ಪು. ಸಂ. – 177.

7) ಅದೇ. ಪು. ಸಂ. – 178.

8) ಅದೇ. ಪು. ಸಂ. – 180.

9) ಅದೇ. ಪು. ಸಂ. – 180.

## ಪರಮಾರ್ಶನ ಗ್ರಂಥಗಳು

1) ನಾಯಕ ಜಿ. ಎಚ್. (ಸಂ), 2017, ಕನ್ನಡ ಸಣ್ಣ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸ ದೆಹಲಿ.

2) ವೆಂಕಟ ಸುಬ್ಬಯ್ಯ ಜಿ. (ಸಂ), ರಾಜಶ್ರೀ ಸತೀಶ್(ಸ.ಸಂ.), 2010, ಕನ್ನಡ ಕ್ಲಿಷ್ಟಪದ ಕೋಶ, ಫ್ರೀಜಂ ಬುಕ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

3) ಶಿವರಾಮ್ ಕಾರಂತ ಕೆ. , 1990, ಸಿರಿಗನ್ನಡ ಅರ್ಥಕೋಶ – ಕನ್ನಡ – ಕನ್ನಡ ಎಸ್. ಬಿ. ಎಸ್. ಪ್ರಕಾಶನ, ಬೆಂಗಳೂರು.

**ಡಾ. ಮಹಾಂತೇಶ್ ದುರಗಣ್ಣವರ**
ಕನ್ನಡ ಅತಿಥಿ ಉಪನ್ಯಾಸಕರು,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ ಬಳ್ಳಾರಿ
ಸ್ನಾತಕೋತ್ತರ ಕೇಂದ್ರ ಕೊಪ್ಪಳ ಜಿಲ್ಲೆ,
ಪಿನ್ ಕೋಡ್: 583236
mahanteshnkst@gmail.com

# ಜಾನಪದ ಸಾಹಿತ್ಯದಲ್ಲಿ ಹೆಣ್ಣು ಮತ್ತು ತಾಯ್ತನದ ಹಂಬಲ

¤ ಪ್ರೊ. ರೇಣುಕಮ್ಮ .ಜೆ

ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ಜನಪದ ತ್ರಿಪದಿ ಅತ್ಯಂತ ಜನಪ್ರಿಯವಾದುದು. ಇದು ಗೇಯಗುಣವನ್ನು ಪ್ರಧಾನವಾಗುಳ್ಳ ದೃಷ್ಟಿಯಿಂದ ಸಾವಿರಾರು ವರ್ಷಗಳ ಹಿಂದಿನ ಜನರ ಸಂಸ್ಕೃತಿಯನ್ನು ತಿಳಿಸುತ್ತದೆ. ಹೆಂಗಸರು ಬೆಳಿಗ್ಗೆ ಏಳುವುದರಿಂದ ತೊಡಗಿ ದಿನದ ವ್ಯವಹಾರವನ್ನು ಮುಗಿಸುವವರೆಗೆ ವಿವಿಧ ಹಂತಗಳಿಗೆ ಸಂಬಂಧಿಸಿದಂತೆ ಅನುಭವಗಳ ಅಭಿವ್ಯಕ್ತಿಯೇ ಇದಾಗಿದೆ. ಮುಖ್ಯವಾಗಿ ಸ್ತುತಿಪರವಾದ ತ್ರಿಪದಿಗಳು ವಿಶೇಷವಾಗಿ ಗಮನಸೆಳೆಯುತ್ತವೆ. ಕೌಟುಂಬಿಕ ಜೀವನದ ಸುಖ ದುಃಖ, ಬಂಜೆಯ ಬವಣೆ ಸವತಿ ಮಾತ್ಸರ್ಯ, ಅತ್ತಿಗೆ ನಾದಿನಿಯರ ಪ್ರೀತಿ, ಅಣ್ಣ ತಂಗಿಯರ ವಾತ್ಸಲ್ಯ, ಗಂಡ ಹೆಂಡಿರ ದಾಂಪತ್ಯ, ತೌರಿನ ಸುಖ ಈ ಮೊದಲಾದ ಸಂಗತಿಗಳನ್ನು ಕುರಿತ ತ್ರಿಪದಿಗಳು ಕನ್ನಡದ ಅತ್ಯಂತ ಕೋಮಲ ಹಾಗೂ ಹೃದಯಸ್ಪರ್ಶಿ ಜನಪದ ಗೀತೆಗಳಾಗಿವೆ. ಇವರು ಕಟ್ಟಿದ ಸಾಹಿತ್ಯದಲ್ಲಿ ತೀವ್ರತರವಾದ ಬದುಕಿನ ಅವಿನಾಭಾವ ಸಂಬಂಧವಿದೆ. ಈ ತ್ರಿಪದಿಗಳಲ್ಲಿ ಹೆಣ್ಣಿನ ಸ್ಥಾನವನ್ನು ಕುರಿತು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

**ಹೆಣ್ಣು ಹಡೆಯಲು ಬೇಡ, ಹೆರವರಿಗೆ ಕೊಡಬೇಡ,**
**ಹೆಣ್ಣು ಹೋಗುವಾಗ ಅಳಬೇಡ ॥ ಹಡೆದವ್ವ**
**ಸಿಟ್ಟಾಗಿ ಶಿವನ ಬೈಬ್ಯಾಡ.**

ಮೇಲಿನ ತ್ರಿಪದಿಯಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಮೂರು ಸಾಲಿನ ಒಂದು ಸಣ್ಣ ಪದ್ಯದಲ್ಲಿ ಕಣ್ಣಿಗೆ ಕಟ್ಟುವಂತೆ ಅವರು ಕೊಡುವ ಚಿತ್ರ ಅದ್ಭುತವಾದುದು. ಒಂದು ಸಂದರ್ಭ, ಒಂದು ಸ್ಥಳದ ಅಥವಾ ಒಂದು ವಸ್ತುವಿನ ಚಿತ್ರಣವನ್ನು ಕಣ್ಣ

ಮುಂದೆ ತಂದು ನಿಲ್ಲಿಸುವ ಶಕ್ತಿ ಜನಪದರದ್ದು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮದುವೆಮಾಡಿಕೊಂಡು ಗಂಡನ ಮನೆಗೆ ಹೋಗಬೇಕು ಆಗ ತಾಯಿ ಇಷ್ಟು ದಿನ ಸಾಕಿ ಸಲಹಿದ ತನ್ನ ಮಗಳನ್ನು ಬೇರೆಯವರ ಮನೆಗೆ ಕಳುಹಿಸುವಾಗ ಅವಳ ನೋವು, ಕೋಪ ಇಲ್ಲಿ ವ್ಯಕ್ತವಾಗಿದೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂದು ಗೊತ್ತಿದ್ದರೂ ವಿದಾಯದ, ದುಃಖದ ಸನ್ನಿವೇಶದಲ್ಲಿ ಹೆಣ್ಣನ್ನು ಹಡೆದು ಪರರಿಗೆ ಕೊಡುವಾಗಿನ ಪ್ರತಿಭಟನೆ ಆಕೆಯದು. ತಾಯಿಗೆ ಮಗಳು ಸರ್ವಸ್ವ. ಮಗಳ ಪಾಲಿಗೆ ಆಕೆ ಪವಿತ್ರ ಆತ್ಮ ದೇವತೆ.

ತಾಯಿಯ ಪ್ರೀತಿ, ಮಮತೆ ಸರಿಗಟ್ಟಬಲ್ಲದ್ದು ಯಾವುದೂ ಇಲ್ಲ. ಈ ಭಾವನೆಯನ್ನು ತೋಡಿಕೊಳ್ಳುವಲ್ಲಿ ಅವರು ಕೊಡುವ ಹೋಲಿಕೆ ಮನಮೋಹಕವಾಗಿದೆ.

**ಯಾರಿದ್ದರು ನನ್ನ ತಾಯವ್ವನ್ಹೋಲ್ಯಾರ**
**ಸಾವಿರ ಕೊಳ್ಳಿ ಒಲಿಯಾಗ। ಉರಿದರೂ**
**ಜ್ಯೋತಿ ನಿನ್ಯಾರು ಹೋಲ್ಯಾರ॥**

ಸಾವಿರ ಕೊಳ್ಳಿ ಒಲೆಯಲ್ಲಿ ಉರಿಯುತ್ತಿದ್ದರೂ ಒಂದು ಸಣ್ಣ ಹಣತೆ ನೀಡುವ ಬೆಳಕನ್ನು ಅದು ನೀಡಲಾರದು. ಒಲೆಯಲ್ಲಿ ಸಾವಿರ ಕೊಳ್ಳಿ ಉರಿಯುತ್ತಿರುವುದು ಅದು ಬೇರೊಂದು ಬಗೆಯಲ್ಲಿ ಪ್ರಯೋಜನಕಾರಿಯಾಗಬಲ್ಲುದೇ ಹೊರತು, ಮನೆಗೆ ಬೆಳಕನ್ನು ನೀಡುವುದಾಗಲೀ ಕತ್ತಲನ್ನು ಕಣ್ಮರೆಯಾಗಿಸುವ ಕಾರ್ಯವನ್ನಾಗಲಿ ಮಾಡಲಾರದು. ಪ್ರೀತಿ ತೋರದ ಮಮತೆ ಇಲ್ಲದ ನೂರಾರು ಮಂದಿ ಮನೆತುಂಬ ಇದ್ದರೂ ಪ್ರಯೋಜನವೇನು? ಅದರಿಂದ ಬೆಳಿಗ್ಗೆ ಎದ್ದರೆ ಸಮಸ್ಯೆಗಳೇ ಹೊರತು ಸಮಾಧಾನ ಸಿಗಲಾರದು. ಕೊಳ್ಳಿಯನ್ನು ತುಂಬಿಕೊಂಡ ಒಲೆ ಹೊಗೆಯನ್ನು, ಕಣ್ಣುರಿಯನ್ನು ಉಂಟುಮಾಡುವಂತೆ ಈ ಜನ ನಮ್ಮನ್ನು ಕಾಡುತ್ತಾರೆ. ಬೇರೆಯವರಿಂದ ಮಗಳಿಗೆ ದೊರೆಯುವ ಪ್ರೀತಿಯಲ್ಲಿ ಬೆಳಕಿಗಿಂತ ಉರಿ ಹೆಚ್ಚು – ಕೊಳ್ಳಿಯಂತೆ. ಆದರೆ ತಾಯಿಯ ಮಮತೆ, ವಾತ್ಸಲ್ಯ, ಪ್ರೀತಿ ನಂದಾದೀಪದಂತೆ" ಒಂದು ಹಣತೆ ಕಂಡು ಕಾಣದಂತೆ ಇಡೀ ಮನೆಯನ್ನೇ ಬೆಳಗುತ್ತದೆ. ಕತ್ತಲನ್ನು ದೂರವಾಗಿಸಿ ಮನೆ ಮನ ಎರಡನ್ನು ಬೆಳಗುತ್ತದೆ. ತಾಯಿ ಅಂಥಹ ಜ್ಯೋತಿಗೆ ಸಮಾನಳು. ಮನದ ಅಂಧಕಾರವನ್ನು ತೊಲಗಿಸುವ, ಮನೆಯ ಕತ್ತಲನ್ನು ಹೋಗಲಾಡಿಸುವ ದೀಪ ಶುಭದ ಸಂಕೇತ. ಅಲ್ಲದೆ ಪಾವಿತ್ರ್ಯದ ದೃಷ್ಟಿಯಿಂದ ಜ್ಯೋತಿಗಿರುವ ಸ್ಥಾನ ಕೊಳ್ಳಿಗಿಲ್ಲ. ಹಾಗಾಗಿ ತಾಯಿಯನ್ನು ಅಂತಹ ಶುಭದ ಸಂಕೇತವಾದ ಜ್ಯೋತಿಗೆ ಹೋಲಿಸಿರುವಲ್ಲಿ ಜನಪದರ ಪ್ರತಿಭೆ ಸ್ಪಷ್ಟವಾಗಿ ವ್ಯಕ್ತಗೊಂಡಿರುವುದನ್ನು ಕಾಣಬಹುದು.

**ಬೇಸಿಗೆ ದಿವಸಕೆ ಬೇವಿನ ಮರ ತಂಪು**
**ಹೇಮಾವತಿ ಎಂಬ ಹೊಳೆ ತಂಪು । ಹಡೆದಮ್ಮ**
**ನೀ ತಂಪು ನನ್ನ ತವರೀಗೆ॥**

ಧರೆಯ ಮೇಲೆ ನೂರಾರು ಮರಗಳಿದ್ದರೇನು! ಬೇಸಿಗೆಯಲ್ಲಿ ಎಲ್ಲ ಮರಗಳೂ ತಂಪನ್ನು ಎರೆಯುವುದಿಲ್ಲ. ಎಲ್ಲ ಮರಗಳು ಆಶ್ರಯ ನೀಡುವುದಿಲ್ಲ. ಬೇವಿನಮರ ದಟ್ಟವಾದ ಹಸಿರನ್ನು ತುಂಬಿಕೊಂಡು ಬಂದವರಿಗೆ ಹಿತವನ್ನು ನೀಡುತ್ತದೆ. ಆಯಾಸವನ್ನು ಪರಿಹರಿಸುತ್ತದೆ. ಮೈ ಮನಸ್ಸುಗಳಿಗೆ ಹಿಗ್ಗನ್ನು ತರುತ್ತದೆ. ಹಾಗೆಯೇ ಹೇಮಾವತಿ ಹೊಳೆಯು ನಲವನ್ನು ನೀಡಬಲ್ಲದು. ಎಲ್ಲ ಹೊಳೆಗಳು ಬತ್ತಿ ಹೋಗಬಹುದು. ಆದರೆ ಕೆಲವು ಹೊಳೆಗಳಲ್ಲಿ ನೀರಿದ್ದು ಆಳವಿಲ್ಲದೆ ಬಿಸಿಲಿಗೆ ಕಾದು ಅಹಿತವೆನಿಸಬಹುದು. ಪವಿತ್ರವಾದ ಹೇಮಾವತಿ ನದಿಯ ನೀರು ತಂಪಾದುದು. ಹತ್ತಿರ ಸುಳಿದವರಿಗೆ ಆನಂದವನ್ನು ತರುವಂಥದು. ಅಂತೆಯೇ ತನ್ನ ತಾಯಿ! ಕಷ್ಟದಲ್ಲಿದ್ದಾಗ, ದುಃಖದಲ್ಲಿದ್ದಾಗ ಅವಳನ್ನೋಮ್ಮೆ ನೆನೆದರೆ ಮನಸ್ಸಿನ ನೋವು ಕ್ಷಣಮಾತ್ರದಲ್ಲಿ ಮಾಯವಾಗುತ್ತದೆ. ಶಾಂತಿ ನೆಮ್ಮದಿ ಪ್ರಾಪ್ತವಾಗುತ್ತದೆ. ತಾಯಿಯನ್ನು ಕುರಿತು ಹಾಡಿದಷ್ಟು ಅವಳ ಮನಸ್ಸು ಗೌರವಭಾವದಿಂದ ತುಂಬಿ ಹರಿಯುತ್ತದೆ. ಮಗಳು ನಾನಾ ವಿಧವಾಗಿ ನಿತ್ಯವೂ ತಾಯಿಯ ಚಿತ್ರವನ್ನು ತನ್ನ ಕಣ್ಣೆದುರಿಗೆ ಕಲ್ಪಿಸಿಕೊಂಡು ಮಾನಸಿಕವಾಗಿಯಾದರೂ ಅವಳೊಡನೆ ಸಂಬಂಧವನ್ನು ಇಟ್ಟಿಕೊಳ್ಳುತ್ತಾಳೆ.

ಒಳ್ಳೆಯ ಹೆಂಡತಿಯಾಗಿ ಹೆಸರಾದವಳು ಒಳ್ಳೆಯ ತಾಯಿಯಾಗಿಯೂ ಬಾಳ್ವೆ ನಡೆಸುತ್ತಾಳೆ. ಮಗಳಾಗಿ ತಾಯಿ ಕೂಡ ತನ್ನ ಮಗಳನ್ನು ತೌರೂರಿನಲ್ಲಿ ಅನೇಕ ಬಾರಿ ನೆನೆಯುತ್ತಾಳೆ. ಮಗಳ ನೆನಪನ್ನು ತರುವ ಅನೇಕ ಸನ್ನಿವೇಶಗಳು ಮೂಡಿಬರುತ್ತವೆ. ಹತ್ತಾರು ವರ್ಷ ತನ್ನ ನೆರಳಾಗಿ ಆಡಿ ಬೆಳೆದ ಮಗಳನ್ನು ನೆನೆದಾಗಲೆಲ್ಲ ಕೆಲವು ಚಿತ್ರಗಳು ಅವಳ ಕಣ್ಣೆದುರಿಗೆ ಹಾದುಹೋಗುತ್ತವೆ. ಹೊಸಸೀರೆಯನ್ನು ಉಟ್ಟು ಹಸೆಯ ಮೇಲೆ ನಿಂತ ಊರಿನ ಹೆಣ್ಣೊಂದನ್ನು ಕಂಡಾಗ ತಟ್ಟನೆ ಅವಳ ಮನಸ್ಸು ತನ್ನ ಮಗಳ ಚಿತ್ರವನ್ನು ತುಂಬಿಕೊಳ್ಳುತ್ತದೆ.

**ತಾಯಮ್ಮ ತನ್ಮಗಳ ಏನೆಂತ ನೆನೆದಾಳೋ**
**ಹೊಸಬಣ್ಣ ಉಟ್ಟು ಹಸೆಮೇಗೆ। ನಿಂತ್ಕೊಂಡು**
**ತಾಯಮ್ಮ ಮಗಳ ಕರೆದಾಳು**

ತೌವರೂರನ್ನು ಕುರಿತ ಪದಗಳು ಹೀಗೆ ತಾಯಿ ಮಗಳ ನಡುವಿನ ಪ್ರೀತಿ

ವಾತ್ಸಲ್ಯಗಳ ಪ್ರಪಂಚವನ್ನು ವಿವರವಾಗಿ ಬಿಡಿಸಿ ತೋರಿಸುತ್ತವೆ. ತೌರನ್ನು ನೆನೆದು ಹಂಬಲಿಸುವ ಮಗಳು, ಮಗಳನ್ನು ನೆನೆದು ಹಲುಬುವ ತಾಯಿ, ಇವರಿಬ್ಬರ ನಡುವೆ ಪ್ರೀತಿಯ ಹೊಳೆ ಹರಿದಿರುವುದು ಈ ಹಾಡುಗಳಲ್ಲಿ ವ್ಯಕ್ತವಾಗಿದೆ.

ಹೆಣ್ಣು ತನ್ನ ತೌರನ್ನು ಮಾತ್ರ ಹಾಡಿ ಹೊಗಳುವುದಿಲ್ಲ. ತೌರಿನ ನೆನಪಿನಲ್ಲಿ ತಾನು ಬಾಳಿ ಬದುಕುವ ಗಂಡನ ಮನೆಯನ್ನು ಉಪೇಕ್ಷಿಸುವವಳಲ್ಲ. ತಾನು ಕೈಯಿಡಿದ ಪತಿ, ಅತ್ತೆ, ಮಾವ, ಮೈದುನ ಮುಂತಾದವರ ಬಗ್ಗೆಯೂ ಅವಳು ಹಾಡು ಕಟ್ಟಿ ಹಾಡಿದ್ದಾಳೆ. ಮುತ್ತೈದೆತನವನ್ನು ಕರುಣಿಸುವಂತೆ ಸದಾ ದೇವರಲ್ಲಿ ಮೊರೆಯಿಡುವ ಅವಳು ತನ್ನ ಬದುಕು ಪತಿಗಾಗಿ ಮೀಸಲಾದುದು ಎಂದು ನಂಬಿದವಳು.

**ಮುತ್ತೈದೆತನ ಬೇಡಿ ಮೂರುಸುತ್ತು ಬಲಗೊಂಬೆ**
**ಮುತ್ತಿನ ಮೂಗುತಿಯರಸರಿಗೆ । ಆಯುಷ್ಯ ಬೇಡಿ**
**ಮತ್ತೈದು ಸುತ್ತು ಬಲಗೊಂಬೆ॥**

ತಾನು ಮುತ್ತೈದೆಯಾಗಿದ್ದರೆ ಮಾತ್ರ ತನ್ನ ಬದುಕು ಸಾರ್ಥಕ ಎಂದು ತಿಳಿದವಳು. ಅಂತ ಸೌಭಾಗ್ಯವನ್ನು ಕರುಣಿಸಲೆಂದು ಗುಡಿಯನ್ನು ಸುತ್ತಿ ಬರುವ ಅವಳು ತನ್ನ ಬದುಕಿಗೆ ಆಸರೆಯಾದ ತನ್ನ ಪತಿಗೆ ಪ್ರಾರ್ಥನೆಗಳೆಲ್ಲ ಮೀಸಲು. ಕೈಯಿಡಿದ ಗಂಡ ಒಳ್ಳೆಯವನಾದರೆ ಅವನ ಪ್ರೀತಿಯ ಮರೆಯಲ್ಲಿ ಉಳಿದ ನೋವನ್ನು ನುಂಗಿಕೊಂಡು ಜೀವನವನ್ನು ನಡೆಸುತ್ತಾಳೆ.

ಹೆಣ್ಣಿನ ಜೀವನದಲ್ಲಿ ತಾಯ್ತನ ಎಂಬುದು ಒಂದು ಪವಿತ್ರವಾದ ಹಾಗೂ ಮಹತ್ವದ ಘಟ್ಟ. ಹೆಣ್ಣು ಜೀವನದ ಪರಿಪೂರ್ಣತೆಯನ್ನು ಹೊಂದುವುದು ಮಕ್ಕಳನ್ನು ಪಡೆದಾಗಲೇ. ಅದರಲ್ಲಿಯೂ ಜನಪದರ ನಂಬಿಕೆಯಂತೆ ಬಂಜೆ ಎಂಬ ಶಬ್ದ ಕಳೆಯಬೇಕಾದರೆ ಮಕ್ಕಳನ್ನು ಪಡೆಯಲೇ ಬೇಕಿತ್ತು. ಇಲ್ಲವಾದರೆ ಆ ಅಪವಾದ ಇದ್ದದ್ದೇ. ಆ ಕಾರಣದಿಂದ ಬಂಜೆಯೊಬ್ಬಳ ಬವಣೆಯನ್ನು ಈ ತ್ರಿಪದಿಯಲ್ಲಿ ಕಾಣಬಹುದು.

**ಬಾಲಕರಿಲ್ಲದ ಬಾಲಿದ್ಯಾತರ ಜನ್ಮ ।**
**ಬಾಡೀಗಿ ಎತ್ತು ದುಡಿದಂಗ । ಬಾಳೆಲೆಯ**
**ಹಾಸ್ಸುಂಡು ಬೀಸಿ ಒಗೆದಂಗ ॥**

ಎಂಥ ಅಮೂಲ್ಯವಾದ ನಿದರ್ಶನವನ್ನು ನಮ್ಮ ಅನುಭಾವಿಕ ಪೂರ್ವಜರು ಕೊಟ್ಟಿದ್ದಾರೆ. ಹೃದಯಕ್ಕೆ ತಲುಪುವ ಭಾಷೆ ಇದಾಗಿದೆ. ಮಕ್ಕಳೇ ಇಲ್ಲದೇ ಹೋದಾಗ ಅವಳ ಕಷ್ಟ ಹೇಳತೀರದು. ಆಗ ಬದುಕು ಅವಳಿಗೋದು ಹೊರೆ. ಬದುಕಿದ್ದಾಗಲೇ ನರಕ ಯಾತನೆ ಅವಳ ಪಾಲಿನದಾಗುತ್ತದೆ. ಮಕ್ಕಳಿಲ್ಲದ ಹೆಣ್ಣಿನ ಬದುಕು "ಬಾಡಿಗೆ

ಎತ್ತಿನಂತೆ, ಊಟಕ್ಕೆ ಬಳಸಿ ಎಸೆಯುವ ಬಾಳೆಯ ಎಲೆಯಂತೆ," ಎಂದು ನೊಂದು ಕೊಳ್ಳುತ್ತಾಳೆ. ಮಕ್ಕಳಿಲ್ಲದ ಬದುಕು ಬರಡು. ಮನೆವನ್ನು ಬೆಳಗಿಸಬಲ್ಲವು ಬಾಳಿಗೆ ಹೊಸ ಅರ್ಥ ತರಬಲ್ಲವು ಮಕ್ಕಳೇ. ಇಂತಹ ಒಂದು ಹೆಣ್ಣಿನ ಭಾವನೆಯನ್ನು ಜನಪದ ಕವಿ ರೂಪಕದಲ್ಲಿ ಸೊಗಸಾಗಿ ಹಾಡಿದ್ದಾರೆ. ಹೆಣ್ಣುಮಗಳು ಬಂಜೆಯಾಗಿ ಅನುಭವಿಸಿದ ಕಷ್ಟಗಳು ಅಷ್ಟಿಷ್ಟಲ್ಲ. ಬಂಧುಬಳಗದವರ ನಿಂದನೆ, ಅವಮಾನಗಳಿಂದ ಬದುಕು ತತ್ತರಿಸಿ ಆ ನೋವಿನ ಪರಿಯನ್ನು ಈ ತ್ರಿಪದಿಗಳು ಕಟ್ಟಿಕೊಡುತ್ತವೆ.

ಮನೆಯನ್ನು ಮನವನ್ನು ಬೆಳಗಲು ಬರುವ ಹೆಣ್ಣು ವಂಶವನ್ನು ಬೆಳಗಬೇಕೆಂದು ಬಯಸುತ್ತಾರೆ. ಮಕ್ಕಳಾಗದಿರಲು ಗಂಡನೇ ಕಾರಣನಾಗಿದ್ದರು ಸಮಾಜ ದೂಷಿಸುವುದು ಹೆಣ್ಣನ್ನು. ಮಕ್ಕಳಿಲ್ಲದ ಹೆಣ್ಣನ್ನು ಬಂಜೆ ಎಂದು ಕರೆಯುತ್ತಾರೆ. ಬಂಜೆ ಎಂಬ ಪದ ಆಕೆಯ ಮನಸನ್ನು ಘಾಸಿಗೊಳಿಸುತ್ತದೆ. ಪತಿಯ ಅವಕೃಪೆಗೆ ಒಳಗಾಗುತ್ತಾಳೆ. ಸಮಾಜ ಮತ್ತು ಕುಟುಂಬದವರ ಚುಚ್ಚು ಮಾತನ್ನು ಸಹಿಸಲಾರದ ಹೆಣ್ಣು ಕಂದನನ್ನು ಪಡೆಯಲು ಆ ಶಿವನಿಗೆ ಮೊರೆಹೊಗುತ್ತಾಳೆ. ಕಂದನನ್ನು ಪಡೆಯುವ ಹಂಬಲ ಈ ತ್ರಿಪದಿಯಲ್ಲಿದೆ.

**ಕಂದನ ಕೊಡು ಶಿವನೆ ಬಂಧನ ಪಡಲಾರೆ**
**ಹಂಗೀನ ಬಾನ ಉಣಲಾರೆ ॥ ಮರ್ತ್ಯದಾಗ**
**ಬಂಜೆಂಬ ಶಬುದ ಹೊರಲಾರೆ**

ಕಂದನ ಕೊಡು ಎಂದು ಬಗವಂತನನ್ನು ಬೇಡುವುದೊಂದೇ ಅವಳ ಕೆಲಸ. ಇಂದು ಮಗುವನ್ನು ಕೊಟ್ಟು ನಾಳೆ ಬೇಕಾದರೆ ಕಿತ್ತುಕೊ. ಆದರೆ ಕೊಡದೆ ಇರುವುದನ್ನು ನಾನು ತಾಳಲಾರೆ ಎನ್ನುತಾಳೆ. ಅದಕ್ಕೆ ಕಾರಣ ಆಕೆಯ ಪಕ್ಕದವರ ಚುಚ್ಚು ನುಡಿ, ಅತ್ತೆ ಮಾವರ ಬಿರುಸು ನುಡಿ, ಗಂಡನ ಕೊಂಕು ನೋಟ ಅವಳನ್ನು ಹಿಂಡಿ ಹಿಪ್ಪೆಯಾಗಿಸಿ ಬದುಕನ್ನೇ ಬಾರವಾಗಿಸುತ್ತಿತ್ತು. ಅವಳು ಮಗುವನ್ನು ಹೊಂದುವುದು ಒಂದು ಪವಿತ್ರವಾದ ಹಾಗೂ ಮಹತ್ವದ ಘಟ್ಟ, ಹೆಣ್ಣು ವಿಶೇಷವಾಗಿ ಗಂಡುಮಗುವಿಗಾಗಿ ಪ್ರಾರ್ಥಿಸುತ್ತಾಳೆ. ಬಂಜೆತನ ಕಳೆಯುವುದು ಗಂಡುಮಗುವಿಗೆ ಜನ್ಮನೀಡಿದಾಗ ಮಾತ್ರ ಎಂಬುದು ಜನಪದರ ನಂಬಿಕೆ. ಹೆಣ್ಣು ವಿವಿಧ ಸ್ಥಾನಗಳಲ್ಲಿ ನಡೆದುಕೊಳ್ಳುವ ರೀತಿ ವ್ಯಕ್ತಪಡಿಸುವ ಭಾವನೆ ಆಶ್ಚರ್ಯಕರವಾದುದು.

**ತೊಟ್ಟಿಲಾಗೊಂದು ತೊಳೆದ ಮುತ್ತನು ಕಂಡೆ**
**ಹೊಟ್ಟಿ ಮ್ಯಾಲಾಗಿ ಮಲಗ್ಯಾನ । ಕಂದೈಗ।**
**ಮುತ್ತಿನ ದೃಷ್ಟಿ ತೆಗೆದೇನ॥**

'ಹೆತ್ತವಳಿಗೆ ಹೆಗ್ಗಣ ಮುದ್ದು' ಎಂಬಂತೆ ಅದೇ ಅವಳಿಗೆ ಸರ್ವಸ್ವ. ಸೌಂದರ್ಯದ ನಿಧಿ, ತನ್ನ ಮಗು ತೊಳೆದ ಮುತ್ತಿನಂತಿದ್ದು ತನ್ನ ಕಣ್ಣು ತಾಕಿಯಾದರೂ ಅದಕ್ಕೆ ದೃಷ್ಟಿಯಾದೀತೆಂದು ಮುತ್ತಿನ ದೃಷ್ಟಿಯನ್ನು ತೆಗೆಯ ಬಯಸುತ್ತಾಳೆ.

**ಅತ್ತರ ಅಳಲವ್ವ ಈ ಕೂಸು ನನಗಿರಲಿ।**
**ಕೆಟ್ಟರ ಕೆಡಲಿ ಮನೆಗೆಲಸ। ಕಂದನಂತ॥**
**ಮಕ್ಕಳಿರಲವ್ವ ಮನೆತುಂಬ॥**

ತನ್ನ ಮಕ್ಕಳು ಎಷ್ಟೇ ರಗಳೆ ಮಾಡಿದರೂ, ಅದರಿಂದ ಮನೆಯ ಕೆಲಸ ಸಂಪೂರ್ಣ ನಿಂತು ಹೋದರೂ ಅಂತಹ ಮಕ್ಕಳೇ ಇರಲಿ ಎಂದು ಬಯಸುತ್ತಾಳೆಯೇ ಹೊರತು ಅದರಿಂದ ಬೇಸರಗೊಳ್ಳುವುದಿಲ್ಲ. ಅದು ಚೇಷ್ಟೆ ಮಾಡಿದಷ್ಟೂ, ತುಂಟಾಟ ಮಾಡಿದಷ್ಟೂ ಅವಳಿಗೆ ಸಂತೋಷ ಅದನ್ನು ಕಂಡು ಹಿಗ್ಗುತ್ತಾಳೆ. ಬದುಕನ್ನು ಹಗುರವಾಗಿಸಿಕೊಳ್ಳುತ್ತಾಳೆ. ಸ್ವಲ್ಪವೂ ಬೇಸರವಿಲ್ಲದೆ ಮಗುವಿನ ಸೇವೆ ಮಾಡುತ್ತಾಳೆ.

**ಆಡಿ ಬಾ ಎನ ಕಂದಾ। ಅಂಗಾಲ ತೊಳೆದೇನ**
**ತೆಂಗಿನಕಾಯಿ ತಿಳಿನೀರ। ತಕ್ಕೊಂಡು ॥**
**ಬಂಗಾರದ ಮೊರೆ ತೊಳೆದೇನ॥**

ತನ್ನ ಕಂದನಿಗಾಗಿ ಬಳಸುವ ಪ್ರತಿಯೊಂದು ವಸ್ತುವೂ ಶ್ರೇಷ್ಠವಾದುದಾಗಿರಬೇಕೆಂಬುದು ಆ ಮಾತೆಯ ಮಹದಾಸೆ. ಅದನ್ನೂ ಬೇರೆ ಯಾರೂ ಬಳಸಿರಬಾರದು, ಬಳಸುವಂಥದೂ ಆಗಿರಬಾರದು. ಎಲ್ಲ ಅಸಮಾನ್ಯವಾದುದಾಗಿರಬೇಕು. ಆಡಿ ದೂಳುಮಾಡಿಕೊಂಡು ಬಂದ ಮಗುವಿನ ಕೈಕಾಲುಗಳನ್ನು ತೊಳೆಯುವಲ್ಲಿಯೇ ಅವಳಿಗೇನೋ ಒಂದು ಪರಮ ಸಂತೋಷ: ಅದಕ್ಕೆ ಅವಳು ಬಳಸುವ ನೀರಾದರೂ ಎಂಥದು? 'ತೆಂಗಿನಕಾಯಿ ತಿಳಿನೀರು' ಅದರಿಂದ ಏನಾಗುತ್ತದೆ ಎಂಬುದರತ್ತ ಅವಳು ಅಲೋಚಿಸುವುದಿಲ್ಲ. ಅದು ಯಾರೂ ಮುಟ್ಟದ ಪರಿಶುದ್ಧವಾದ ನೀರಾಗಿರಬೇಕೆಂಬುದಷ್ಟೇ ತಾಯಿ ಮನಸ್ಸಿನ ಭಾವನೆ. ಮುಖವಾದರೂ ಎಂಥದ್ದು?' ಬಂಗಾರದ ಮೋರೆ" ತಾಯಿಯ ವಾತ್ಸಲ್ಯದ, ಪ್ರೀತಿಯ, ಮಮತೆಯ ನುಡಿಯೊಂದೇ ಇಲ್ಲಿ ಹಾಡಾಗಿದೆ. ಅವು ಪದಗಳ ಜೋಡಣೆಯಲ್ಲ. ಒಂದೊಂದು ನುಡಿಯಲ್ಲಿಯೂ ಮಾತೃ ವಾತ್ಸಲ್ಯ ತುಂಬಿ ತುಳುಕಿದೆ.

**ಅಂಗಿಯ ಮ್ಯಾಲಂಗಿ ಛಂದೇನೋ ನನರಾಯ**
**ರಂಭೆ ಮ್ಯಾಲ ರಂಭೆ ಪ್ರತಿ ರಂಭೆ**
**ಬಂದರ ಛಂದೇನೋ ರಾಯ ಮನಿಯಾಗ**

ತನ್ನ ಗಂಡ ಬೇರೊಬ್ಬಳನ್ನು ಕೂಡುವುದಕ್ಕೆ ಕಾರಣವೇನೆ ಇರಲಿ ಆತ ಕೈಗೊಂಡಿರುವ ತೀರ್ಮಾನ ತಪ್ಪು ಎಂಬುದನ್ನು ಆಕೆ ತೋರಿಸಿಕೊಟ್ಟು ಎಚ್ಚರಿಸುತ್ತಾಳೆ. ನಯವಾದ ಮಾತುಗಳಿಂದ ಹೃದಯ ಕರಗುವಂತೆ ಬೇಡಿಕೊಳ್ಳುತ್ತಾಳೆ. ಕುಲಾಂಗನೆಯಾದವಳು ವರ್ತಿಸಬೇಕಾದ ರೀತಿಯಲ್ಲಿ ವರ್ತಿಸಿ ಅವನ ಮನವಲಿಸಿಕೊಂಡು ಮೊದಲಿನಂತಾಗಲು ಯತ್ನಿಸುತ್ತಾಳೆ. ಪತ್ನಿಯೆನಿಸಿಕೊಂಡು ತನ್ನ ಧರ್ಮಕ್ಕೆ ಸ್ವಲ್ಪವೂ ಚ್ಯುತಿಬಾರದಂತೆ ಕಾಯ್ದುಕೊಳ್ಳುತ್ತಾಳೆ. ಅವಳ ನಯ, ವಿನಯ, ಸಹನೆ, ಸೌಜನ್ಯ ಮುಂತಾದುವು ಅವಳ ಘನತೆಯನ್ನು ಹೆಚ್ಚಿಸಿವೆ. ಗೌರವವನ್ನು ಕಾಯ್ದುಕೊಂಡು ಬಂದಿವೆ. ಎಂದು ಹೆಂಡತಿಯಾದವಳು ಇವೆಲ್ಲವನ್ನು ಕಳೆದುಕೊಳ್ಳುತ್ತಾಳೋ ಅಥವಾ ಯಾವುದೇ ಸಂದರ್ಭದಲ್ಲಿ ಇವುಗಳನ್ನು ಕಡೆಗಣಿಸುತ್ತಾಳೋ ಅಂದು ಅವಳ ಬಾಳು ಮಣ್ಣುಗೂಡುತ್ತದೆ. ಎಂಬ ಸತ್ಯ ಗರತಿಯ ಹಾಡಿನ ತ್ರಿಪದಿಗಳಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತಿಗೊಂಡಿರುವುದನ್ನೂ ಮನಗಾಣಬಹುದು. ಅವಳ ಅಂತರಂಗದ ತುಡಿತಕ್ಕೆ ಈ ನುಡಿಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಹೀಗೆ ನಮ್ಮ ಪೂರ್ವಜರು ಬದುಕನ್ನು ಅರ್ಥಪೂರ್ಣವಾಗಿ ಕಂಡಿದ್ದಾರೆ. ಜೀವನ ಬರೀ ಮೋಜಲ್ಲ. ಆದರ್ಶವಾಗಿ ಬಾಳಿದರೆ ಸಂಸಾರ ಸುಂದರವಾಗುತ್ತದೆ ಎನ್ನುವ ಅವರ ಭಾವ ಸಾರ್ವತ್ರಿಕ ಸತ್ಯವಾಗಿ ನಿಂತಿದೆ.

ಒಟ್ಟಾರೆ ಜನಪದ ತ್ರಿಪದಿಗಳಲ್ಲಿ ತಾಯ್ತನದ ವಿವಿಧ ಮುಖಗಳನ್ನು ಗಮನಿಸಿದಾಗ ಅದೆಷ್ಟು ವೈವಿಧ್ಯಮಯವಾದುದೆಂಬುದು ಅರ್ಥವಾಗುತ್ತದೆ. ಹುಟ್ಟಿದ ಮನೆಯ ಮಗಳಾಗಿ, ಸೇರಿದ ಮನೆಯ ಸೊಸೆಯಾಗಿ, ಹೆತ್ತ ಮಕ್ಕಳ ತಾಯಿಯಾಗಿ, ಮಗ ಕೈ ಹಿಡಿದು ಬಂದ ಮಡದಿಯರ ಅತ್ತೆಯಾಗಿ ಹೆಣ್ಣಿನ ಜನ್ಮ ವಿಕಾಸಗೊಂಡಿರುವುದನ್ನು ಜನಪದ ತ್ರಿಪದಿಗಳು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಿವೆ. ಇವುಗಳಿಂದ ಹೆಣ್ಣಿನ ಬಾಳಿನ ಮಹತ್ವದ ಘಟ್ಟಗಳ ಪರಿಚಯವಾಗುತ್ತದೆ. ತೀರ ಸಾಮಾನ್ಯ ಜನರಿಂದ ರಚನೆಯಾದ ಜನಪದ ತ್ರಿಪದಿಗಳಾದರೂ ನಿತ್ಯ ಬದುಕಿನ ಘಟನೆಗಳನ್ನೇ, ನೋವು ನಲಿವುಗಳನ್ನೇ, ಏಳು ಬೀಳುಗಳನ್ನೇ ತಮ್ಮ ಮನಃಸಂತೋಷಕ್ಕಾಗಿ ಭಾವಉಕ್ಕಿ ಹಾಡಿರುವುದು ಇವುಗಳ ಅಧ್ಯಯನದಿಂದ ಕಂಡುಬರುತ್ತದೆ. ಜೀವನದಲ್ಲಿ ಹೆಣ್ಣಿನ ಮಹತ್ವ ಮತ್ತು ಆಕೆಯಲ್ಲಿ ಇರುವ ತಾಯ್ತನದ ಹಂಬಲದ ಶ್ರೇಷ್ಠತೆಯನ್ನು ಈ ಅಧ್ಯಯನದಿಂದ ತಿಳಿಯಬಹುದು

## ಪರಾಮರ್ಶನ ಗ್ರಂಥಗಳು :

1. ಸಿ.ಪಿ.ಕೃಷ್ಣಕುಮಾರ್: ಜನಪದ ಗೀತೆ
2. ಜಿ.ಎಸ್. ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ
3. ಜೀ.ಶಂ. ಪರಮಶಿವಯ್ಯ: ಹೊನ್ನು ಬಿತ್ತೇವುಹೊಲಕೆಲ್ಲ: ಪು.36

**ಪ್ರೊ. ರೇಣುಕಮ್ಮ ಜೆ.**
ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು
ಯಲಹಂಕ ಉಪನಗರ, ಬೆರಗಳೂರು–64

# ಮಹಿಳಾ ಮೀಸಲಾತಿ ಒಂದು ಸಂಕ್ಷಿಪ್ತ ಅವಲೋಕನ

¤ ಅಂಜಿನಪ್ಪ ಎಲ್.ಟಿ

ಶತಮಾನಗಳಿಂದಲೂ ಮಹಿಳೆಯನ್ನೂ ದ್ವಿತೀಯ ದರ್ಜೆಯ ಪ್ರಜೆಯಾನ್ನಾಗಿ, ಗುಲಾಮಳಾಗಿಯೇ, ಅಧೀನಳಾಗಿಯೇ ನೋಡಲಾಗುತ್ತಿದೆ. ಆಕೆ ಮೇಲ್ವರ್ಗದ ಮಹಿಳೆಯಾಗಿರಬಹುದು, ಮಧ್ಯಮವರ್ಗದ ಮಹಿಳೆಯಾಗಿರಬಹುದು. ಅಥವಾ ಬಡ ಕೆಳವರ್ಗದ ಮಹಿಳೆಯಾಗಿರಬಹುದು. ಸ್ವಾತಂತ್ರ್ಯ ನಂತರ ಎಂಬತ್ತರ ದಶಕಗಳ ನಂತರ ಶಿಕ್ಷಣ, ರಾಜಕೀಯ, ಮೀಸಲಾತಿ ಮುಂತಾದವುಗಳ ಕಾರಣದಿಂದಾಗಿ ಮೇಲ್ವರ್ಗದ ಮಹಿಳೆಯು ಉದ್ಯೋಗ ಶಿಕ್ಷಣ ಮಹಿಳೆಯು ಸ್ಥಿತಿಗತಿ ಸುಧಾರಣೆಯಾಗಿರಬಹುದು.ಆದರೆ ಇಂದಿಗೂ ಹಿಂದುಳಿದ ವರ್ಗದ, ಅಶಿಕ್ಷಿತ, ಬಡವರ್ಗದ ರೈತ, ಮಹಿಳೆಯ ಸ್ಥಿತಿ–ಗತಿ ಇಂದಿಗೂ ಶೋಚನೀಯವಾಗಿದೆ.

ಪ್ರಬಲ ಹಿಂದುಳಿದ ವರ್ಗಗಳಲ್ಲಿ ಕೂಡ ಮಹಿಳೆಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಯು ಅಷ್ಟಕಷ್ಟೆ ಇದೆ. ಮಹಿಳೆಯರೂ ಕುಟುಂಬ ನಿರ್ವಹಿಸಲು ಹಸಿವು ಹಿಂಗಿಸಲು ಪುರುಷರೊಟ್ಟಿಗೆ ಹೆಗಲೊಡ್ಡಿ ದುಡಿಯುತ್ತಿದ್ದಾರೆ. ಹೊಲ ಮನೆಗಳಲ್ಲಿ ದುಡಿಯುತ್ತಾ ಬದುಕು ಸವೆಸುತ್ತಿದ್ದಾರೆ. ಕುಟುಂಬದ ಭಾರ, ಮಕ್ಕಳ ಜವಾಬ್ದಾರಿ, ಕುಡುಕ ಗಂಡನ ಬೇಜವಾಬ್ದಾರಿತನ ಇವೆಲ್ಲವನ್ನು ನಿಭಾಯಿಸಿಕೊಂಡು, ಕೂಲಿ ಮಾಡಿ ಬದುಕುವುದು ಆಕೆಗೆ ಅನಿವಾರ್ಯವಾಗಿದೆ. ಎಷ್ಟೋ ಹಳ್ಳಿಗಳಲ್ಲಿ ಹೆಣ್ಣು ದುಡಿದು ತಂದ ಹಣದಿಂದಲೇ ಕುಟುಂಬಗಳು ಸಾಗುತ್ತವೆ. ತಾವು ದುಡಿದ ದುಡ್ಡನ್ನು ತಮ್ಮಿಷ್ಟದಂತೆ ಖರ್ಚು ಮಾಡುವ ಅವಕಾಶ ಆಕೆಗಿಲ್ಲ.

ಬಡತನದ ಮಹಿಳೆ ಮನೆ ಒಳಗೂ ಹೊರಗೂ ದುಡಿಯುತ್ತಾ ಯಾವುದೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಅಪೌಷ್ಟಕತೆ ಅನಾರೋಗ್ಯದ ಬದುಕು ಸವೆಸುವುದೂ

ಕಾಣಬಹುದು. ಮಧ್ಯಮ ವರ್ಗದ ಮಹಿಳೆ ಶಿಕ್ಷಣ ಪಡೆದರೂ ಉನ್ನತ ಶಿಕ್ಷಣ ಪ್ರಮಾಣ ಕಡಿಮೆ, ಕೆಲ ಮಹಿಳೆಯರು ಉದ್ಯೋಗದವಿದ್ದರೂ ಆರ್ಥಿಕ ಸ್ವಾತಂತ್ರ್ಯ ಹೊಂದಿರುವುದಿಲ್ಲ. ಮುಕ್ತವಾಗಿ ಸಾಮಾಜಿಕ, ರಾಜಕೀಯ ಕಾರ್ಯ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವುದಿಲ್ಲ. ತಮ್ಮ ಸ್ಥಿತಿ–ಗತಿ ಸುಧಾರಣೆಗೆ ಪ್ರಯತ್ನಿಸುವುದಿಲ್ಲ. ತಂದೆ ಸಹೋದರರು ಅಥವಾ ಗಂಡನಿಗೆ ಅಧೀನವಾಗಿಯೆ ಬದುಕುತ್ತಾರೆ. ವಾಕ್ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾರೆ. "ಪ್ರಾಚೀನ ಕಾಲದಿಂದಲೂ ಅವಳ ಸ್ಥಿತಿ ಶೋಚನೀಯ ಸ್ತ್ರೀಯರ ವಿರುದ್ಧ ಮನು ರೂಪಿಸಿದ ಶಾಸನವು ಇದೇ ದೃಷ್ಟಿಕೋನದ್ದು ಯಾವ ಸಂದರ್ಭದಲ್ಲಿ ಸ್ತ್ರೀ ಸ್ವಾತಂತ್ರ್ಯವಾಗಿರತಕ್ಕದ್ದಲ್ಲ, ಕೌಮಾರ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ವೃದ್ಧಾಪ್ಯದಲ್ಲಿದಲ್ಲಿ ಮಗ ಅವಳನ್ನು ರಕ್ಷಿಸುತ್ತಾರೆ. ಸ್ತ್ರೀ ಸ್ವತಂತ್ರಕ್ಕೆ ಅರ್ಹಳಲ್ಲ"[1] ಎಂಬುದು ಮನುವಿನ ಅಭಿಪ್ರಾಯ.

ಶ್ರೀಮಂತ ವರ್ಗದ ಮಹಿಳೆಯರ ಸ್ಥಿತಿಯೂ ಅಷ್ಟಕಷ್ಟೆ, ಶ್ರೀಮಂತರು ಹೆಂಡತಿ ಮಕ್ಕಳ ಹೆಸರಿನಲ್ಲಿ ಆಸ್ತಿ ಮಾಡಿದರೂ ಅದು ಹೆಸರಿಗೆ ಮಾತ್ರ ಸಂಪೂರ್ಣ ಹಿಡಿತ ಪುರುಷನ ಕೈಯಲ್ಲೇ ಇರುತ್ತದೆ. ಆಸ್ತಿಯ ವಹಿವಾಟು, ಮಾರಾಟ ಎಲ್ಲವೂ ಅವನಿಷ್ಟದಂತೆಯೇ ನಡೆಯುತ್ತದೆ. ಅವನು ಹೇಳಿದ ಕಡೆ ಅಷ್ಟೇ ಅವಳು ಸಹಿ ಮಾಡಬೇಕಾಗುತ್ತದೆ. ಮಹಿಳೆಯರಲ್ಲಿ ಸಾರತೆಯ ಕೊರತೆ ಇದೆ. ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ, ಉತ್ತರ ಕರ್ನಾಟಕದ ಹೆಣ್ಣು ಮಕ್ಕಳ ಶಿಕ್ಷಣದ ಕೊರತೆ ಎದ್ದು ಕಾಣುತ್ತದೆ. ಮಾಧ್ಯಮಿಕ ಮತ್ತು ಪ್ರೌಢಶಾಲೆಯ ಹಂತದಲ್ಲಿಯೇ ಅವರು ಶಿಕ್ಷಣ ತೊರೆಯುವುದು ಹೆಚ್ಚಾಗಿ ಕಂಡುಬರುತ್ತದೆ. ಬಡತನದ ಕಾರಣಕ್ಕೆ ಹಳ್ಳಿಯಿಂದ ನಗರಕ್ಕೆ ಹೋಗಿ ಕಲಿಯಲು ಅನುಕೂಲ ಇರದ ಕಾರಣ, ಋತುಮತಿಯರಾದ ಕಾರಣಕ್ಕೆ ವಸತಿ ಸಮಸ್ಯೆ ಈ ಕಾರಣಗಳಿಗಾಗಿ ಅವರು ಶಿಕ್ಷಣವನ್ನೂ ಮೊಟಕುಗೊಳಿಸುತ್ತಾರೆ. ಇಂದಿಗೂ ಶಿಕ್ಷಣ ಅಭಿವೃದ್ಧಿಯ ಪ್ರಧಾನ ಮಾನದಂಡ ಎಂಬುದು ಅವರಿಗೆ ಅರಿವಿರದೆ ಇರುವುದು. ಅನಕ್ಷರತೆಯ ಕಾರಣಕ್ಕೆ ಇಂದಿಗೂ ಬಾಲ್ಯ ವಿವಾಹಗಳು ಅಲ್ಲಲ್ಲಿ ಕೇಳಿ ಬರುತ್ತಿವೆ.

ಭಾರತೀಯ ಸಮುದಾಯಗಳು ಪಿತೃ ಪ್ರಧಾನ ಜಾತಿಯಾಗಿದ್ದು, ಕುಟುಂಬದಲ್ಲಿ ಮಹಿಳೆಯರು ಪುರುಷರಿಗೆ ಅಧೀನವಾಗಿಯೇ ಇರುತ್ತಾರೆ. ಯಾವುದೇ ಆರ್ಥಿಕ ಸ್ವಾತಂತ್ರ ಇರುವುದಿಲ್ಲ. ಹೆಣ್ಣು ಮಕ್ಕಳನ್ನು ಹೆಚ್ಚಾಗಿ ಓದಿಸಿದರೆ ವರದಕ್ಷಿಣೆ ಕೊಡಬೇಕಾಗುತ್ತದೆ, ಉದ್ಯೋಗಸ್ಥ ಹುಡುಗನನ್ನು ಹುಡುಕಬೇಕಾಗುತ್ತದೆ ಎನ್ನುವ ಕಾರಣಕ್ಕೆ ಹೆಣ್ಣು ಮಕ್ಕಳ ಶಿಕ್ಷಣ ಮೊಟಕುಗೊಳಿಸಲಾಗುತ್ತದೆ. ಅನಕ್ಷರತೆ ಕಾರಣಕ್ಕೆ

ಆಸ್ತಿಯ ಹಕ್ಕಿನ ಒಡೆತನದ ಅರಿವು ಅವರಿಗೆ ಇರುವುದಿಲ್ಲ. ಈಗಾಗಲೇ ಹೇಳಿದಂತೆ ಭಾರತದ ರಾಷ್ಟ್ರೀಯ ಚಳುವಳಿ ಕೇವಲ ರಾಜಕೀಯ ಚಳುವಳಿಯಾಗಿರದೆ ಅದೊಂದು ಸಾಮಾಜಿಕ ಚಳುವಳಿಯು ಸಹ ಆಗಿತ್ತು.

ಮಹಿಳೆಯರ ಮೇಲಿನ ದೌರ್ಜನ್ಯ, ಕ್ರೌರ್ಯ, ಹಿಂಸೆ ಎಲ್ಲ ರೀತಿಯ ಅಸಮಾನತೆಯ ವಿರುದ್ಧ ಅನೇಕ ಮಹನೀಯರು ಮತ್ತು ಸಂಘ ಸಂಸ್ಥೆಗಳು ಧ್ವನಿ ಎತ್ತಿ ಹೋರಾಟ ನಡೆಸಿದರ ಪರಿಣಾಮವಾಗಿ ಮಹಿಳೆಯರ ಬದುಕಿನ ಬೆಳಕಿನ ಸೂರ್ಯ ಮೂಡಿಬಂತು. ಬ್ರಿಟಿಷ್ ಸರ್ಕಾರ ಈ ಹೋರಾಟಗಳ ಒತ್ತಡಕ್ಕೆ ಮಣಿದು ಹೊಸ ಕಾನೂನುಗಳನ್ನು ರಚಿಸಿತು. ಅವುಗಳಲ್ಲಿ ಪ್ರಮುಖವಾದವೆಂದರೆ; ಬಾಲೆಯರ ಬಲಿ ನಿಷೇಧ ಕಾಯಿದೆ, ಬೆಂಗಾಲ್ ಸತಿ ಪದ್ಧತಿ ಸುಧಾರಣಾ ಕಾಯ್ದೆ 1829, ಹಿಂದೂ ವಿಧವೆಯರ ಮರುಮದುವೆ ಕಾಯ್ದೆ 1856, ಹಿಂದೂ ಮಹಿಳಾ ಆಸ್ತಿಯ ಹಕ್ಕು ಕಾಯ್ದೆ 1937, ಬಾಲ್ಯ ವಿವಾಹ ನಿಷೇಧ ಕಾಯ್ದೆ, ವಿವಾಹ ವಿಚ್ಛೇದನ ಕಾಯ್ದೆ 1869, ವರದಕ್ಷಿಣೆ ನಿಷೇಧ ಕಾಯ್ದೆ, ದೇವದಾಸಿ ಪದ್ಧತಿ ನಿಷೇಧ ಕಾಯ್ದೆ, ಮಹಿಳಾ ಜೀವನಾಂಶದ ಹಕ್ಕು ಕಾಯ್ದೆ, ಮುಸ್ಲಿಂ ಮದುವೆ ವಿಚ್ಛೇದನ ಕಾಯ್ದೆ 1939, ಪಾರಸಿ ಮದುವೆ ಮತ್ತು ವಿಚ್ಛೇದನ ಕಾಯ್ದೆ 1937, ಭಾರತೀಯ ಪೀನಲ್ ಕೋಡ್ 1860 ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್. ಮುಂತಾದವುಗಳು.[2]

ಸ್ವತಂತ್ರ ನಂತರ ಭಾರತದಲ್ಲಿ ಮಹಿಳೆಯರ ಶಿಕ್ಷಣದಲ್ಲಿ ತಾರತಮ್ಯವನ್ನು ಕೂಡ ಕಾಣಬಹುದು. ಗಂಡು–ಹೆಣ್ಣು ಶಿಕ್ಷಣದ ಅಂತರವು 1951ರಲ್ಲಿ ಶೇ.18.30ರಷ್ಟು ಇದ್ದದ್ದು 2011 ರಲ್ಲಿ ಶೇ.16.68ಕ್ಕೆ ಇಳಿದಿದೆ. 2005ರಲ್ಲಿ 6 ರಿಂದ 14ರ ವಯಸ್ಸಿನ ಗಂಡುಮಕ್ಕಳು ಶೇ.92ರಷ್ಟು ಮತ್ತು ಹೆಣ್ಣು ಮಕ್ಕಳು ಶೇ.88ರಷ್ಟು ಪ್ರಾಥಮಿಕ ಶಾಲೆಗೆ ದಾಖಲಾತಿಯಾಗಿದ್ದಾರೆ. ಆದರೆ 2012ರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಶಾಲಾ ದಾಖಲಾತಿಯಲ್ಲಿ ಸಮಾನವಾಗಿ ಶೇ.96ರಷ್ಟು ಏರಿಕೆ ಕಂಡಿದೆ. ಆದರೆ ಪ್ರಾಥಮಿಕ ಶಿಕ್ಷಣದ ದಾಖಲೆಗಳನ್ನು ಗಮನಿಸಿದರೆ ಮೊದಲು ಗಂಡು–ಹೆಣ್ಣು ಮಕ್ಕಳಲ್ಲಿ ಸಮಾನತೆಯನ್ನು ಸಾಧಿಸದ ಈ ಹಂತ ಮಾಧ್ಯಮಿಕ ಶಿಕ್ಷಣದ ಹಂತ ತಲುಪುವಷ್ಟರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಇದರ ಅರ್ಧದಷ್ಟು ಕಡಿಮೆಯಾಗುವುದು. ಹಲವಾರು ಅಧ್ಯಯನಗಳಿಂದ ಕಂಡು ಬಂದಿದೆ. ಇನ್ನು ಈ ಸಂಖ್ಯೆ ಪದವಿ ಪೂರ್ವ ಶಿಕ್ಷಣದ ಹಂತಕ್ಕೆ ಕಾಲು ಭಾಗಕ್ಕೆ ಇಳಿಯುತ್ತಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಈ ಸಂಖ್ಯೆ ಪದವಿ ಶಿಕ್ಷಣ ಮಟ್ಟಕ್ಕೆ ಶೇ.5 ಮತ್ತು ಸ್ನಾತಕೋತರ ಹಾಗೂ ಇತರ ತಾಂತ್ರಿಕ ಪದವಿಗಳಿಗೆ ಕೇವಲ ಶೇ. 2ರಷ್ಟಕ್ಕೆ ಇಳಿಕೆ ಕಂಡಿದೆ.

ಶಿಕ್ಷಣದಲ್ಲಿ ಈ ರೀತಿಯ ಲಿಂಗ ತಾರತಮ್ಯಕ್ಕೆ ಕಾರಣಗಳೆಂದರೆ[3] ಕಲಿಕೆಯ

ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣದಲ್ಲಿ ಹೆಣ್ಣು ಮಕ್ಕಳೇ ಹೆಚ್ಚು. ಮನೆಯಲ್ಲಿ ಗಂಡು ಮಕ್ಕಳ ಶಿಕ್ಷಣಕ್ಕೆ ಕೊಡುವ ಪ್ರೋತ್ಸಾಹ ಹೆಣ್ಣು ಮಕ್ಕಳಿಗೆ ಸಿಗುತ್ತಿಲ್ಲ, ಬದಲಾಗಿ ಹೆಣ್ಣು ಮಕ್ಕಳ ಶಿಕ್ಷಣವನ್ನು ನಿರ್ಲಕ್ಷಿಸುವುದು ಸಾಮಾನ್ಯ ಸಂಗತಿ, ಹೆಣ್ಣು ಮಕ್ಕಳನ್ನು ಬೇಗನೆ ಶಾಲೆ ಬಿಡಿಸಿ ಮನೆ ಕೆಲಸಕ್ಕೋ ಅಥವಾ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲಿಕ್ಕೂ ಬಳಸುವುದು, ಮನೆಯಲ್ಲಿ ಬಡತನವಿರುವುದರಿಂದ ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ ಕೇವಲ ಗಂಡು ಮಕ್ಕಳನ್ನು ಶಾಲೆಗೆ ಕಳುಹಿಸುವ ಪ್ರವೃತ್ತಿ, ಹೆಣ್ಣು ಮಕ್ಕಳನ್ನು ಶಾಲೆ ಬಿಡಿಸಿ ಬೇಗನೆ ಮದುವೆ ಮಾಡಿಕೊಡುವುದು, ಹೆಣ್ಣು ಮಗು ಹೆಚ್ಚು ಕಲಿತರೆ ಸರಿಸಮಾನವಾದ ವಿದ್ಯಾವಂತ ಉದ್ಯೋಗಸ್ಥ ಗಂಡನ್ನು ಹುಡುಕುವ ಸಮಸ್ಯೆ, ಹೆಣ್ಣು ಮಗು ಮದುವೆಯಾಗಿ ಬೇರೊಂದು ಮನೆಯನ್ನು ಸೇರುವುದರಿಂದ ಆಕೆಯ ಶಿಕ್ಷಣದಿಂದ ತಮಗೇನು ಪ್ರಯೋಜನವಿಲ್ಲವೆಂಬ ಭಾವನೆ ಹೆಚ್ಚಿನ ಪಾಲಕರಲ್ಲಿದೆ. ವರದಕ್ಷಿಣೆ ಹಣ ಹೊಂದಿಸಬೇಕಾಗಿರುವಾಗ ಆಕೆಯ ಶಿಕ್ಷಣದ ವೆಚ್ಚವನ್ನು ಭರಿಸುವುದು ಪಾಲಕರಿಗೆ ಕಷ್ಟದಾಯಕವಾಗಿ ಪರಿಣಮಿಸುತ್ತಿದೆ ಎಂಬ ಅಂಶವು ಗಮನೀಯವಾದದು.

ಮಹಿಳಾ ಮೀಸಲಾತಿಯನ್ನು ವಿರೋಧಿಸುತ್ತಿರುವ ಹಲವಾರು ಮಂದಿಗೆ ಮಹಿಳಾ ಮೀಸಲಾತಿ ಸ್ಥಾಯಿ ಸಮಿತಿ ಮುಖ್ಯಸ್ಥೆಯಾಗಿದ್ದ ಶ್ರೀಮತಿ ಗೀತಾ ಮುಖರ್ಜಿಯವರ ಗಮನಾರ್ಹ ಉತ್ತರ "ಮಹಿಳಾ ಮೀಸಲಾತಿಯನ್ನು ನೀಡುವುದರಿಂದ ಒಳ್ಳೆಯ ಪ್ರಗತಿಪರ ಪರಂಪರೆಯನ್ನು ಆರಂಭಿಸಲು ಅನುಕೂಲವಾಗುತ್ತದೆ. ಸ್ತ್ರೀಯನ್ನು ದೇವತೆಯೆಂದು ಪೂಜಿಸುವ ಬದಲು, ಸಹವರ್ತಿನಿಯಂತೆ ರಾಜಕೀಯವಾಗಿ ಸಮಾನಾವಕಾಶ ಕೊಟ್ಟು ಗೌರವಿಸುವುದು ಭಾರತೀಯ ಸಂಸ್ಕೃತಿಗೂ ಭೂಷಣ ಪ್ರಾಯವಾದುದು" ಎನ್ನುತ್ತಾರೆ. ಭಾರತದ ರಾಜಕಾರಣದಲ್ಲಿ ಸ್ತ್ರೀಯರಿಗೆ ಮಹತ್ತರವಾದ ಗೌರವವನ್ನು ದೊರಕಿಸಿಕೊಟ್ಟವರಲ್ಲಿ ಗಾಂಧೀಜಿಯವರು ಮೊದಲಿಗರು. ಮಹಿಳಾ ಮೀಸಲಾತಿಯು 'ಸಾಮಾಜಿಕ ನ್ಯಾಯ' ದೊರಕಿಸಲು ಇರುವ ಅಸ್ತ್ರ ಎನ್ನಬಹುದು. ಶಾಸನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾದಲ್ಲಿ, ಸಾಮಾಜಿಕ ಬದ್ಧತೆ ಮತ್ತು ಸೂಕ್ಷ್ಮತೆ ಉನ್ನತ ಮಟ್ಟದಲ್ಲಿರುತ್ತದೆ. ಸದನದಲ್ಲಿ ಶಿಸ್ತು, ಸಂಯಮದ ವಾತಾವರಣ ಮೂಡುವುದಲ್ಲದೆ ಕಿರಿಕಿರಿ ಉಂಟು ಮಾಡುವ ಸನ್ನಿವೇಶಗಳು ಕಡಿಮೆಯಾಗುತ್ತದೆ. ಭ್ರಷ್ಟಾಚಾರ ಮುಕ್ತ ವಾತಾವರಣವನ್ನು ಇದರಿಂದ ನಿರೀಕ್ಷಿಸಬಹುದು ಎಂದು ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣ ಅವರು ಅಭಿಪ್ರಾಯಪಟ್ಟಿದ್ದಾರೆ. "ಮಹಿಳೆಯರು ಅಶಕ್ತರು ಎಂದು ಭಾವಿಸಿದರೆ ಅದು ಅವರು, ಪ್ರಕೃತಿಗೆ ಅಪಚಾರ ಮಾಡಿದಂತೆ, ಪುರುಷರು ಮಹಿಳೆಯರಿಗೆ ಅನ್ಯಾಯ ಎಸಗುವುದನ್ನು ನಿಲ್ಲಿಸಬೇಕು"[4] ಎನ್ನುತ್ತಾರೆ.

**ಮಹಿಳಾ ಮೀಸಲಾತಿಯ ಹಿನ್ನೆಲೆ :**

ಪ್ರಜಾಪ್ರಭುತ್ವ ಮತ್ತು ಮಹಿಳೆ ಎಂದು ಹುಡುಕುತ್ತಾ ಹೋದರೆ ಈವರೆಗೆ ರಾಜಕಾರಣದಲ್ಲಿ ಹೆಸರು ಮಾಡಿದ ಮಹಿಳೆಯರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಎಷ್ಟು ಸೀಮಿತ ಎಂದರೆ 543 ಸದಸ್ಯರ ಬಲ ಇರುವ ಈಗಿನ ಲೋಕಸಭೆಯಲ್ಲಿ ಮಹಿಳಾ ಸಂಸದರ ಸಂಖ್ಯೆ 78ಮಾತ್ರ. ಈ ಹಿಂದೆ ಈ ಸಂಖ್ಯೆ ಇದಕ್ಕಿಂತಲೂ ಕಡಿಮೆಯೇ ಇತ್ತು. ದೇಶದ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸಲು ಸಾಧ್ಯವಾಗಿದ್ದು ಮೀಸಲಾತಿ ಮೂಲಕ ಮಾತ್ರ, ಲೋಕಸಭೆ, ರಾಜ್ಯ ವಿಧಾನಸಭೆ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡಬೇಕು ಎಂಬುದು ಹಲವು ದಶಕಗಳ ಬೇಡಿಕೆ. ಆದರೆ ಈವರೆಗೆ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಷ್ಟೇ ಮಹಿಳೆಯರಿಗೆ ಮೀಸಲಾತಿ ದೊರೆತಿದೆ. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಮಸೂದೆಯನ್ನು 1989ರಲ್ಲಿ ರಾಜೀವ್‌ಗಾಂಧಿ ಅವರ ಸರ್ಕಾರವು ರಾಜ್ಯ ಸಭೆಯಲ್ಲಿ ಮಂಡಿಸಿತ್ತು. ಆದರೆ, ಅದಕ್ಕೆ ಅನುಮೋದನೆ ದೊರೆತಿರಲಿಲ್ಲ. 1992–93ರಲ್ಲಿ ಪಿ. ವಿ. ನರಸಿಂಹರಾವ್ ಅವರ ಸರ್ಕಾರವು ಸಂವಿಧಾನಕ್ಕೆ ತರಲಾದ 73 ಮತ್ತು 74 ನೇ ತಿದ್ದುಪಡಿಗಳ ಮೂಲಕ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಒದಗಿಸಿತು. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ದೊಡ್ಡಮಟ್ಟದ ಪ್ರಾತಿನಿಧ್ಯ ದೊರೆತದ್ದು ಆಗಲೇ. ಅದರ ಪರಿಣಾಮವಾಗಿ ಈಗ ದೇಶದ ತುಂಬಾ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಂದಾಜು 15 ಲಕ್ಷಕ್ಕೂ ಹೆಚ್ಚು ಮಹಿಳಾ ಜನಪ್ರತಿನಿಧಿಗಳಿದ್ದಾರೆ.

**ಮಹಿಳಾ ಮೀಸಲಾತಿಯ ಹೋರಾಟ :**

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲೂ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬೇಕು ಎಂಬುದು ಇಂದಿನ ಬೇಡಿಕೆ ಅಲ್ಲ, ಇದೇ ಮೊದಲ ಪ್ರಯತ್ನವೂ ಅಲ್ಲ. ಮಹಾರಾಷ್ಟ್ರದ ಸಂಸದೆಯಾಗಿದ್ದ ಪ್ರಮೀಳಾ ದಂಡವತೆ ಅವರು 1996ರಲ್ಲಿ ಮಹಿಳಾ ಮೀಸಲಾತಿ ಖಾಸಗಿ ಮಸೂದೆಯನ್ನು ಮೊದಲ ಬಾರಿ ಮಂಡಿಸಿದ್ದರು. 1996ರಲ್ಲಿ ಅಂದಿನ ಪ್ರಧಾನಮಂತ್ರಿ ಎಚ್. ಡಿ. ದೇವೇಗೌಡ ಅವರ ಸಂಯುಕ್ತರಂಗ ಸರ್ಕಾರವು ಅಂತಹ ಮಸೂದೆಯನ್ನು ಮೊದಲ ಬಾರಿ

ಲೋಕಸಭೆಯಲ್ಲಿ ಮಂಡಿಸಿತ್ತು. ಮಸೂದೆಯನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಿ, ಸಮಿತಿ ವರದಿ ನೀಡಿತ್ತು. ಆದರೆ ಆ ಲೋಕಸಭೆಯೇ ವಿಸರ್ಜನೆಯಾದ ಕಾರಣ ಮಸೂದೆಯೂ ಬಿದ್ದು ಹೋಯಿತು. ವಾಜಪೇಯಿ ನೇತೃತ್ವದ ಸರ್ಕಾರ ಅಂಥದ್ದೇ ಮಸೂದೆಯನ್ನು 1998, 1999, 2002 ಮತ್ತು 2003ರಲ್ಲಿ ಮಂಡಿಸಿತ್ತು. 2004 ರಲ್ಲಿ ಯು.ಪಿ.ಎ. ಸರ್ಕಾರ ಮತ್ತೆ ಮಸೂದೆಯನ್ನು ಮಂಡಿಸಿತ್ತು. ಆದರೂ 5ಬಾರಿಯೂ ಮಸೂದೆಗೆ ಅನುಮೋದನೆ ದೊರೆತಿರಲಿಲ್ಲ. 2008ರ ಮೇನಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಮತ್ತೆ ಮಸೂದೆಯನ್ನು ಮಂಡಿಸಿತ್ತು. ಮಸೂದೆಯನ್ನು ಸಂಸದೀಯ ಸ್ಥಾಯಿ ಸಮಿತಿಗೆ ಒಪ್ಪಿಸಲಾಗಿತ್ತು. 2009ರ ಡಿಸೆಂಬರನಲ್ಲಿ ಹಲವು ಬದಲಾವಣೆಗಳೊಂದಿಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿತ್ತು. 2010ರ ಮಾರ್ಚ್ 10ರಂದು ಮಸೂದೆಗೆ ರಾಜ್ಯ ಸಭೆಯು ಅನುಮೋದನೆ ನೀಡಿತ್ತು. ಆದರೆ, ಮಸೂದೆಯಲ್ಲಿನ ಹಲವು ಅಂಶಗಳಿಗೆ ಯುಪಿಎ ಮಿತ್ರಪಕ್ಷಗಳು ಮತ್ತು ವಿರೋಧ ಪಕ್ಷಗಳೂ ಆಕ್ಷೇಪ ವ್ಯಕ್ತಪಡಿಸಿದ್ದವು ಮತ್ತು ಹಲವು ಬದಲಾವಣೆಗಳನ್ನು ಆಗ್ರಹಿಸಿದ್ದವು. ಈ ಕಾರಣದಿಂದ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲೇ ಇಲ್ಲ. 2014ರಲ್ಲಿ ಲೋಕಸಭೆ ವಿಸರ್ಜನೆಯಾದ ಕಾರಣ ಆ ಮಸೂದೆಯು ಬಿದ್ದು ಹೋಯಿತು.

2014ರಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಮಂತ್ರಿ ಅವರ ನೇತೃತ್ವದ ಎನ್ ಡಿ ಎ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ, ಮೀಸಲಾತಿಯನ್ನು ಜಾರಿಗೆ ತರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಮೋದಿ ಸರ್ಕಾರವು ಮಸೂದೆಯನ್ನು ಮಂಡಿಸಲೇ ಇಲ್ಲ. ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು, ಬಿಜೆಪಿಯ ಹಲವು ಮಿತ್ರಪಕ್ಷಗಳೂ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ ಎಂದು ಆಗ್ರಹಿಸಿದ್ದವು. ಆದರೆ ಮೋದಿ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದ್ದು 2023ರಲ್ಲಿ. ಆದರೆ ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆ ಎಂಬ ತಾಂತ್ರಿಕ ಪ್ರಕ್ರಿಯೆಗಳ ಕಾರಣದಿಂದ ಮಹಿಳಾ ಮೀಸಲಾತಿ ಜಾರಿಗೆ ಬರುವುದು 2029ರ ವೇಳೆಗೆ ಎಂದು ನಿರೀಕ್ಷಿಸಲಾಗಿದೆ.

543 ಸದಸ್ಯ ಬಲವಿರುವ ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಸ್ಥಾನಗಳನ್ನು ಮೀಸಲಿರಿಸಬೇಕು ಮತ್ತು ಆ 33 ರಷ್ಟು ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಒಳಮೀಸಲಾತಿ ನೀಡಬೇಕು ಎಂಬುದು ಆರ್.ಜೆ.ಡಿ. ಸಮಾಜವಾದಿ ಪಕ್ಷ, ಜೆಡಿಯು ಮತ್ತು ಬಹುಜನ

ಸಮಾಜವಾದಿ ಪಕ್ಷಗಳ ಆಗ್ರಹವಾಗಿತ್ತು. ಬಿಜೆಪಿಯ ಉಮಾಭಾರತಿ ಸಹ ಇಂತದ್ದೇ ಬೇಡಿಕೆ ಮುಂದಿಟ್ಟಿದ್ದರು. ತಮ್ಮ ಬೇಡಿಕೆಯನ್ನು ಪರಿಗಣಿಸದ ಕಾರಣಕ್ಕೇ ಆರ್.ಜೆ.ಡಿ ಸಮಾಜವಾದಿ ಪಕ್ಷ, ಜೆಡಿಯು ಮತ್ತು ಬಹುಜನ ಸಮಾಜವಾದಿ ಪಕ್ಷ ಈ ಮಸೂದೆಯನ್ನು ವಿರೋಧಿಸಿದ್ದವು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಈಗಾಗಲೇ ನೀಡಲಾಗುತ್ತಿರುವ ಮೀಸಲಾತಿಯಲ್ಲಿ, ಮಹಿಳಾ ಮೀಸಲಾತಿಯ ಕಾರಣದಿಂದ ಯಾವುದೇ ಬದಲಾವಣೆಯಾಗಬಾರದು ಎಂಬುದು ಈ ಪಕ್ಷಗಳ ಮತ್ತೊಂದು ಆಗ್ರಹವಾಗಿತ್ತು. ಮಸೂದೆಯ ಈಗಿನ ಸ್ವರೂಪದಲ್ಲಿ ಮೀಸಲಾತಿ ಜಾರಿಗೆ ತಂದರೆ, ಮಹಿಳಾ ಮೀಸಲಾತಿ ಪಡೆಯುವವರಲ್ಲಿ ಮುಂದುವರಿದ ಜಾತಿಗಳ ಮಹಿಳೆಯರೇ ತುಂಬಿಕೊಳ್ಳುತ್ತಾರೆ, ಇತರ ಸಮುದಾಯಗಳ ಮಹಿಳೆಯರಿಗೆ ಪ್ರಾತಿನಿಧ್ಯ ತಪ್ಪಿ ಹೋಗುತ್ತದೆ ಎಂಬುದು ಈ ಪಕ್ಷಗಳ ಕಳವಳವಾಗಿತ್ತು. ಈವರೆಗೆ ಮಂಡಿಸಲಾಗಿದ್ದ ಮಹಿಳಾ ಮೀಸಲಾತಿ ಮಸೂದೆಯಲ್ಲಿ ಈ ಸ್ವರೂಪದ ಅವಕಾಶಗಳು ಇಲ್ಲದೇ ಇದ್ದ ಕಾರಣದಿಂದಲೇ ಆ ಮಸೂದೆಗಳು ಅನುಮೋದನೆ ಪಡೆಯುವಲ್ಲಿ ವಿಫಲವಾಗಿದ್ದವು.

**ಮಹಿಳಾ ಮೀಸಲು ವಿಧೇಯಕ ಮಂಡನೆ :**

2008ರಲ್ಲಿ ಯುಪಿಎ ಸರ್ಕಾರ ಮಂಡಿಸಿದ್ದ ಮಸೂದೆಯಲ್ಲಿ ಇಂತಹ ಬೇಡಿಕೆಗಳನ್ನು ಪರಿಗಣಿಸಿರಲಿಲ್ಲ ಬದಲಿಗೆ ಈಗಾಗಲೇ ಜಾರಿಯಲ್ಲಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಿರಿಸಿದ ಒಟ್ಟು ಸ್ಥಾನಗಳಲ್ಲಿ ಅದೇ ಸಮುದಾಯದ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಲಾಗಿತ್ತು ಮತ್ತು ಸಾಮಾನ್ಯ ಕ್ಷೇತ್ರಗಳಿಗೆ ಉಳಿದ ಒಟ್ಟು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿತ್ತು. ಆ ಮಸೂದೆಯ ಒಳಗೆ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿರಲಿಲ್ಲ. ಈಗಿನ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವೂ 128ನೇ ತಿದ್ದುಪಡಿ ಮೂಲಕ ಯಥಾವತ್ ಸ್ವರೂಪದಲ್ಲಿ ಮಹಿಳಾ ಮೀಸಲಾತಿಯನ್ನು ಈ ಮಸೂದೆಯಲ್ಲಿ ಸೇರಿಸಿದೆ. ನಾರಿಶಕ್ತಿ ವಂದನಾ ಅಧಿನಿಯಮ ವಿಧೇಯಕ ಎಂದು ಕರೆಸಿಕೊಳ್ಳುವ ಮೀಸಲಾತಿ ಮಸೂದೆಗೆ 2023ರ ಸೆಪ್ಟೆಂಬರ್ 20ರಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಲೋಕಸಭೆಯಲ್ಲಿ 454 ಮತಗಳು ಮತ್ತು 2023ರ ಸೆಪ್ಟೆಂಬರ್ 21ರಂದು ರಾಜ್ಯ ಸಭೆಯಲ್ಲಿ 215 ಮತಗಳು ದೊರೆತು ಅನುಮೋದನೆ ಪಡೆಯಿತು, ಅಂತಿಮವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅಂಕಿತ ಕೂಡ ದೊರೆತಿದೆ.

ಈ ಮಸೂದೆಯು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ನೀತಿ ನಿರೂಪಣೆಯಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುತ್ತದೆ ಮತ್ತು 2047ರ ವೇಳೆಗೆ ದೇಶವನ್ನು ವಿಕಸಿತ ಭಾರತವನ್ನಾಗಿ ಮಾಡುವ ಗುರಿಯನ್ನು ಸಾಧಿಸಲು ಸಹಾಯ ಮಾಡುತ್ತದೆ" ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಮಹಿಳಾ ಮೀಸಲಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಾತಿ ಲೋಕಸಭೆಯ ಒಟ್ಟು ಸ್ಥಾನಗಳಲ್ಲಿ ಶೇ. 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ನೀಡಿದರೆ, ದೊರೆಯುವ ಸ್ಥಾನಗಳ ಸಂಖ್ಯೆ 181 ಇದರಲ್ಲಿ ಪರಿಶಿಷ್ಟ ಜಾತಿ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಿದರೆ ದೊರೆಯುವ ಸ್ಥಾನಗಳ ಸಂಖ್ಯೆ 28 ಮತ್ತು ಪರಿಶಿಷ್ಟ ವರ್ಗದ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಿದರೆ ದೊರೆಯುವ ಸ್ಥಾನಗಳ ಸಂಖ್ಯೆ 5, ಒಬಿಸಿ ವರ್ಗದ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಿದರೆ ದೊರೆಯುವ ಸ್ಥಾನಗಳ ಸಂಖ್ಯೆ 48. ಪ್ರಸ್ತುತ 543 ಲೋಕಸಭೆ ಸ್ಥಾನಗಳಲ್ಲಿ 84 ಸ್ಥಾನಗಳು ಪರಿಶಿಷ್ಟ ಜಾತಿಗೆ ಮತ್ತು 47 ಸ್ಥಾನಗಳು ಪರಿಶಿಷ್ಟ ವರ್ಗಕ್ಕೆ ಮೀಸಲಾಗಿರಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೊರತುಪಡಿಸಿ ಉಳಿದ 412 ಮೀಸಲಾತಿ ಸ್ಥಾನಗಳಲ್ಲಿ ಶೇ. 33ರ ಮೀಸಲಾತಿಯಂತೆ ಸಾಮಾನ್ಯ ವರ್ಗದ ಮಹಿಳೆಯರಿಗೆ 137 ಸ್ಥಾನಗಳು ದೊರೆಯುತ್ತವೆ.

ಈ ಮೀಸಲಾತಿಯಿಂದ ಇಂದು ಮಹಿಳೆಯರ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳಿಗೆ ಜೀವ ಬಂದಂತಾಗಿದೆ. ಹೋರಾಟ ಮತ್ತು ಪರಿಶ್ರಮಗಳ ಮೂಲಕ ಪಡೆದಿರುವ ಈ ಮೀಸಲಾತಿಯಿಂದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಗಟ್ಟಿಯಾಗಿ ನಿಲ್ಲಲು ಈ ಮೀಸಲಾತಿ ಅನುಕೂಲ ಆಗುವುದರಲ್ಲಿ ಎರಡು ಮಾತಿಲ್ಲ. ಭಾರತೀಯ ಮಹಿಳೆಯರು ಪುರುಷರಿಗೆ ಸರಿಸಮಾನವಾದ ಬದುಕು ನಡೆಸುವಂತಾದರೇ ದೇಶದ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹವಿಲ್ಲ.

***

**ಪರಾಮರ್ಶನ ಗ್ರಂಥಗಳು :**

1. ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ ಬರಹ ಮತ್ತು ಭಾಷಣಗಳು–

ಸಂಪುಟ–3., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಮಲತಳ್ಳಿ, ಬೆಂಗಳೂರು, ಪುಟ–362

2. ಮಹಿಳಾ ಅಸಮಾನತೆ – ನ್ಯಾ. ಹೆಚ್. ಎನ್. ನಾಗಮೋಹನದಾಸ್, ಚಿಂತನ ಪುಸ್ತಕ – ಬೆಂಗಳೂರು, ಮೊದಲ ಮುದ್ರಣ –2014, ಪುಟ – 37
3. ಅದೇ,, ಪುಟ–76
4 ಮಹಿಳೆಯರ ಸ್ಥಿತಿಗತಿ – ಮಂಗ್ಳೂರ ವಿಜಯ–ಪುಟ–1 ವಿಚಾರ ಭಾರತ, ಬೆಂಗಳೂರು.
5. ಪ್ರಜಾವಾಣಿ ದಿನಪತ್ರಿಕೆ ಸೆಪ್ಟೆಂಬರ್ 20 ,2023
6. ಮಹಿಳೆ ಮತ್ತು ರಾಜಕೀಯ ಮೀಸಲಾತಿ (ಲೇಖನ)" ಮಹಿಳಾ ಮೀಸಲಾತಿ" – ಡಾ. ಎಸ್ ಯಶೋಧ, ಈಶ್ವರಿ ಪ್ರಕಾಶನ, ಮೈಸೂರು –2005

**ಅಂಜಿನಪ್ಪ ಎಲ್.ಟಿ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು 560056
anji.bellary@gmail.com

# ಅಮುಗೆ ರಾಯಮ್ಮ – ನಿಷ್ಠುರ ನಿಲುವಿನ ದಿಟ್ಟ ಶರಣೆ

¤ ಡಾ. ಪಿ. ನಾಗರಾಜ

ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಶರಣಕ್ರಾಂತಿಗೆ ಬಹುವಿಶಿಷ್ಟವಾದ ಸ್ಥಾನವಿದೆ. ಮೂಲಭೂತವಾಗಿ ಸಾಮಾಜಿಕ ಚಳವಳಿಯಾಗಿ ತನ್ನನ್ನು ತಾನು ಪ್ರಕಟಿಸಿಕೊಂಡ ಈ ಕ್ರಾಂತಿಯು ತನ್ನ ನೆಲೆಗಳನ್ನು ವಿಸ್ತರಿಸಿಕೊಂಡು ಧಾರ್ಮಿಕ ಕ್ರಾಂತಿಯಾಗಿಯೂ ರೂಪುತಳೆಯಿತು. ಶರಣಕ್ರಾಂತಿಯ ಮೂಲಕ ವೀರಶೈವ ಧರ್ಮವು ಪ್ರವರ್ಧಮಾನಕ್ಕೆ ಬಂದಿತು, ವೀರಶೈವ ಧರ್ಮದ ತತ್ವ, ಸಿದ್ಧಾಂತಗಳು ಶರಣಕ್ರಾಂತಿಯ ಧಾರ್ಮಿಕ ನೆಲಗಳನ್ನು ರೂಪಿಸಿದವು. ಶರಣರಿಂದ ರಚಿತವಾದ ವಚನಸಾಹಿತ್ಯವು ಸಾಹಿತ್ಯಿಕ ನೆಲೆಯಲ್ಲಿ ಕ್ರಾಂತಿಯನ್ನು ತಂದಿತು. ರಾಜಾಶ್ರಯದ ಪಾಂಡಿತ್ಯಪೂರ್ಣತೆಯ ಮುಸುಕನ್ನು ಕೊಡವಿಕೊಂಡು ಕನ್ನಡ ಸಾಹಿತ್ಯವು ಮೊಟ್ಟಮೊದಲ ಬಾರಿಗೆ ಜನಸಾಮಾನ್ಯರನ್ನು ತಲುಪುವಂತಾದದ್ದು ವಚನಸಾಹಿತ್ಯದ ಮೂಲಕವೇ. ಹೀಗೆ ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ನೆಲೆಗಳಲ್ಲಿ ರೂಢಿಗತವಾದ ಮಾದರಿಗಳನ್ನು ಮೀರಿ ಹೊಸದನ್ನು ಮೂಡಿಸಲು ಶರಣಕ್ರಾಂತಿಯು ತವಕಿಸಿತು. ಅತ್ಯಂತ ಪ್ರಾಮಾಣಿಕ ಕಾಳಜಿಯ, ಪುರೋಗಾಮಿಯಾದ ಸಂವೇದನಶೀಲತೆಯ ಹಲವು ಮಂದಿ ಒಟ್ಟಿಗೆ ಸೇರಿ ಸಾಧ್ಯವಾದ ಈ ಕ್ರಾಂತಿಯ ಅನುರಣನಗಳು ಇಂದಿಗೂ ಸಹ ಕಿವಿಗೆ ಬೀಳುತ್ತಲೇ ಇವೆ ಎನ್ನುವುದು ಅದರ ಪ್ರಸ್ತುತತೆಗೆ ದ್ಯೋತಕವಾಗಿದೆ. ಯಾವುದೇ ಚಳವಳಿಯ, ಸಾಹಿತ್ಯದ ಯಶಸ್ಸು ಕಾಲಾಂತರದಲ್ಲೂ ಅದು ಹೊಂದಿರುವ ಪ್ರಸ್ತುತತೆಯಲ್ಲಿರುತ್ತದೆ, ಸಮಕಾಲೀನ ಸಂದರ್ಭದಲ್ಲಿಯೂ ಅದು ಪ್ರಕಟಿಸುವ ಜೀವಂತಿಕೆಯ ಸ್ವರೂಪದಲ್ಲಿರುತ್ತದೆ. ಶರಣಕ್ರಾಂತಿಯು ಸಾರ್ವಕಾಲಿಕ ಪ್ರಸ್ತುತತೆಯ ಇತಿಹಾಸದ ಒಂದು ಅನನ್ಯವಾದ ಪರ್ವವಾಗಿದೆ.

ಶರಣಕ್ರಾಂತಿಯ ಬಹು ಮುಖ್ಯವಾದ ಆಯಾಮಗಳಲ್ಲಿ ಒಂದು ಸಮಾಜದ ಕೆಳವರ್ಗಗಳಿಗೆ ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳಲು ಅದು ಅವಕಾಶಗಳನ್ನು ಒದಗಿಸಿದ್ದು. ಭಾರತೀಯ ಸಮಾಜದ ಸಾಂಪ್ರದಾಯಿಕ ಚಹರೆಯ ಹಿನ್ನೆಲೆಯಲ್ಲಿ ನೋಡಿದಾಗ ತಿಳಿಯುವಂತೆ ಇದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅದಕ್ಕಾಗಿಯೇ ಶರಣರು ಮೊದಲು ಸಮಾಜದ ಕೆಳವರ್ಗಗಳನ್ನು ತಮ್ಮನ್ನು ತಾವು ಅಭಿವ್ಯಕ್ತಿಸಿಕೊಳ್ಳಲು ಬೌದ್ಧಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸನ್ನದ್ಧಗೊಳಿಸಿದರು. ಸಮಾಜದಲ್ಲಿ ಯಾವುದೇ ಬಗೆಯ ಅಸಮಾನತೆಯನ್ನು ಬಹಳ ಪ್ರಬಲವಾಗಿ ವಿರೋಧಿಸಿದ ಶರಣರು ಸಹಜವಾಗಿಯೇ ಸ್ತ್ರೀ–ಪುರುಷ ಅಸಮಾನತೆಯನ್ನೂ ತೊಡೆದುಹಾಕುವತ್ತ ಶ್ರಮಿಸಿದರು. ಇದರ ನೇರವಾದ ಫಲವಾಗಿ ಶರಣಕ್ರಾಂತಿಯಲ್ಲಿ ಸ್ತ್ರೀಯರು ಪಾಲ್ಗೊಳ್ಳುವಂತಾಯಿತು. ತಮ್ಮ ರೂಢಿಗತ ಬದುಕಿನಾಚೆಗೆ ದೃಷ್ಟಿಬೀರಿ ಸಾರ್ಥಕ್ಯದ ಬೆಳಕಿನಿಂದ ತಮ್ಮ ಬದುಕುಗಳನ್ನು ದೀಪ್ತಗೊಳಿಸಿಕೊಂಡು ತಮ್ಮ ಸತ್ವಶೀಲತೆಯನ್ನು ಮೆರೆಯಲು ಶರಣಕ್ರಾಂತಿಯು ಸ್ತ್ರೀಯರಿಗೆ ವೇದಿಕೆಗಳನ್ನು ಒದಗಿಸಿತು. ಎಲ್ಲ ಬಗೆಯ ಅಸಮಾನತೆಗಳನ್ನೂ ನಿರಾಕರಿಸಿದ ಶರಣಕ್ರಾಂತಿಯು ಸ್ತ್ರೀ–ಪುರುಷ ಅಸಮಾನತೆಯನ್ನು ನಿರಾಕರಿಸಿದ್ದು ಅತ್ಯಂತ ಸಹಜವೂ, ಶರಣಕ್ರಾಂತಿಯ ಘನತೆಗೆ ಹಿಡಿದ ಕನ್ನಡಿಯೂ ಆಗಿ ಪ್ರಕಟವಾಗುತ್ತದೆ. ಇದಕ್ಕೆ ಪೂರಕವಾಗಿ ಶರಣೆಯರು ಅನನ್ಯಸದೃಶವಾದ ವಸ್ತುನಿಷ್ಠತೆಯನ್ನು ತಮ್ಮ ದೃಷ್ಟಿಯಲ್ಲಿ ಬಿಂಬಿಸಿ ಒಟ್ಟು ಶರಣಕ್ರಾಂತಿಗೆ ಮಹತ್ವಪೂರ್ಣವಾದ ಆಯಾಮವನ್ನು ಒದಗಿಸಿದರು. ಹೀಗೆ ವಚನಕ್ರಾಂತಿಯನ್ನು ಪುಷ್ಟಗೊಳಿಸಿದ ಶರಣೆಯರಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವವಳು ಅಮುಗೆ ರಾಯಮ್ಮ. ಅಮುಗೆ ದೇವಯ್ಯನ ಹೆಂಡತಿ ಅಮುಗೆ ರಾಯಮ್ಮ. ಅವಳದು ನೇಯ್ಗೆಯ ಕಾಯಕ. ಮಹಾದೇವಿಯಕ್ಕನನ್ನು ಹೊರತುಪಡಿಸಿದರೆ ವಚನಕಾರ್ತಿಯರ ಪೈಕಿ ನೇರವೂ ನಿಷ್ಠುರವೂ ದಿಟ್ಟವೂ ಆದ ನುಡಿಗಳು ಹೊರಟಿರುವುದು ಈಕೆಯಲ್ಲಿ. ಸಮಾಜದ ಡಾಂಭಿಕತೆ ಹಾಗೂ ತೋರಿಕೆಯ ಗುಣದ ವಿರುದ್ಧ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ಒದಗಿಸುತ್ತ ಅಮುಗೆ ರಾಯಮ್ಮ ನಿಜವಾದ ಭಕ್ತಿ ಮತ್ತು ಏಕದೇವತಾ ನಿಷ್ಠೆಯನ್ನು ಪ್ರತಿಪಾದಿಸುತ್ತಾಳೆ. ಅಮುಗೆ ರಾಯಮ್ಮನಿಗೆ ವರದಾನಿಯಮ್ಮ ಎಂಬ ಹೆಸರು ಇದ್ದು, ಪುಳುಜದ ಸೊಮನಾಥನ ಆರಾಧಕಿ ಈಕೆ. ಈಕೆಯ ಪತಿಯು ವಿಜಾಪುರ ಜಿಲ್ಲೆ ಸೊಲ್ಲಾಪುರದಿಂದ ಸುಮಾರು 20 ಕಿ.ಮೀ. ದೂರದಲ್ಲಿ ಭೀಮಾತೀರದಲ್ಲಿ ನೆಲೆಸಿದ್ದರು ಎಂಬ ಉಲ್ಲೇಖವೂ ಇದೆ. ಪುಳುಜವನ್ನು ವರ್ಣಜಾ, ಪುಂಜ ಇತ್ಯಾದಿಯಾಗಿ ಕರೆಯುತ್ತಿದ್ದರು.

ಚಿಕ್ಕನಂಜೇಶನ 'ರಾಘವಾಂಕ ಚರಿತೆ'ಯಲ್ಲಿ ಅಮುಗೆರಾಯಮ್ಮ ಮತ್ತು

ದೇವಯ್ಯ ದಂಪತಿಗಳು ಕಲ್ಯಾಣದ ಕಡೆ ಆಗಮಿಸುವುದಕ್ಕೆ ಕಾರಣವಾದ ಘಟನೆಯನ್ನು ವರ್ಣಿಸಲಾಗಿದೆ. ಸಿದ್ಧರಾಮ ಸೊನ್ನಲಾಪುರದ ಮಲ್ಲಿನಾಥನ ಆರಾಧನೆಗೆ ಬೇಕಾದ ಅಕ್ಕಿಯನ್ನು ಪಡೆಯಲು ಊರಲ್ಲಿ ಕೊಟ್ಟು ಹಾಕಿಸಿದಾಗ ಅಮುಗಯ್ಯನ ಮನೆಗೂ ಭತ್ತ ಕಳುಹಿಸುತ್ತಾನೆ. 'ನಾವು ವರಲಿಂಗನಿಷ್ಠೆಯುಳ್ಳವರು, ಅಂಗದ ಮೇಲೆ ಲಿಂಗವಿಲ್ಲದ ಭವಿಯ ಸೇವಿಸೆವು' ಎಂದು ಆ ಭತ್ತವನ್ನು ತಿಪ್ಪೆಗೆ ಸುರಿದಾಗ ಸಿದ್ಧರಾಮ ಅವರನ್ನು ಊರು ಬಿಟ್ಟು ಹೋಗುವಂತೆ ತಿಳಿಸುತ್ತಾನೆ. ಅಮುಗಯ್ಯ ತನ್ನ ಮನೆ ಸಾಮಾನುಗಳನ್ನು ಮೂರು ಹೊರೆ ಮಾಡಿ, ಕಪಿಲಸಿದ್ಧ ಮಲ್ಲಯ್ಯನಿಗೆ ನೀನೊಂದು ಹೊರೆಹೊತ್ತು ಮುಂದಿನೂರಿಗೆ ಬಾ ಎಂದು ಹೇಳಿ ದಂಪತಿಗಳು ಒಂದೊಂದು ಹೊರೆ ಹೊತ್ತು ಊರು ಬಿಡುತ್ತಾರೆ. ಮುಂದೆ ಮಲ್ಲಯ್ಯನ ಮೂಲಕ ಈ ವಿಷಯ ತಿಳಿದ ಸಿದ್ದರಾಮಯ್ಯ ಅಮುಗಯ್ಯನನ್ನು ಕರೆತರಲು ಬರುತ್ತಾನೆ. ಅಮುಗಯ್ಯ ಸಿದ್ಧರಾಮನೊಂದಿಗೆ ಸೊನ್ನಲಾಪುರಕ್ಕೆ ಬರುತ್ತಾನೆ. ಕಲ್ಯಾಣಕ್ರಾಂತಿಯ ನಂತರ ಪುಳಜೆ ಎಂಬ ಗ್ರಾಮಕ್ಕೆ ಅವರು ಬಂದು ನೆಲೆ ನಿಲ್ಲುತ್ತಾರೆ.

ರಾಯಮ್ಮನಿಗೆ ವರದಾನಿಯಮ್ಮ ಎಂಬ ಅಡ್ಡಹೆಸರೂ ಇತ್ತು. ಜಾನಪದ ಹಾಡಿನಲ್ಲಿ 'ದಾನವ್ವ ಶಿವಶರಣೆ ನಾಣಿ ಅಮುಗನ ಮಡದಿ' ಎಂಬ ಸಾಲು, ಊರು ಬಿಟ್ಟು ಹೊರಡುವ ಸಂದರ್ಭದಲ್ಲಿ 'ವರದಾನಿ ಹೆಂಡತಿಯ ತರವಲ್ಲ ಈ ಊರು' ಎಂದು ಕರೆದು ಹೊರಡಿಸುವುದು – ಇವುಗಳು ಆಕೆಗೆ ವರದಾನಿಯಮ್ಮ ಅಥವಾ ವರದಾಯಿನಿ ಎಂಬ ಹೆಸರು ಇತ್ತೆನ್ನುವುದನ್ನು ಸೂಚಿಸುತ್ತವೆ. ವಿದ್ವಾಂಸರ ಪ್ರಕಾರ (ಶಿವಶರಣೆಯರು, ಪುಟ 78, 79) ಈಕೆಯ ಕಾಲ ಕ್ರಿ.ಶ 1160. 'ಬಸವಯುಗದ ಶಿವಶರಣೆಯರು' ಎಂಬ ಕೃತಿಯಲ್ಲಿ ಎರಡು ರೀತಿಯ ಅಭಿಪ್ರಾಯಗಳನ್ನು ಈ ದಂಪತಿಗಳ ಕುರಿತಾಗಿ ಉಲ್ಲೇಖಿಸಲಾಗಿದೆ :

ಅಮುಗೆ ರಾಯಮ್ಮ ರಾಯಸದ ಮಂಚಣ್ಣನ ಪತ್ನಿ ಎನ್ನುವುದು ಒಂದು ಅಭಿಪ್ರಾಯವಾಗಿದೆ. ಬಸವಣ್ಣನವರ ರಾಯಸದ ಕಾಯಕದಲ್ಲಿ ನಿರತನಾದ ಮಂಚಣ್ಣ ಅನುಭಾವಿ. ಅವನ ಪತ್ನಿ ರಾಯಮ್ಮನು ಅನುಭವಿಯಾಗಿದ್ದಾಳೆ. ಮತ್ತೊಂದೆಡೆಯಲ್ಲಿ 'ಸೊನ್ನಲಿಗೆಯ ಶರಣ ಅಮುಗೆ ದೇವಯ್ಯನ ಪತ್ನಿ ಅಮುಗೆ ರಾಯಮ್ಮನ ವಚನಗಳು ಚಾಟಿ ಏಟಿನಂತಿವೆ'. ಎಂದು ಹೇಳುತ್ತಾ 'ಅಮುಗೇಶ್ವರ' ಎಂಬ ಅಂಕಿತವುಳ್ಳ ವಚನಗಳನ್ನು ಉಲ್ಲೇಖಿಸಲಾಗಿದೆ. ಶಿವಶರಣೆಯರ ಚರಿತ್ರೆಗಳು (ಡಾ.ಫ.ಗು. ಹಳಕಟ್ಟಿ), ಬಸವಯುಗದ ಶಿವಶರಣೆಯರು (ಲಲ್ಲೇಶ್ವರಿ ಮೂಗಿ), ಶಿವಶರಣ ಕಥಾ ರತ್ನ ಕೋಶ (ತ.ಸು.ಶಾಮರಾಯ) – ಈ ಕೃತಿಗಳ ಪ್ರಕಾರ ಕೆಲವು ಕಡೆ ರಾಯಸದ ಮಂಚಣ್ಣನ ಪತ್ನಿ ಎಂದು ಅಭಿಪ್ರಾಯವಿದೆ. ಡಾ. ಆರ್.ಸಿ. ಹಿರೇಮಠ ಅವರು

ಸಿದ್ಧರಾಮ ಚಾರಿತ್ರ್ಯದ ಆಧಾರದಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–4ರಲ್ಲಿ ಶಿವಶರಣೆಯರ ವಚನಗಳ ಸಮಗ್ರ ಸಂಪುಟದಲ್ಲಿ ಅಮುಗೆ ರಾಯಮ್ಮ ಸೊನ್ನಲಿಗೆಯ ಭಕ್ತನಿಷ್ಠ ನೇಕಾರ ಅಮುಗೆ ದೇವಯ್ಯನ ಪತ್ನಿ ಎಂದು ಹೇಳಿದ್ದಾರೆ. ಇದನ್ನೇ ಒಪ್ಪಲಾಗಿದೆ. ಅಮುಗೆ ರಾಯಮ್ಮನ ವಚನಗಳ ಅಂಕಿತ 'ಅಮುಗೇಶ್ವರಾ'. ಅಮುಗೆ ರಾಯಮ್ಮನ 115 ವಚನಗಳು ದೊರಕ್ಕಿದ್ದು, ಅವುಗಳಲ್ಲಿ ಸಮಾಜದಲ್ಲಿನ ಕೆಡುಕನ್ನು ಕುರಿತಾದ ತೀಕ್ಷ್ಣವಾದ ಪ್ರತಿಕ್ರಿಯೆ ಇದೆ. ಸಮಾಜ ವಿಮರ್ಶೆ, ಡಾಂಭಿತೆಯ ಮತ್ತು ಆಷಾಢಭೂತಿತನದ ವಿಡಂಬನೆ, ಕಾಯಕ ಮತ್ತು ದಾಸೋಹಗಳ ಪುರಸ್ಕಾರ, ಭಕ್ತ–ಭಕ್ತಿ, ಜ್ಞಾನ, ವೇದಾಗಮಗಳು ಮತ್ತು ಕರ್ಮಠತೆಯ ತಿರಸ್ಕಾರಗಳನ್ನು ಕುರಿತಾದ ಸ್ಪಷ್ಟವೂ ಪ್ರಾಮಾಣಿಕವೂ ಆದ ನಿಲುವುಗಳಿವೆ.

ಅನುಭಾವಿಗಳೆಂದು ಹೇಳಿಕೊಂಡು ತಿರುಗುವವರನ್ನು ಕಂಡರೆ ರಾಯಮ್ಮನಿಗೆ ಆಗದು. ಕಂಗಳ ಮುಂದಣ ಕಾಮ, ಮನದ ಮುಂದನ ಆಸೆ, ಅಂಗದಲ್ಲಿ ಅಹಂಕಾರ ಅವರಿಗೆ ಇದ್ದೇ ತಿರುತ್ತದೆ. ಅನುಭಾವಿಗಳು ನೀರಿನ ಮೇಲಿನ ತೆಪ್ಪದಂತೆ, ಸಮುದ್ರದೊಳಗಿನ ಬೆಂಗುಂಡಿನಂತೆ ಇಂಥವರು ಜಗತ್ತಿಗೆ ಅಂಟಿಯೂ ಅಂಟದವರಂತಿರಬೇಕು ಎನ್ನುತ್ತಾಳೆ ಅವಳು. ರಾಯಮ್ಮ ನಿಷ್ಠುರ ಸ್ವಭಾವದವಳು. ವಚನಗಳನ್ನು ಹೇಳಿಕೊಂಡು ತಿರುಗುವ, ತನ್ಮೂಲಕ ಜ್ಞಾನಿಗಳೆಂದು ಸುಳ್ಳು ಚಿತ್ರವನ್ನು ಕೊಡುವ ಜನರನ್ನು, ಮಾತಿನಲ್ಲಿ ಮಹಾಜ್ಞಾನಿಗಳೆಂಬ ವೇಷಧಾರಿಗಳ ಕಂಡು ನಾಚುವೆ ಎನ್ನುತ್ತಾಳೆ. ಡಾಂಭಿಕ ಭಕ್ತಿಯನ್ನು ವಿರೋಧಿಸುವ ರಾಯಮ್ಮ **"ಕತ್ತೆಯಂತೆ ಬೆತ್ತಲೆಯಿದ್ದಡೇನು ಇಷ್ಟಲಿಂಗ ಸಂಬಂಧಿಯಾಗಬಲ್ಲನೆ?"** ಎಂದು ಪ್ರಶ್ನಿಸುತ್ತ ಕಟ್ಟಿದ ಲಿಂಗವ ಕೈಯಲ್ಲಿ ಹಿಡಿದ ತಕ್ಷಣ ಜ್ಞಾನಿಯಾಗಲಾರ ಎನ್ನುತ್ತಾಳೆ.

**ಕಾಲಿಲ್ಲದ ಕುದುರೆಯನೇರಿ ರಾವುತಿಕೆಯ ಮಾಡಬೇಕು**
**ಕಡಿವಾಣವಿಲ್ಲದ ಕುದುರೆಯ ನಿಲ್ಲಿಸಬೇಕು**
**ಕಾಲಿಲ್ಲದ ಕುದುರೆಯ ಬೀದಿಯಲ್ಲಿ ಕುಣಿಸಾಡಬಲ್ಲಡೆ**
**ಇಹಲೋಕಕ್ಕೆ ವೀರನೆಂಬೆ, ಪರಲೋಕಕ್ಕೆ ಧೀರನೆಂಬೆ**
**ಅಮುಗೇಶ್ವರ ಲಿಂಗಕ್ಕೆ ಅಧಿಕನೆಂಬೆ**
**(ಸಮಗ್ರ ವಚನ ಸಂಪುಟ 5, 632)**

ಈ ಮೆಲಿನ ವಚನದ ಜೊತೆಗೆ 'ಅಲ್ಲಮನ ಕೊಟ್ಟ ಕುದುರೆಯನೇರಬಲ್ಲವ...' ವಚನವನ್ನಿಟ್ಟು ನೋಡಬಹುದು. ಸಾಮಾನ್ಯವಾಗಿ ಮನಸ್ಸನ್ನು ಮರ್ಕಟ ಅಥವಾ ಕುದುರೆಗೆ ಹೋಲಿಸುವುದುಂಟು. ಹಾಗೆ ನಾವು ಮನಸೆಂಬ ಕುದುರೆಯ ಸವಾರಿ

ಮಾಡಲು ಬೇಕಾದಂತೆ ಕುಣಿಸಲು ಕಲಿತದ್ದೇ ಆದರೆ ಸ್ವತಂತ್ರರು. ಶಿಶುನಾಳ ಷರೀಫರ 'ಎಂಥಾ ಮೋಜಿನ ಕುದುರೆ, ಹತ್ತಿದ ಮೇಲೆ ತಿರುಗುವುದು ಹನ್ನೊಂದು ಕೇರಿ' ಗೀತೆಯನ್ನೂ ಸಹ ಈ ಸಂದರ್ಭದಲ್ಲಿ ಗಮನಿಸಬಹುದು. ಈ ಮೇಲಿನ ರಾಯಮ್ಮನ ವಚನದ ಸಾಲು ನಾವು ಮನಸ್ಸಿನ ಗುಲಾಮರಾಗಬಾರದು, ನಾವು ಮನಸ್ಸಿನ ಮಾಲಿಕರಾಗಬೇಕು ಎಂಬ ಸತ್ಯವನ್ನು ಹೇಳುತ್ತಿದೆ. ಅಕ್ಕ ಮತ್ತು ಅಮುಗೆ ರಾಯಮ್ಮ ವಿರಕ್ತಿಯ ಚರ್ಚೆಯನ್ನು ಮಾಡಿದ್ದುಂಟು.

**ಅಕ್ಕಮಹಾದೇವಿಯ ದೃಷ್ಟಿಯಲ್ಲಿ 'ವಿರಕ್ತಿ' ಎಂದರೆ ಹೀಗಿದೆ :**

1. ಅಯ್ಯಾ, ವಿರಕ್ತಿ ವಿರಕ್ತರೆಂದೇನೊ? ವಿರಕ್ತಿಯ ಮಾತಾಡುವುರಲ್ಲದೆ ವಿರಕ್ತಿ ಎಲ್ಲರಿಗೆಲ್ಲಿಯದೋ...
2. ವಿರಕ್ತ ವಿರಕ್ತಿಯೆಂಬುವರು. ವಿರಕ್ತಿಯ ಪರಿಯೆಂತುಂಟು ಹೇಳಿರಯ್ಯಾ? ಕಟ್ಟುವ ಲಿಂಗವ ಕೈಯಲ್ಲಿ ಹಿಡಿದು ಬತ್ತಲೆ ಇರ್ದಡೆ ವಿರಕ್ತನೆ?
3. ...ಬಿಟ್ಟುಮಂಡೆಯ ಕಟ್ಟುವರ್ದಡೆ ವಿರಕ್ತನೆ? ಮೂಗನಂತೆ ಮಾತನಾಡದಿರ್ದಡೆ ವಿರಕ್ತನೆ?

ಅಮುಗೆ ರಾಯಮ್ಮ ವಿರಕ್ತಿಯ ಬಗ್ಗೆ ಹೇಳುವ ಮಾತುಗಳನ್ನು ಗಮನಿಸಿದರೆ ಅಕ್ಕನ ವಚನಗಳಿಗೂ ಅಮುಗೆ ರಾಯಮ್ಮನ ವಚನಗಳಿಗೂ ಸಾಮ್ಯ ಇರುವುದನ್ನು ಕಾಣಬಹುದು.

**ಗುರುವಿನಲ್ಲಿ ಉಪದೇಶ ಪಡೆದವರೆಲ್ಲರೂ ವಿರಕ್ತರಾಗಬಲ್ಲರೆ?**
**ವಿರಕ್ತ ವಿರಕ್ತ ಎನ್ನುವ ಹಾದಿಕಾರರ ವಿರಕ್ತ ಎನ್ನಬಹುದೆ?**
**ಕಾವಿಗಳ ಹೊದ್ದು ತಿರುಗುವ ಜೀವನಗಳ್ಳರು ವಿರಕ್ತರೆ?**
**ನಾಮವಿಟ್ಟುಕೊಂಡು ತಿರುಗುವ ಗಾವಿಲರು ವಿರಕ್ತರೆ?**

ಎಲ್ಲವನ್ನು ಬಿಟ್ಟಿದ್ದೇವೆಂದು ಬೀಗುವುದರಿಂದ ವಿರಕ್ತಿ ಉಂಟಾಗುವುದಿಲ್ಲ. ಗುರುವಿನಿಂದ ಉಪದೇಶವಾದ ಮಾತ್ರಕ್ಕೆ, ಕಾವಿಯನ್ನು ಹೊದ್ದು ತಿರುಗಿದ ಮಾತ್ರಕ್ಕೆ, ನಾಮವನ್ನಿಟ್ಟುಕೊಂಡು ತೋರಿಕೆಯನ್ನು ಮಾಡಿದ ಮಾತ್ರಕ್ಕೆ ಯಾರೂ ವಿರಕ್ತರಾಗುವುದಿಲ್ಲ. ಇದ್ದುದೆಲ್ಲವನ್ನು ಬಿಡುವುದರಿಂದೇನೂ ಆಗುವುದಿಲ್ಲ, ಸಾಧನೆಯಿಂದ ಮಾತ್ರ ಪರಮಪದದ ಸಾಕಾರ ಸಾಧ್ಯ ಎಂಬುದು ಇಬ್ಬರೂ ವಚನಗಾರ್ತಿಯರ ಅಭಿಮತವಾಗಿದೆ.

ಸದಾಚಾರದ ಮೇಲೆ ವಚನಕಾರರು ಇರಿಸಿದ ಒತ್ತು ಮತ್ತು ಅದಕ್ಕೆ ಅವರು ಇತ್ತ ಮಹತ್ವವು ವಿದಿತವೇ ಹೌದು. ಅಂತೆಯೇ ವ್ರತನಿಷ್ಠೆಯನ್ನೂ ಅವರು ಬಹುಮುಖ್ಯವೆಂದು ಭಾವಿಸಿದ್ದರು. ಎಲ್ಲ ವಚನಕಾರರೂ ಆಚಾರಗಳ ಘನತೆಗೆ

ಮತ್ತು ವ್ರತಶೀಲತೆಗೆ ಹೆಚ್ಚಿನ ಮೌಲ್ಯವನ್ನು ನೀಡಿದ್ದಾರೆ. ಅಮಗೆ ರಾಯಮ್ಮ ಈ ಕುರಿತಂತೆ ಆಡಿರುವ ನುಡಿಗಳನ್ನು ಕೆಳಗಿನ ವಚನಗಳು ಬಿಂಬಿಸುತ್ತವೆ:

**ಅಂಗಕ್ಕಾಚಾರ ಮನಕ್ಕೆ ಜ್ಞಾನ ಸಮರಸಾದ್ಪೈತವಾದ ಮತ್ತೆ**
**ಪುನರಪಿ ಪುನರ್ದೀಕ್ಷೆಯುಂಟೆ?**
**ಗರುಡಿಯಲ್ಲಿ ಕೋಲಲ್ಲದೆ, ಕಾಳಗದಲ್ಲಿ ಉಂಟೆ ಕೋಲು?**
**ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ, ಭಕ್ತರಿಗುಂಟೆ?**
**ವ್ರತತಪ್ಪಿ ಅನುಗ್ರಹವಿಡಿದ ನರಕಿಗಳಿಗೆ**
**ಮುಕ್ತಿ ಇಲ್ಲ ಎಂದೆ ಅಮುಗೇಶ್ವರಲಿಂಗದಲ್ಲಿ**
**(ಸಮಗ್ರ ವಚನ ಸಂಪುಟ 5, 589)**

**ಅಂಗದ ಮೇಲೆ ಲಿಂಗವಿಲ್ಲದವರಲ್ಲಿ**
**ಲಿಂಗಾರ್ಪಿತವ ಬೇಡಲೇಕೆ?**
**ಅಂಗದ ಮೇಲೆ ಲಿಂಗವುಳ್ಳ ಲಿಂಗವಂತರಲ್ಲಿ**
**ಲಿಂಗಾರ್ಪಿತವ ಬಿಡಲೇತಕ್ಕೆ?**
**ಜಾತಿಗೋತ್ರವನೆತ್ತಿ ನುಡಿಯಲೇಕೆ?**
**ಸಹಜ ಶಿವಭಕ್ತರೆಂದು, ಶೀಲವಂತರೆಂದು, ವ್ರತಾಚಾರಿಗಳೆಂದು,**
**ವ್ರತಭಟ್ಟರೆಂದು ಅವರ ಕುಲಛಲವ ಕೇಳಿಕೊಂಡು**
**ಆಚಾರವುಳ್ಳವರು ಅನಾಚಾರಿಗಳು ಎಂದು**
**ಬೇಡುವ ಭಿಕ್ಷವ ಬಿಡಲೇತಕ್ಕೆ?**
**ಮದ್ಯಮಾಂಸವ ಭುಂಜಿಸುವವರು ಅನಾಚಾರಿಗಳು,**
**ಆವ ಕುಲವಾದಡೇನು, ಅಂಗದ ಮೇಲೆ ಲಿಂಗವುಳ್ಳವರೆಲ್ಲರು**
**ಆಚಾರವುಳ್ಳವರೆಂಬೆನಯ್ಯಾ,**
**ಅಮುಗೇಶ್ವರಲಿಂಗಕ್ಕೆ ಅವರೆ ಸದ್ಭಕ್ತರೆಂಬೆನಯ್ಯಾ**
**(ಸಮಗ್ರ ವಚನ ಸಂಪುಟ 5, 591)**

ಆಚಾರ–ಅನಾಚಾರಗಳ ಸ್ಥಿತಿಯ ನಡುವಿನ ಅಂತರವನ್ನು ಮೇಲಿನ ವಚನವು ಪರಿಣಾಮಕಾರಿಯಾಗಿ ಹೇಳುತ್ತಿದ್ದರೆ ಕೆಳಗಿನ ವಚನವು ನಿಜವಾದ ಅನುಭಾವಿಗಳಾರು ಎನ್ನುವುದನ್ನು ಸ್ಪಷ್ಟಪಡಿಸುತ್ತಿದೆ, ವೇಷಧಾರಿಗಳನ್ನು ಬಯಲುಮಾಡುತ್ತಿದೆ. ಆಚಾರಿಗಳಾರು, ಅನಾಚಾರಿಗಳಾರು ಎಂದು ನಿರ್ಧರಿಸಲು ಜಾತಿ, ಕುಲಗಳನ್ನು ಪ್ರಶ್ನಿಸುತ್ತ ಸಾಗುವ ವ್ಯರ್ಥವಾದ ಪ್ರಯತ್ನವನ್ನು ರಾಯಮ್ಮ ಇಲ್ಲಿ ನಿರಾಕರಿಸುತ್ತಿದ್ದಾಳೆ. ಯಾವುದೇ ಕುಲವಾದರೂ ಸರಿ, ಯಾವ ಜಾತಿಯಾದರೂ ಸರಿ, ಅಂಗದ ಮೇಲೆ

ಲಿಂಗವಿದ್ದರೆ ಅವರು ಆಚಾರವಂತರೆಂದು ರಾಯಮ್ಮ ಹೇಳುತ್ತಿದ್ದಾಳೆ, ಅಂತೆಯೇ ಅನಾಚಾರಿಗಾರು ಎನ್ನುವುದನ್ನೂ ಅವಳು ಹೇಳುತ್ತಾಳೆ, ಮದ್ಯ ಮಾಂಸವನ್ನು ಸೇವಿಸುವವರೇ ಅನಾಚಾರಿಗಳು.

ಅನುಭಾವಿಗಳನ್ನು ಅವರ ನಿಜವಾದ ಗುರುತನ್ನು ಕುರಿತಾದ ವಚನವೊಂದರಲ್ಲಿ ರಾಯಮ್ಮ ಅನುಭಾವಿಗಳ ಲಕ್ಷಣಗಳನ್ನು ತಿಳಿಸುತ್ತಾಳೆ. ಆ ವಚನವು ಇಂತಿದೆ:

**ಅನುಭಾವಿಗೆ ಅಂಗಶೃಂಗಾರವುಂಟೆ?**
**ಅನುಭಾವಿಗೆ ಕಾಮಕ್ರೋಧವುಂಟೆ?**
**ಅನುಭಾವಿಗೆ ನಾಹಂ ಕೋಹಂ ಸೋಹಂ ಎಂಬ ಭ್ರಾಂತಿನ ಭ್ರಮೆಯುಂಟೆ?**
**ಅನುಭಾವಿಗೆ ನನ್ನವರು ತನ್ನವರೆಂಬ ಗನ್ನಗದಕಿನ ಮಾತುಂಟೆ?**
**ಅನುಭಾವಿಗಳೆಂಬುವವರು ಅಲ್ಲಿಗಲ್ಲಿಗೆ**
**ತಮ್ಮ ಅನುಭಾವಂಗಳ ಬೀರುವರೆ?**
**(ಸಮಗ್ರ ವಚನ ಸಂಪುಟ 5, 594)**

ಅನುಭಾವಿಯು ಕಾಮಕ್ರೋಧಗಳಿಂದ ದೂರ, ದೇಹದ ಅಲಂಕಾರ, ಶೃಂಗಾರಗಳತ್ತ ಅವನ ಗಮನವಿರುವುದಿಲ್ಲ, ಅವನಲ್ಲಿ ತಾನು, ತನ್ನದು, ತನ್ನಿಂದ ಎನ್ನುವ ಅಹಂಕಾರ ಭಾವವು ಶೂನ್ಯ. ತಾನು ಅನುಭಾವಿ ಎಂದು ತೋರಿಸಿಕೊಳ್ಳುವ ಪ್ರಯತ್ನವನ್ನೂ ಆತ ಮಾಡುವುದಿಲ್ಲ. ಇವಿಷ್ಟೂ ಅನುಭಾವಿಯಲ್ಲಿ ಕಾಣದಿರುವ ಗುಣಗಳಾದರೆ ಅವನಲ್ಲಿ ಕಾಣುವುದೇನು ಎನ್ನುವುದನ್ನು ರಾಯಮ್ಮ ವಚನದ ಮುಂದಿನ ಭಾಗದಲ್ಲಿ ತಿಳಿಸುತ್ತಾಳೆ,

**ಅನುಭಾವಿಗಳ ಪರಿಯ ಹೇಳಿಹೆ ಕೇಳಿರಣ್ಣಾ;**
**ನೀರ ಮೇಲಣ ತೆಪ್ಪದಂತೆ, ಸಮುದ್ರದೊಳಗಣ ಬೆಂಗುಂಡಿನಂತೆ**
**ಇರಬಲ್ಲಡೆ ಅನುಭಾವಿಗಳೆಂಬೆನಯ್ಯಾ.**
**ವಚನಂಗಳ ಓದಿ ವಚನಂಗಳ ಕೇಳಿ**
**ಕಂಡ ಕಂಡ ಠಾವಿನಲ್ಲಿ ಬಂಡುಗೆಲೆವ ಜಗಭಂಡರ,**
**ಆತ್ಮತೇಜಕ್ಕೆ ತಿರುಗುವ ವೇಷಧಾರಿಗಳ ಕಂಡು**
**ಅನುಭಾವಿಗಳೆಂದಡೆ ಅಘೋರನರಕ ತಪ್ಪದು ಕಾಣಾ, ಅಮುಗೇಶ್ವರಾ**
**(ಸಮಗ್ರ ವಚನ ಸಂಪುಟ 5, 594)**

ನೀರ ಮೇಲಿದ್ದರೂ ಒಳಗೆ ನೀರನ್ನು ಬರಗೊಡದ ತೆಪ್ಪದಂತೆ ಸಮುದ್ರದ ನೀರರಾಶಿಯ ನಡುವಿದ್ದರೂ ಅದನ್ನು ಅಂಟಿಸಿಕೊಳ್ಳದಿರುವ ಬೆಂಡಿನಂತೆ ಭವದಲ್ಲಿ

ಇದ್ದೂ ಅದಕ್ಕೆ ಅಂಟಿಕೊಳ್ಳದೆ ಮುಕ್ತಿಪಥದತ್ತ ಉದ್ಯುಕ್ತರಾಗಿರುವವರು ಅನಭಾವಿಗಳು, ವಚನಗಳನ್ನು ಓದಿಕೊಂಡು ಕಂಡಕಂಡಲ್ಲಿ ಅವುಗಳನ್ನು ಓದುತ್ತ ಭಂಡರಂತೆ ಅಲೆಯುವ ಮಂದಿಯು ವೇಷಧಾರಿಗಳೇ ಹೊರತು ಅನುಭಾವಿಗಳಲ್ಲ ಎಂದು ರಾಯಮ್ಮ ನಿಷ್ಠುರವಾಗಿ ಹೇಳುತ್ತಾಳೆ.

ವೇಷಡಂಭಕರನ್ನು ಕುರಿತಾದ ಅವಳ ಕಟುವಾದ ವಿಮರ್ಶೆಯು ಮುಂದುವರೆಯುತ್ತದೆ:

**ಬೆಟ್ಟದ ನೆಲ್ಲಿಯಕಾಯ ಪಟ್ಟಣಕ್ಕೆ ಹೊತ್ತುಕೊಂಡು ಹೋಗಿ**
**ಹೊಟ್ಟೆಯ ಹೊರೆವವನಂತೆ,**
**ಉತ್ತಮ ತೇಜಿಯ ಹೆಸರ ಕೇಳಿ ಕಡಲೆಯ ತಿಂಬ ಗಾವಲಿಗನಂತೆ,**
**ಅತ್ತೆಯ ಹೆಸರ ಹೇಳಿ ಹೊಟ್ಟೆಯ ಹೊರೆವ ತೊತ್ತಿನಂತೆ,**
**ಆದ್ಯರ ವಚನಂಗಳ ಅಲ್ಲಿಗಲ್ಲಿಗೆ ಉಸುರಿ**
**ಅನ್ನ ಕೂಳಿಂಗೆ ಹರಿದಾಡುವ ಅಜ್ಞಾನಿಗಳ**
**ಅನುಭಾವಿಗಳೆಂಬೆನೆ? ಅಯ್ಯಾ, ವಿರಕ್ತರೆಂಬೆನೆ?**
**ವೇಷವ ಹೊತ್ತು ತಿರುಗುವ ಡೊಂಬನಂತೆ**
**ಬಲ್ಲೆ ಬಲ್ಲೆನೆಂಬ ಅಹಂಕಾರವ ನುಡಿವ ಭವಿಗಳ**
**ಅನುಭಾವಿಗಳೆಂಬೆನಲ್ಲದೆ ವಿರಕ್ತರೆಂಬೆನೆ?**
**ವಿಷಯವ ಮುಂದುಗೊಂಡು ತಿರುಗುವ ಅನುಭಾವಿಗಳನಂತು**
**ವಿರಕ್ತರೆಂಬೆನಯ್ಯಾ ಅಮುಗೇಶ್ವರಲಿಂಗವೆ?**
**(ಸಮಗ್ರ ವಚನ ಸಂಪುಟ 5, 669)**

ನಿಜವಾದ ಭಕ್ತರು ಯಾರು, ನಿಜವಾದ ವಿರಕ್ತರು ಯಾರು ಮತ್ತು ವೇಷಗಾರರು ಯಾರು ಎನ್ನುವುದನ್ನು ಅಮುಗೆ ರಾಯಮ್ಮನು ಈ ವಚನದಲ್ಲಿ ಸ್ಪಷ್ಟಗೊಳಿಸಿದ್ದಾಳೆ. ವಿಷಯಾಸಕ್ತಿಯನ್ನು ಹೊರದೂಡದೆ ಅನುಭಾವದ ನೆಲಯನ್ನು ಹೊಂದುವುದು ಅಸಾಧ್ಯ ಎನ್ನುವ ಸತ್ಯವು ಈ ವಚನದಲ್ಲಿ ಪ್ರಕಟವಾಗುತ್ತದೆ. ಅಂತೆಯೇ "ನಿಜವಾದ ಶರಣರು ಅಥವಾ ವಿರಕ್ತರು ಕಂಡು ಬರುವುದು ಕಷ್ಟ. ಹೊಟ್ಟೆಪಾಡಿಗಾಗಿ ವಚನಗಳನ್ನು ಅಲ್ಲಲ್ಲಿ ಹೇಳುತ್ತಾ ಅನ್ನಕ್ಕಾಗಿ ಆಟಕಟ್ಟುವ ಅಜ್ಞಾನಿಗಳನ್ನು ಅನುಭಾವಿಗಳೆನ್ನಲಾರೆ–ವಿರಕ್ತರೆನ್ನಲಾರೆ, ದೊಂಬನಂತೆ ವೇಷ ಹಾಕಿ ತಿರುಗುವ, ನನಗೆಲ್ಲಾ ತಿಳಿದಿದೆ ಎಂಬ ಅಹಂಕಾರದಿಂದ ಮೆರೆಯುವ ಭವಿಯನ್ನು ಬೇಕಾದರೆ ಅನುಭಾವಿ ಎನ್ನಬಲ್ಲೆ, ಆದರೆ ಅನುಭಾವಿಗಳಾಗಿದ್ದರೂ ಭೋಗಲಾಲಸೆಯನ್ನು

ಮುಂದಿಟ್ಟುಕೊಂಡು ತಿರುಗುವವರನ್ನು ಹೇಗೆ ವಿರಕ್ತರೆಂದು ಕರೆಯಲಿ ಎಂದು ಅವಳು ಪ್ರಶ್ನಿಸುತ್ತಾಳೆ. ಈಕೆಯ ದೃಷ್ಟಿಗೆ ಬಹುತೇಕ ನಿಷ್ಠೆಯಿಲ್ಲದ, ಹುಸಿ ಭಕ್ತರೇ ಕಾಣುತ್ತಾರೇನೋ ಎಂದೆನಿಸುತ್ತದೆ. ಅಥವಾ [ಈಕೆಯ ದೃಷ್ಟಿಯಲ್ಲಿ) ಅನುಭಾವಿಗಳು – ವಿರಕ್ತರಾಗಲು ಯಾವ ಅರ್ಹತೆಗಳಿಸಿಕೊಂಡಿರಬೇಕು ಎಂಬ ಮಾಪನ ತುಂಬಾ ಕಠಿಣತರಹದ್ದಿರಬಹುದು" ಎನ್ನುವ ಬಾ.ಹ ರಮಾಕುಮಾರಿ ಅವರ ಮಾತುಗಳು ಇಲ್ಲಿ ಗಮನಾರ್ಹವೆನಿಸುತ್ತದೆ, (ವಚನ ಚಿಂತನ ಮಾಲೆ– ಬಾ.ಹ. ರಮಾಕುಮಾರಿ, ಪುಟ ಸಂಖ್ಯೆ, 34, 36, 40, 41). ವೇಷಡಂಭಕರ ಮತ್ತಷ್ಟು ಅವಗುಣಗಳನ್ನು ರಾಯಮ್ಮ ಟೀಕಿಸುವ ಪರಿ ಇದು:

**ಒಡೆಯರ ಕಂಡಡೆ ಬಡಿವುದಯ್ಯಾ ಬಾಲವನು ಸುನಿ.**
**ಕೊಡುವ ಕೊಂಬುವರ ಕಂಡು ಅವರಡಿಗೆರಗುವರಯ್ಯಾ.**
**ಮೃಡನ ವೇಷವ ತೊಟ್ಟು,**
**ಕುರಿಗಳಂತೆ ತಿರುಗುವ ಜಡಜೀವಿಗಳ ಕಂಡಡೆ,**
**ಮೃಡನ ಶರಣರು ಮೋರೆಯನೆತ್ತಿ ನೋಡರು**
**ಕಾಣಾ ಅಮುಗೇಶ್ವರ**

ಒಡೆಯನನ್ನು ಕಂಡ ಕ್ಷಣ ನಾಯಿಯು ಆಸೆಯಿಂದ ತನ್ನ ಬಾಲವನ್ನು ಅಲ್ಲಾಡಿಸುತ್ತದೆ, ದಾನಿಗಳನ್ನು ಕಂಡು ದಾನಬೇಡುವ ಮಂದಿ ಕಾಲಿಗೆರಗುತ್ತಾರೆ. ಹೊರಗೆ ಆಡಂಬರವನ್ನು ತೋರುತ್ತ ಆಂತರ್ಯದಲ್ಲಿ ಕುರಿಗಳಂತೆ ನಡೆಯುವ ಜಡಜೀವಿಗಳು ಶರಣರ ನಂಬಿಕೆಯನ್ನು ಹೊಂದಲಾರರು ಎಂದು ಹೇಳುತ್ತ ಅಮುಗೆ ರಾಯಮ್ಮ ವೇಷ ಡಂಭಕರ ನಡೆಯನ್ನು ತಿರಸ್ಕರಿಸುತ್ತಾಳೆ. ವೇಷಧಾರಿಗಳ ಮತ್ತಷ್ಟು ಮುಖಗಳನ್ನು ರಾಯಮ್ಮ ಬಯಲುಮಾಡುವುದು ಹೀಗೆ:

**ಕಾಲಾಡಿಯಂತೆ ದೇಶದೇಶಕ್ಕೆ ತಿರುಗಲೇಕೆ?**
**ಪರಸಮಯದ ಜೈನನಂತೆ ನುಡಿಯಲೇತಕ್ಕೆ?**
**ಅರಿವುಳ್ಳವರ ಕಂಡು ಅಗಮ್ಯವ ನುಡಿಯಲೇತಕ್ಕೆ?**
**ಲಿಂಗವನಪ್ಪಿದ ನಿಜಮಹಿಮರ ಮಾತ ಕಲಿತು**
**ಮಂಡೆಯ ಬೋಳಿಸಿಕೊಂಡುಈಶನ ವೇಷವ ತೊಟ್ಟು,**
**ಗ್ರಾಸಕ್ಕೆ ತಿರುಗುವ ವೇಷಧಾರಿಗಳ ಲಿಂಗೈಕ್ಯರೆಂದಡೆ**
**ಅಘೋರನರಕ ತಪ್ಪದು ಕಾಣಾ, ಅಮುಗೇಶ್ವರಾ**

ದೇಶದೇಶವನು ಸುತ್ತುತ್ತ, ಪರಧರ್ಮಗಳ ತತ್ವಗಳನ್ನು ಹೇಳುತ್ತ, ಭಕ್ತರಿಂದ ಮಾತುಕಲಿತು, ಮಂಡೆಯನ್ನು ಬೋಳಿಸಿಕೊಂಡು ಪರಮೇಶ್ವರನಂತೆ ವೇಷವ ಧರಿಸಿ ಹೊಟ್ಟೆಯ ಪಾಡಿಗೆ ಹೆಣಗುವ ಮಂದಿಯನ್ನು ಲಿಂಗೈಕ್ಯರೆನ್ನಲಾದೀತೆ? ಹಾಗೆಂದಲ್ಲಿ ಅಘೋರನರಕವು ನಿಶ್ಚಿತ ಎನ್ನುವುದು ರಾಯಮ್ಮನ ವಿಚಾರವಾಗಿದೆ.

ಅರಿವು, ಆಚಾರ ಮತ್ತು ಸಮ್ಯಜ್ಞಾನದ ಮಹತ್ವವನ್ನು ಕುರಿತಂತೆ ರಾಯಮ್ಮ ಹೇಳುವುದಿದು:

**ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?**
**ಆಡಿನ ಮರಿ ಆನೆಯಾಗಬಲ್ಲುದೆ?**
**ಸೀಳುನಾಯಿ ಸಿಂಹದ ಮರಿಯಾಗಬಲ್ಲುದೆ?**
**ಅರಿವು ಆಚಾರ ಸಮ್ಯಜ್ಞಾನವರಿಯದೆ**
**ನಾಮವ ಹೊತ್ತುಕೊಂಡು ತಿರುಗುವ ಗಾವಿಲರ**
**ಮುಖವ ನೋಡಲಾಗದು ಅಮುಗೇಶ್ವರಾ**
**(ಸಮಗ್ರ ವಚನ ಸಂಪುಟ 5, 628)**

ಈ ವಚನವು ಕಾಗೆಯ ಮರಿ, ಆಡಿನ ಮರಿ ಮತ್ತು ಸೀಳುನಾಯಿಗಳನ್ನು ಭವಿಗಳಿಗೆ ಹೋಲಿಸುತ್ತಿದೆ, ಕೋಗಿಲೆ, ಆನೆ ಮತ್ತು ಸಿಂಹದ ಮರಿಯನ್ನು ಭಕ್ತರಿಗೆ ಹೋಲಿಸುತ್ತಿದೆ. ಅರಿವು, ಆಚಾರ ಮತ್ತು ಸಮ್ಯಜ್ಞಾನಗಳನ್ನು ಪರಮಾತ್ಮನೊಂದಿಗೆ ಸಮೀಕರಿಸುತ್ತಿದೆ. ಶಿವಸಾಕ್ಷಾತ್ಕಾರವನ್ನು ಪಡೆಯಲು ಆಚಾರ ಮತ್ತು ಪರಶಿವನೇ ಸಕಲ ಜೀವಾತ್ಮರಿಗೆ ಒಡೆಯ ಎನ್ನುವ ಪರಿಪೂರ್ಣವಾದ ಜ್ಞಾನದ ಸಾಕ್ಷಾತ್ಕಾರವಾಗಬೇಕು. ಇದರ ಹೊರತಾಗಿ ಯಾವ ಸಾಧನವೂ ಪರಾತ್ಪರದ ಬೆಳಕನ್ನು ಸಾಕಾರಗೊಳಿಸುವುದು ಸಾಧ್ಯವಾಗದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ 'ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು' ಎನ್ನುವ ಮಾತು.ರಾಯಮ್ಮ ಇಲ್ಲಿ ವೀರಶೈವರಲ್ಲದ ಇತರರನ್ನು ವಿಡಂಬಿಸುತ್ತಿದ್ದಾಳೆ. ಸಮಕಾಲೀನ ಸಮಾಜದಲ್ಲಿ ಮನೆಮಾಡಿದ್ದ ಧರ್ಮಗಳ ಮೇಲಾಟವನ್ನೂ ಈ ಮಾತು ಸೂಚಿಸುತ್ತಿದೆ. ಜೊತೆಗೆ ಡಾಂಭಿಕ ಭಕ್ತಿಯ ತಿರಸ್ಕಾರವೂ ಇಲ್ಲಿದೆ.

ಅಮುಗೆ ರಾಯಮ್ಮನ ವಚನಗಳಲ್ಲಿ ಮತ್ತೆ ಮತ್ತೆ ಪ್ರಕಟವಾಗುವ ಅಂಶವೆಂದರೆ ನಿಜವಾದ ಭಕ್ತಿ ಮತ್ತು ಸದ್ಭಕ್ತನ ಗುಣಗಳು. ಈ ನೆಲೆಯಲ್ಲಿನ ಒಂದು ವಚನ ಕೆಳಗಿನಂತಿದೆ:

**ಆಕಾಶಕ್ಕೆ ಹಾರುವಂಗೆ ದೋಟಿಯ ಕೋಲ ಹಂಗೇತಕಯ್ಯಾ?**

**ಭೂಮಿಯ ಸೋಂಕದೆ ನಡೆವವಂಗೆ ಭೂಮಿಯ ಹಂಗೇತಕಯ್ಯಾ?**
**ತನ್ನ ತಾನರಿಯದವಂಗೆ ಬಿನ್ನಾಣದ ಮಾತೇತಕಯ್ಯಾ?**
**ಅಗಮ್ಯವಾಗಿ ಚರಿಸುವಂಗೆ ಅಂಗನೆಯರ ಹಂಗೇತಕಯ್ಯಾ?**
**ಅಮುಗೇಶ್ವರಲಿಂಗವನರಿಯದ ಶರಣಂಗೆ**
**ಕಾವಿ ಕಾಷಾಂಬರವ ಹೊದ್ದು ತಿರುಗುವ ಕರ್ಮಿಗಳ ಹಂಗೇತಕಯ್ಯಾ?**
**(ಸಮಗ್ರ ವಚನ ಸಂಪುಟ 5, 602)**

ಆಕಾಶದಲ್ಲಿ ಹಾರುವವನಿಗೆ ದೋಟಿಯ ಕೋಲಿನ ಹಂಗಿಲ್ಲ, ಅರ್ಥಾತ್, ನಿಜವಾದ ಜ್ಞಾನವನ್ನು ಹೊಂದಿ ಪರಾತ್ಪರದತ್ತ ನಡೆವವನಿಗೆ ಇನ್ನೊಬ್ಬರ ಅವಶ್ಯಕತೆಯು ಇರುವುದಿಲ್ಲ; ಭೂಮಿಗೆ ಅಂಟದೆಯೇ ನಡೆವವನಿಗೆ ಭೂಮಿಯ ಹಂಗಿಲ್ಲ, ಅರ್ಥಾತ್, ಆಸೆ, ಅರಿಷಡ್ವರ್ಗಗಳನ್ನು ಜಯಿಸಿದವನಿಗೆ ಲೌಕಿಕದ ಹಂಗು ಇರುವುದಿಲ್ಲ; ಹಾಗೆಯೇ ಆತ್ಮ–ಪರಮಾತ್ಮಗಳು ಪರಸ್ಪರ ಒಂದರಲ್ಲಿ ಮತ್ತೊಂದು ಲೀನವಾದ ಬಳಿಕ, ಅಂಗವು ಅಗಮ್ಯವಾದ ಬಳಿಕ ಅಂಗನೆಯರ ಹಂಗೆಲ್ಲಿಯದು? ಅಂತೆಯೇ ಪರಾತ್ಪರನಿಗೆ ಶರಣಾದ ಬಳಿಕ ಕಾವಿ, ಕಾಷಾಂಬರ ಮೊದಲಾದವನ್ನು ಧರಿಸಿ ತಿರುಗುವ ಹಂಗೇಕೆ ಎನ್ನುವುದು ರಾಯಮ್ಮನ ಪ್ರಶ್ನೆಯಾಗಿದೆ. ತೋರಿಕೆ ಡಾಂಬಿಕತೆಗಳ ಮೇಲೆ ಇಲ್ಲಿಯೂ ರಾಯಮ್ಮನ ಪ್ರಹಾರವಾಗಿರುವುದನ್ನು ಗಮನಿಸಬಹುದಾಗಿದೆ.

ಅಮುಗೆ ರಾಯಮ್ಮನ ವಚನಗಳಲ್ಲಿ ಜ್ಞಾನದ ಸ್ವರೂಪವನ್ನು ಕುರಿತಂತೆ ನಿರ್ದಿಷ್ಟವಾದ ವಿಚಾರಗಳಿವೆ. ಆತ್ಮ ಮತ್ತು ಪರಮಾತ್ಮ – ಇವುಗಳ ಸಾಂಗತ್ಯದಲ್ಲಿ ಜ್ಞಾನದ ಪಾತ್ರವನ್ನು ರಾಯಮ್ಮನ ವಚನಗಳು ವಿಶದಪಡಿಸುತ್ತವೆ. ಹೋಲಿಕೆ, ದೃಷ್ಟಾಂತಗಳ ಮೂಲಕ ಜ್ಞಾನದ ಸ್ವರೂಪವನ್ನು ಅವಳು ಪರಿಣಾಮಕಾರಿಯಾಗಿ ಹಿಡಿದಿಡುತ್ತಾಳೆ. ಇಂತಹ ಒಂದು ವಚನ ಕೆಳಗಿನಂತಿದೆ:

**ಕಾದ ಹಾಲ ನೊಣ ಮುಟ್ಟಬಲ್ಲದೆ?**
**ಕಿಚ್ಚಿನೊಳಗಣ ಗುಂಡ ಬೆಕ್ಕು ಮುಟ್ಟಬಲ್ಲುದೆ?**
**ಮರಜವಣಿಯ ಕಡ್ಡಿ ಕಯ್ಯಲಿದ್ದವಂಗೆ ಸರ್ಪ ಕಡಿಯಬಲ್ಲುದೆ?**
**ಈ ತ್ರಿವಿಧವನರಿದವಂಗೆ ಹಿಂದೆ ಶಂಕೆಯಿಲ್ಲ, ಮುಂದೆ ಭೀತಿಯಿಲ್ಲ.**
**ಕಳಂಕು ಇಲ್ಲದೆ ಅಮುಗೇಶ್ವರಲಿಂಗವು ಅಪ್ಪಿಕೊಂಡಿತ್ತು**
**(ಸಮಗ್ರ ವಚನ ಸಂಪುಟ 5, 629)**

ಇಲ್ಲಿ ಹೇಳಿರುವ ಹಿಂದೆ ಶಂಕೆಯಿರದ ಮತ್ತು ಮುಂದೆ ಭೀತಿಯಿರದ ಸ್ಥಿತಿಯೇ ಜ್ಞಾನದ ಸ್ಥಿತಿ. ಹೀಗೆ ಜ್ಞಾನಿಯಾದವನನ್ನು ಯಾವುದು ತಾನೇ ಬಾಧಿಸಲು ಸಾಧ್ಯ? ಕಾದ ಹಾಲು, ಕಿಚ್ಚಿನೊಳಗಣ ಗುಮಡು ಮತ್ತು ಮರುಜವಣಿಯ ಕಡ್ಡಿಯ

ಹೋಲಿಕೆಗಳ ಮೂಲಕ ಜ್ಞಾನದಿಂದ ದಕ್ಕುವ ವಿಶಿಷ್ಟವಾದ ಸ್ಥಿತಿಯನ್ನು ರಾಯಮ್ಮ ನಿರೂಪಿಸುತ್ತಿದ್ದಾಳೆ. ಜ್ಞಾನದ ಬೆಳಕು ಪ್ರಾಪ್ತವಾದ ಬಳಿಕ ಪರಮಾತ್ಮನ ಸಾಕಾರದ ಮಹಾದ್ವಾರ ತೆರೆದಂತೆಯೇ ಸರಿ. ಜ್ಞಾನದ ಮಹತ್ವವನ್ನು, ಅದರ ಪರಿಯನ್ನು ರಾಯಮ್ಮ ವರ್ಣಿಸುವುದು ಹೀಗೆ:

**ಜ್ಞಾನವೆಂಬುದು ಬೀದಿಯ ಪಸರವೆ?**
**ಬೊಕ್ಕಣಕ್ಕೆ ತುಂಬುವ ಹುರುಳಿಯೆ?**
**ಚೀಲದೊಳಗಣ ಜೀರಿಗೆಯೆ?**
**ಗಾಣದೊಳಗಣ ಹಿಂಡಿಯೆ?**
**ಜ್ಞಾನವೆಂಬುದು ಎಲ್ಲರೊಡನೆ ಬೀರದಿರಬೇಕು**
**ಗೆಲ್ಲ ಸೋಲಿನ ಮಾತು ಬಂದಡೆ ಗೆಲ್ಲವ ನುಡಿಯದಿರಬೇಕು**
**ಹೀಂಗಿರಬಲ್ಲಡೆ ವಿರಕ್ತನೆಂಬೆನು, ಈಶ್ವರನೆಂಬೆನು**
**ಅಮುಗೇಶ್ವರಲಿಂಗವೆಂಬೆನು**
**(ಸಮಗ್ರ ವಚನ ಸಂಪುಟ 5, 645)**

ಜ್ಞಾನವು ಎಲ್ಲರಿಗೂ ಸುಲಭವಾಗಿ ದಕ್ಕುವ ಸಾಧನವಲ್ಲ. ಸದಾಕಾಲವೂ ಪರಾತ್ಪರದ ಆ ಬೆಳಕನ್ನು ಮನದಲ್ಲಿ ತುಂಬಿಕೊಂಡು ಅದನ್ನೇ ಚಿಂತಿಸಿ ಧ್ಯಾನಿಸಿ ಆತ್ಮನಲ್ಲಿ ಆ ಬೆಳಕನ್ನು ಕಾಣಬೇಕು. ತ್ರಿವಿಧವನ್ನು ಉಳಿದು ಭವದ ಬಂಧವನ್ನು ಕಳೆದು ಪರಾತ್ಪರ ಜ್ಞಾನವನ್ನು ಸಾಧಿಸಬೇಕು. ಹೀಗೆ ಜ್ಞಾನವು ಸಿದ್ಧಿಯಾದವನೇ ವಿರಕ್ತ, ಅವನೇ ಶಿವಸ್ವರೂಪಿ. ಸತತವಾದ ಸಾಧನೆ ಮತ್ತು ಜ್ಞಾನಮಾರ್ಗದಿಂದ ಮಾತ್ರ ಶಿವಸಾಕ್ಷಾತ್ಕಾರ ಸಾಧ್ಯವೆನ್ನುವುದು ರಾಯಮ್ಮನ ಮಾತುಗಳ ಇಂಗಿತವಾಗಿದೆ. ಅಜ್ಞಾನಿಗಳನ್ನು ಕುರಿತಂತೆ ರಾಯಮ್ಮನ ಪ್ರತಿಕ್ರಿಯೆಯ ತೀಕ್ಷ್ಣತೆ ಇಷ್ಟಕ್ಕೇ ನಿಲ್ಲುವುದಿಲ್ಲ. ಕೆಳಗಿನ ವಚನವು ಅಜ್ಞಾನಿಗಳ ನಿಸ್ಸಾರತೆಯನ್ನು ಬಯಲುಮಾಡುತ್ತದೆ:
ಉತ್ತಮ ತೇಜಿಯಮರಿಗೆ ಸುಪ್ಪತ್ತಿಗೆಯಲ್ಲದೆ

**ಕತ್ತೆಯ ಮರಿಗೆ ಸುಪ್ಪತ್ತಿಗೆಯ ಹಾಸುವರೆ?**
**ಅಜ್ಞಾನಿಗಳ ಹೃದಯದಲ್ಲಿ ಮರಮಾಮೃತವ ಸುರಿದಡೆ**
**ಪರರ ಕಾಡಿ ಬೇಡದೆ ಮಾಣ್ಬರೆ?**
**ಕುಂಜರನ ವೇಷವ ತೊಟ್ಟು ಹಂದಿಯಂತೆ ತಿರುಗುವ**
**ಅಜ್ಞಾನಿಗಳನೇನೆಂಬೆ ಅಮುಗೇಶ್ವರಾ?**

ಉತ್ತಮ ಜಾತಿಯ ಕುದುರೆಯ ಮರಿಗೆ ಸುಪ್ಪತ್ತಿಗೆಯನ್ನು ಹಾಸಿಯಾರು, ಕತ್ತೆಯ ಮರಿಗೆ ಸುಪ್ಪತಿಗೆಯನ್ನು ಯಾರೂ ಹಾಸುವುದಿಲ್ಲ. ಹಾಗೆಯೇ ಅಜ್ಞಾನಿಗಳಿಗೆ ಜ್ಞಾನ, ತಿಳುವಳಿಕೆಯ ಪರಮಾಮೃತವನ್ನು ಊಡಿದರೂ ಅವರು ತಮಗಂಟಿದ ಬುದ್ಧಿಯಾದ ಬೇಡುವಿಕೆಯನ್ನು ಬಿಡುವುದಿಲ್ಲ. ಕಂಡಿದ್ದನ್ನು ತಿನ್ನುತ್ತ ತಿರುಗುವ ಹಂದಿಯು ಹೊರಗೆ ಆನೆಯ ವೇಷವನ್ನು ಧರಿಸಿದಂತೆ ಅಜ್ಞಾನಿಗಳ ನಡವಳಿಕೆ ಎನ್ನುವುದು ಅಮುಗೆ ರಾಯಮ್ಮನ ವಚನದ ಇಂಗಿತವಾಗಿದೆ.

ವಚನಗಳಲ್ಲಿ ವೀರಶೈವ ಸಿದ್ಧಾಂತ ಮತ್ತು ತತ್ವಗಳ ಹೇಳುವಿಕೆ, ಸಮಾಜ ವಿಮರ್ಶೆ, ಡಾಂಭಿತೆಯ ಮತ್ತು ಆಷಾಢಭೂತಿತನದ ವಿಡಂಬನೆ, ಕಾಯಕ ಮತ್ತು ದಾಸೋಹಗಳ ಪುರಸ್ಕಾರ, ಭಕ್ತ–ಭಕ್ತಿ, ಜ್ಞಾನ, ವೇದಾಗಮಗಳು ಮತ್ತು ಕರ್ಮಠತೆಯ ತಿರಸ್ಕಾರ – ಇವೆಲ್ಲವೂ ರಾಯಮ್ಮನ ವಚನಗಳಲ್ಲಿ ತೀಕ್ಷ್ಣವಾದ ವಿಮರ್ಶೆಗೆ ಒಳಗಾಗಿವೆ. ಶರಣಕ್ರಾಂತಿಯ ಬೆಳಕಿನಿಂದ ತನಗೆ ದತ್ತವಾದ ವೈಚಾರಿಕತೆಯ ಪ್ರಭೆಯಲ್ಲಿ ಮುಂದೆಸಾಗಿ ಅಭಿವ್ಯಕ್ತಿಯ ಅರ್ಥವಂತಿಕೆ ಮತ್ತು ಘನತೆಗಳನ್ನು ಅಮುಗೆ ರಾಯಮ್ಮ ಸಾಧಿಸಿದ್ದಾಳೆ. ರಾಯಮ್ಮನ ವೈಚಾರಿಕತೆಯ ಮತ್ತೊಂದು ಮುಖ್ಯವಾದ ಆಯಾಮ ಪ್ರಕಟಗೊಳ್ಳುವುದು ಸಾಂಪ್ರದಾಯಿಕವಾದ ಹಾಗೂ ರೂಢಿಗತವಾದ ಭಾವನೆಗಳು, ಸಂವೇದನೆಗಳನ್ನು ಮೀರಿ ಅವಳು ತನ್ನ ಪ್ರತಿಕ್ರಿಯೆಗಳನ್ನು ಅಭಿವ್ಯಕ್ತಿಸಿದಾಗ. ಇಂತಹ ಎಡೆಗಳಲ್ಲಿ ರಾಯಮ್ಮ ಶರಣಕ್ರಾಂತಿಯ ಮೌಲಿಕತೆಯನ್ನು ಹೆಚ್ಚಿಸುವಂತೆ ಪ್ರಕಟವಾಗುತ್ತಾಳೆ, ಸಮಕಾಲೀನ ನೆಲೆಗಳಲ್ಲಿ ಶರಣಕ್ರಾಂತಿಯ ಮತ್ತು ವಚನಸಾಹಿತ್ಯದ ಪ್ರಸ್ತುತತೆಯನ್ನು ಬಿಂಬಿಸುವಂತೆ ತೋರುತ್ತಾಳೆ.

**ಪರಾಮರ್ಶನ ಗ್ರಂಥಗಳು :**

1. ಅರಿವು ಮಿರಿದ ಘನ : ಪ್ರೊ. ಎಚ್. ಲಿಂಗಪ್ಪ, ರಶ್ಮಿ ಪ್ರಕಾಶನ, ಚಿತ್ರದುರ್ಗ, 2017
2. ಕನ್ನಡದ ವಚನಕಾರ್ತಿಯರು : ಡಾ. ಎ. ಗಾಯತ್ರಿ, ಕೀರ್ತನ್ ಗ್ರಾಫಿಕ್ಸ್, ಮೈಸೂರು, 2014
3. ವಚನ ಧರ್ಮ ಸಾರ : ಎಂ. ಆರ್. ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, 2009
4. ವಚನ ಸಂಸ್ಕೃತಿ – ಸಾಹಿತ್ಯ ಸಂಗಾತಿ : ಪ್ರೊ. ಎಸ್. ಜಿ. ಸಿದ್ಧರಾಮಯ್ಯ, ಸಪ್ನ ಬುಕ್ ಹೌಸ್, 2013

5. ಚಿಂತನ ಲೇಖನಗಳು : ಡಾ. ಬಸವರಾಜ ಸಬರದ, ಕನ್ನಡ ಸಾಹಿತ್ಯ ಪರಿಷತ್ತು, 2017
6. ಶರಣ ಕ್ರಾಂತಿ – ವಿಭಿನ್ನ ಪ್ರತಿಕ್ರಿಯೆಗಳು : ಸಂ. ಬಸವರಾಜ ಸಾದರ, ಲಡಾಯಿ ಪ್ರಕಾಶನ, ಗದಗ, 2020
7. ವಚನ ಪ್ರತಿಭೆ ಮತ್ತು ಬೌದ್ಧಿಕ ಸ್ವಾತಂತ್ರ್ಯ : ಡಾ. ಎಸ್. ಎಂ. ಗಂಗಾಧರಯ್ಯ, ಪವಿತ್ರ ಸೆಲ್ಯೂಶನ್ಸ್, ಬೆಂಗಳೂರು, 2018
8. ಶಿವಶರಣೆಯರ ವಚನ ಸಂಪುಟ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗೂರು, 2001
9. ವಚನ ಚಳವಳಿ: ಬಸವರಾಜ ಸಬರದ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ, 1992
10. ವಚನ ಸಾಹಿತ್ಯ – ವೈಚಾರಿಕ ಅಧ್ಯಯನ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಸಾರಾಂಗ, ಕವಿವಿ, ಧಾರವಾಡ, 2004.

**ಡಾ. ಪಿ. ನಾಗರಾಜ**
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

# ಕವಿತಾ ರೈ ರವರ 'ಒಲೆ' ಕವನ – ಸ್ತ್ರೀಪರ ನೋಟ

¤ ನಾಗೇಂದ್ರ ಪ್ರಸಾದ್ ಎ.ಎಂ.

20ನೆಯ ಶತಮಾನದ 50ರ ದಶಕದ ನಂತರ ಅಮೆರಿಕಾ ಹಾಗೂ ಫ್ರಾನ್ಸ್ ದೇಶಗಳು ಸೇರಿದಂತೆ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಲಿತಕ್ಕೆ ಬಂದ 'ಮಹಿಳಾ ಸುಧಾರಣಾ ಚಳುವಳಿ'ಯ ಒಂದು ಸಾಹಿತ್ಯಿಕ ಆಯಾಮ ಸ್ತ್ರೀವಾದಿ ಚಿಂತನೆ. ಇದಕ್ಕೆ ಹಲವು ದಶಕಗಳ ಇತಿಹಾಸವಿದ್ದರೂ ಸಹ ಮಹಿಳಾಪರ ನೆಲೆಯ ಈ ಸಾಹಿತ್ಯಿಕ ಅಭಿವ್ಯಕ್ತಿಯ ಸೈದ್ಧಾಂತಿಕ ಹಾಗೂ ತಾತ್ತ್ವಿಕ ನೆಲೆಗಳನ್ನು ಇಂದಿಗೂ ಏಕರೂಪಿ ನೆಲೆಯಲ್ಲಿ ಗುರುತಿಸಲಾಗುವುದಿಲ್ಲ. ಇದು ಕಾಲ, ಪ್ರದೇಶ, ಸಾಮಾಜಿಕ, ಹಾಗೂ ಸಾಂಸ್ಕೃತಿಕ ಸ್ಥಿತಿಗತಿ ಬದಲಾದಂತೆ ಬದಲಾಗುತ್ತದೆ. ಆದುದರಿಂದ ಸ್ತ್ರೀವಾದವನ್ನು 'ಯಾವ ಒಂದು ಸಿದ್ಧಾಂತಕ್ಕೂ ಸೀಮಿತವಾಗದ, ಮಹಿಳಾ ಬದುಕಿನ ಎಲ್ಲಾ ಆಯಾನಗಳನ್ನು ಪರಿಶೀಲಿಸುವ ಪ್ರಶ್ನೆ'ಯೆಂದು ಪರಿಗಣಿಸಲಾಗುತ್ತದೆ.

ಜಾಗತಿಕವಾಗಿ ಹಾಗೂ ಅಖಿಲ ಭಾರತ ವ್ಯಾಪ್ತಿಯಲ್ಲಿ ಸ್ತ್ರೀವಾದಿ ಚಿಂತನೆ ವ್ಯಾಪಕವಾಗಿ ಪ್ರಚಾರಕ್ಕೆ ಬಂದಂತೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ 20ನೆಯ ಶತಮಾನದ 80ರ ದಶಕದಿಂದ ಸ್ತ್ರೀವಾದ ಮತ್ತು ಸ್ತ್ರೀನಿಷ್ಠ ಚಿಂತನೆ ಬೆಳೆದಿದೆ. "ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಒಂದು ರಾಜಕೀಯ ಸಿದ್ಧಾಂತ. ಅದು ಸ್ತ್ರೀ–ಪುರುಷರ ನಡುವಿನ ಲಿಂಗಾಧರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ಮುಂತಾದ ಬದುಕಿನ ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೇ ಅದರ ಮುಖ್ಯವಾದ ಕಾರ್ಯವಿಧಾನವಾಗಿದೆ."[1] ಈ ಕಾರ್ಯದ ಒಂದು ಆಯಾಮವಾಗಿ ಸಾಹಿತ್ಯ ರಚನೆಯಾಗುತ್ತದೆ. ಇದರ ಭಾಷಿಕ ನೆಲೆಯಲ್ಲಿ ಮಹಿಳೆಯರು ಎಲ್ಲಿ ದಮನಕ್ಕೆ ಒಳಗಾಗಿದ್ದಾರೆ? ಅದರ ಸ್ವರೂಪವೇನು?

ಅದರ ಪರಿಹಾರದ ಕ್ರಮಗಳೇನು? ಎಂಬುದನ್ನು ನಮ್ಮ ಸಂಸ್ಕೃತಿಯ ಅಂಗಗಳಿಂದ, ಮಹಿಳೆಯರ ಬದುಕಿನಿಂದ ಹುಡುಕಿ, ಅದನ್ನು ಸಮಾಜದ ಅರಿವಿಗೆ ತರುವ ಪ್ರಯತ್ನವನ್ನು ಕನ್ನಡ ಸಾಹಿತ್ಯ ಲೋಕ ಕೈಗೊಂಡಿದೆ.

ಕಳೆದ ಶತಮಾನದ ಕೊನೆಯ ದಶಕಗಳ ಕಾಲಘಟ್ಟದಲ್ಲಿ ಜಾಗತಿಕ ಹಾಗೂ ರಾಷ್ಟ್ರೀಯ ನೆಲೆಯಲ್ಲಿ ಉಂಟಾದ ಬೆಳವಣಿಗೆಗಳಿಂದಾಗಿ ಸೃಷ್ಟಿಯಾದ ರಾಜಕೀಯ, ಆರ್ಥಿಕ, ಸಾಮಾಜಿಕ ಒತ್ತಡಗಳು ಪಿತೃಪ್ರಧಾನ ಸಮಾಜದಿಂದ ದಮನಕ್ಕೆ ಒಳಗಾಗಿದ್ದ ಮಹಿಳೆಯರಲ್ಲಿ ಸ್ವ ಅರಿವನ್ನು ಮೂಡಿಸಿತು. ಈ ಅರಿವು ಸಾಂಸ್ಕೃತಿಕ, ಸಾಮಾಜಿಕ ನೆಲೆಯಲ್ಲಿ ಪ್ರಕಟವಾದಂತೆ ಸಾಹಿತ್ಯಿಕ ನೆಲೆಯಲ್ಲೂ ಪ್ರಕಟವಾಗತೊಡಗಿತು. ಪರಿಣಾಮವಾಗಿ ಮಹಿಳೆಯರು ಹೆಣ್ಣು ಬದುಕಿನ ತಲ್ಲಣಗಳನ್ನು, ಸಂದಿಗ್ಧತೆಗಳನ್ನು ಸಾಹಿತ್ಯದ ಮುಖೇನ ವ್ಯಕ್ತಪಡಿಸಲು ಪ್ರಾರಂಭಿಸಿದರು. ಮಹಿಳೆಯರು ಬರೆದದ್ದು, ಅವರು ಅನುಭವಿಸಿದ ಹಾಗೂ ಅವರು ಕಂಡ ಹೆಣ್ಣು ಬದುಕಿನ ನೇರ ಅಭಿವ್ಯಕ್ತಿಯಾಗಿತ್ತು. ಮಹಿಳೆಯರು ಅನುಭವಿಸಿದ, ಅನುಭವಿಸುತ್ತಿರುವ ನೋವುಗಳು ಹಾಗೂ ಅದರ ಪರಿಹಾರದ ಕನಸುಗಳನ್ನು ಕೃತಿಗಳಲ್ಲಿ ವ್ಯಕ್ತಪಡಿಸತೊಡಗಿದರು. ಮಹಿಳೆಯರಿಂದ ರಚಿತವಾದ ಕೃತಿಗಳು ಹೆಣ್ಣು ಬದುಕಿನ ವಾಸ್ತವ ಸ್ಥಿತಿಗತಿಗೆ ಹತ್ತಿರವಾಗಿ ರಚನೆಗೊಂಡವು.

ಮಹಿಳೆಯರು ತಮ್ಮ ಸಾಹಿತ್ಯದಲ್ಲಿ ಹೆಣ್ಣಿನ ನಿಜದ ಬದುಕನ್ನು ಆಧರಿಸಿದ ಕಾಲ್ಪನಿಕ ಜಗತ್ತನ್ನು ಸೃಷ್ಟಿಸಿದರು. ಮಹಿಳೆಯರ ಬದುಕಿನ ಕನಸುಗಳನ್ನು ಕೃತಿಗಳಲ್ಲಿ ತಾವು ಸೃಷ್ಟಿಸಿರುವ ಪಾತ್ರಗಳ ಮೂಲಕ ಚಿತ್ರಿಸುತ್ತಾ ಆಗಬೇಕಾಗಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಯ ಆಶಯವನ್ನು ವ್ಯಕ್ತಪಡಿಸಿದರು. ಮಹಿಳೆಯರು ಹೆಣ್ಣು ಬದುಕಿನ ಅನುಭವಗಳನ್ನು ಸಮರ್ಥವಾಗಿ ವ್ಯಕ್ತಪಡಿಸಲು ಪ್ರಾರಂಭದಲ್ಲಿ ಕಥಾ ಸಾಹಿತ್ಯವನ್ನು ಹೆಚ್ಚು ಬಳಸಿದರು. ನಂತರದ ದಿನಗಳಲ್ಲಿ ಮಹಿಳೆಯರು ತಮ್ಮ ಬದುಕಿನ ಅಭಿವ್ಯಕ್ತಿಯನ್ನಾಗಿ ಬಳಸಿದ "ಕಾವ್ಯ ಈ ದೃಷ್ಟಿಯಿಂದ ಹೆಚ್ಚು ಸವಾಲೆಸೆಯುವಂತಹ ಅಮೂರ್ತ ಮಾಧ್ಯಮವಾಗಿದೆ ಎಂಬ ಭಾವನೆಯಿದೆ. ಇಲ್ಲಿಯೂ ಸ್ವಹಿತಾಸಕ್ತಿಯ ಒತ್ತಡಗಳಿಂದ ಹುಟ್ಟುವ ಪರಿಮಿತಿ ಇದೆ. ಈ ಸಂದರ್ಭದಲ್ಲಿ ಕೆ.ವಿ.ನಾರಾಯಣ ಅವರ ವಿಚಾರವೊಂದು ಗಮನಿಸಬಹುದು. ಆಧುನಿಕ ಕನ್ನಡ ಕಾವ್ಯಕ್ಕೆ ಇತ್ತೀಚೆಗೆ ಮಹಿಳೆಯರ ಪ್ರವೇಶ ಹೆಚ್ಚಾಗಿರುವುದಕ್ಕೆ ಅವರು ವಿಶ್ಲೇಷಣೆ ನೀಡುತ್ತಾರೆ. ಪ್ರಚಲಿತ ಕೌಟುಂಬಿಕ ಚೌಕಟ್ಟನ್ನು ಒಪ್ಪಿ ಬರೆದವರು ಕಥೆ, ಕಾದಂಬರಿಗಳನ್ನು ರಚಿಸುತ್ತಿದ್ದಾರೆ. ವೈಯಕ್ತಿಕತೆಯ ಅರಿವು ತೀವ್ರವಾದವರು ಕಾವ್ಯ ರಚಿಸುತ್ತಿರುವವರು ಎಂಬುದು ಅವರು ನೀಡುವ ಕಾರಣ."[2] ಮಹಿಳೆಯರಲ್ಲಿ ತಮ್ಮ ಸಾಮಾಜಿಕ ಅಸ್ತಿತ್ವವನ್ನು

ಗುರುತಿಸಿಕೊಳ್ಳುವ ಅವಶ್ಯಕತೆಯ ಅರಿವು ಮೂಡಿದುದರಿಂದ ಅದು ಪ್ರಾರಂಭದಲ್ಲಿ ಕಥಾ ಸಾಹಿತ್ಯದಲ್ಲಿ ನಂತರ ಕಾವ್ಯದ ನೆಲೆಗಳಲ್ಲಿ ವ್ಯಾಪಕವಾಗಿ ಕಾಣಿಸತೊಡಗಿತು. ಮಹಿಳೆಯರ ಬದುಕಿನ ಸಂಕೋಲೆ ಹಾಗೂ ಬಿಡುಗಡೆಯ ನೆಲೆಗಳಲ್ಲಿ ಕುಟುಂಬ ವ್ಯವಸ್ಥೆ ಹಾಗೂ ಅದನ್ನು ಪೋಷಿಸಿರುವ ಸಾಮಾಜಿಕ ವ್ಯವಸ್ಥೆ ಮತ್ತು ಇದನ್ನು ಸೃಷ್ಟಿಸಿರುವ ಪಿತೃಸತ್ತೆಯ ಲಿಂಗರಾಜಕಾರಣವು ಕಥೆ ಹಾಗೂ ಕಾವ್ಯದ ನೆಲೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾಗತೊಡಗಿತು.

ಈ ಪರಂಪರೆಯನ್ನು ಮುಂದುವರೆಸುತ್ತಿರುವ ಮಹಿಳಾ ಸಾಹಿತಿಗಳಲ್ಲಿ ಕವಿತಾ ರೈ ರವರನ್ನು ಗುರುತಿಸಲಾಗುತ್ತದೆ. ಕಾವ್ಯ ಮೀಮಾಂಸೆ, ವಿಮರ್ಶೆ, ನಾಟಕ ಹಾಗೂ ಕಾವ್ಯರಚನೆಯಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿರುವ ಕವಿತಾ ರೈ ರವರು ಸ್ತ್ರೀಪರ ಚಿಂತನೆಗಳನ್ನು ಮಹಿಳೆಯರ ವಾಸ್ತವ ಬದುಕಿನ ವಸ್ತುರೂಪಕಗಳೊಂದಿಗೆ ಅತ್ಯಂತ ಕಲಾತ್ಮಕವಾಗಿ ಹಾಗೂ ಭಾವ ತೀವ್ರವಾಗಿ ಚಿತ್ರಿಸುತ್ತಾರೆ. ಇದಕ್ಕೆ ಇವರ 'ಹಕ್ಕಿ ಹರಿವ ನೀರು' ಕವನ ಸಂಕಲನದ 'ಒಲೆ' ಕವನವು ಸಮರ್ಥ ಉದಾಹರಣೆಯಾಗಿದೆ. ಕವಿತಾ ರೈ ರವರು ಕ್ರಿಯಾಶೀಲ ಮನೋಭಾವ, ಸದಾ ಸೃಜನಶೀಲ ನೆಲೆಯಲ್ಲಿಯೇ ಚಿಂತಿಸುವ, ಸದಾ ಹೊಸ ಅನುಭವಕ್ಕಾಗಿ ತುಡಿಯುವ ಸಾಹಿತಿ. ಮಹಿಳೆಯರ ಬದುಕಿನ ನೋವು, ಮನದ ಬಿಸುಪು, ಬೇಗುದಿ, ಹಿಗ್ಗು, ವಿಷಾದ, ಸಂಕಟ, ಬೆರಗುಗಳೆಲ್ಲಾ ರಮ್ಯವಾದ ಪ್ರತಿಮಾ ಕಲ್ಪನೆಯೊಂದಿಗೆ ಮಿಳಿತವಾಗಿ ಇವರ ಕವನದಲ್ಲಿ ಅರಳಿಕೊಳ್ಳುತ್ತವೆ.

ಕವಿತಾ ರೈ ರವರ 'ಹಕ್ಕಿ ಹರಿವ ನೀರು' ಕವನ ಸಂಕಲನದ 'ಒಲೆ' ಕವನ ಮಹಿಳೆಯರ ಬದುಕನ್ನು, ಅನುಭವವನ್ನು ಹೆಣ್ಣಿನ ದೃಷ್ಟಿಯಲ್ಲಿ ಚಿತ್ರಿಸಿ ಮಹಿಳೆಯರ ದೈನಂದಿನ ಬದುಕಿನ ವಾಸ್ತವತೆಯನ್ನು ಸಾಧಿಸಿದೆ. 21ನೆಯ ಶತಮಾನದ ಆಧುನಿಕ ಕಾಲಘಟ್ಟದಲ್ಲಿಯೂ ಸಹ ಮೇಲ್ನೋಟಕ್ಕೆ ಸ್ತ್ರೀಯರ ಬದುದಿನ ರೀತಿ ಸುಧಾರಣೆಯಾಗಿರುವಂತೆ ಅದರೊಳಗಿನ ಬಿಕ್ಕಟ್ಟುಗಳು ಬದಲಾಗದ ಸಂಗತಿಯನ್ನು ಕವಿತಾ ರೈ ರವರು 'ಒಲೆ' ಯ ರೂಪಕದ ಮೂಲಕ ಓದುಗರಿಗೆ ಕಟ್ಟಿಕೊಟ್ಟಿದ್ದಾರೆ. ನಮ್ಮ ಸಮಾಜ ಹಾಗೂ ಕುಟುಂಬದೊಳಗಿನ ಮಹಿಳೆಯರ ಬದುಕನ್ನು 'ಒಲೆ' ಯ ರೂಪಕದೊಂದಿಗೆ ಅನುಸಂಧಾನ ಮಾಡಿಕೊಂಡರೆ ಈ ಕವಿತೆಯ ಮೂಲಕ ಮಹಿಳಾ ಬದುಕಿನ ಅರ್ಥೈಸುವಿಕೆ ಸಾಧ್ಯವಾಗುತ್ತದೆ.

**ನಾನೇನೂ ಕಾಣದ್ದಲ್ಲ**
**ನಾನಿರುವಂತಹ ಮನೆಗಳನ್ನು**

**ಹಜಾರ, ಅಡುಗೆ, ಬಚ್ಚಲು, ಮಲಗಲು**
**ಬೆರಳೆಣಿಕೆಯ ಕೋಣೆಗಳು**
**ಗಾಳಿ ಬೆಳಕಿಗೆ ಎರಡು ಬಾಗಿಲು, ದಿಕ್ಕಿಗೊಂದರಂತೆ ಕಿಟಕಿ**
**ಅಡುಗೆ ಮನೆಯ ಕೇಂದ್ರ ಒಲೆ,**

ಪ್ರತಿಯೊಂದು ಕುಟುಂಬದಲ್ಲಿ ಅದರ ಆರ್ಥಿಕತೆಯನ್ನು ಹೊರತುಪಡಿಸಿ, ಇತ್ತೀಚಿನ ಬಹುತೇಕ ಸಂದರ್ಭಗಳಲ್ಲಿ ಕೌಟುಂಬಿಕ ಆರ್ಥಿಕ ಸ್ಥಿತಿಯನ್ನು ಸಂಭಾಳಿಸುವುದೂ ಸೇರಿದಂತೆ ಇಡೀ ಮನೆಯನ್ನು ನಡೆಸುವ, ಕುಟುಂಬ ಸದಸ್ಯರನ್ನು ಪಾಲಿಸುವ ಪೋಷಿಸುವ ಹೊಣೆಗಾರಿಕೆ ಸ್ತ್ರೀಯರದೇ ಆಗಿರುತ್ತದೆ. ಇದೇನು ಮಹಿಳೆಯರಿಗೆ ಹೊಸದಲ್ಲ. ಪರಂಪರೆಯಿಂದಲೂ ಇದು ನಡೆದುಬಂದಿದೆ. ಸಾಮಾಜಿಕವಾಗಿಯಾಗಲೀ, ಆರ್ಥಿಕವಾಗಿಯಾಗಲೀ ಯಾವುದೇ ಸ್ಥಿತಿಯಲ್ಲಿರುವ ಕುಟುಂಬಗಳಲ್ಲಿ ಇದು ಮಹಿಳೆಯರ ಸಾಮಾನ್ಯ ಪರಿಸ್ಥಿತಿ. ಪರೋಕ್ಷ ನೆಲೆಯಲ್ಲಿ ಇಡೀ ಕುಟುಂಬದ ಆಧಾರ ಹೆಣ್ಣೇ ಆಗಿದ್ದು, ಪ್ರತಿ ಕುಟುಂಬದ ಕೇಂದ್ರವೇ ಮಹಿಳೆಯರು ಎನ್ನುವುದನ್ನು ಕವಿತಾ ರೈ ರವರು ಸೂಚಿಸುತ್ತಾರೆ.

**ಅಜ್ಜಿ, ಅಮ್ಮ, ಈಗ ಸರದಿಯಲ್ಲಿ ನಾನು**
**ಕುಳಿರ ಭಂಗಿಗಳೆಷ್ಟು, ಊದಿ ಊದಿ ಹೊಗೆ ಹೀರಿದ್ದಷ್ಟು,**
**ಹೊಸ್ತಿಲು, ಹಿತ್ತಲು, ಹಜಾರ ಎಲ್ಲವೂ ಇರಲಿ**
**ಮಲಗುವ ಕೋಣೆಗಳ**
**ಬಿಸಿ ಬಿಸಿ ಹುಸಿ ಹುಸಿ ಒಣ ಒಡಕು ಮಾತುಗಳಿಗೆಲ್ಲ**
**ಒಲೆಯ ಮುಂದಿನ ನಿಟ್ಟುಸಿರೇ ಪರಿಹಾರ**

ಮಹಿಳೆಯರ ಸಂಕಷ್ಟದ ಬದುಕು ಕೇವಲ ಒಂದೆರಡು ತಲೆಮಾರಿಗೆ ಸೀಮಿತವಾದುದಲ್ಲ. ತಲತಲಾಂತರಗಳಿಂದಲೂ ಸಹ ಅವರ ಈ ಪರಿಸ್ಥಿತಿ ಬದಲಾಗದೇ ಹಾಗೆಯೇ ಉಳಿದಿದೆ. ಮಹಿಳೆಯರೂ ಸಹ ಈ ಪರಿಸ್ಥಿತಿಯನ್ನೇ ತಮ್ಮ ಸಹಜ ಸ್ಥಿತಿಯೆಂದು ಭಾವಿಸುವಷ್ಟು ಮಟ್ಟಿಗೆ ಅವರಲ್ಲಿ ವಿಸ್ಮೃತಿಯ ತೆರೆಯನ್ನು ಪಿತೃಸತ್ತೆ ಮೂಡಿಸಿದೆ. ಇದರಿಂದಾಗಿ ಮಹಿಳೆಯರು ಅನುಭವಿಸಿದ, ಅನುಭವಿಸುತ್ತಿರುವ ನೋವುಗಳೆಷ್ಟೋ? ಅದರ ರೂಪಗಳೆಷ್ಟೋ? ಇದು ಯಾರ ಗಣನೆಗೆ ನಿಲುಕುವುದಿಲ್ಲ. ಕಾಲ ಬದಲಾಗಬಹುದು. ಆದರೆ ಅವರ ಬದುಕು ಮಾತ್ರ ಇಂದಿಗೂ ಸುಧಾರಿಸಿಲ್ಲ. ಎಷ್ಟೋ ಬಾರಿ ಮಹಿಳೆಯರು ತಮ್ಮದೇ ಕುಟುಂಬದ ಮಹಿಳೆಯರಿಂದಲೇ ಶೋಷಣೆಗೆ ಒಳಗಾಗುವಂತಹ ಸ್ಥಿತಿಯನ್ನು ಪಿತೃಸತ್ತೆ ಸೃಷ್ಟಿಸಿದೆ. ಅವರ ನೋವುಗಳಿಗೆ ಅವರ

ಬದುಕನ್ನು ಹಂಚಿಕೊಂಡ ಪುರುಷರಿಂದಲೂ ಸಹ ಪರಿಹಾರ ದೊರೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ನೋವು ಅನುಭವಿಸುತ್ತಾ ಮೌನವಾಗಿ ಬದುಕನ್ನು ಸಾಗಿಸುತ್ತಾರೆ. ಪ್ರತಿದಿನ ಒಲೆಯಲ್ಲಿ ಬೂದಿ ಸೃಷ್ಟಿಯಾಗುವಂತೆ ಅವರ ಕನಸುಗಳೂ ಸಹ ಬೂದಿಯಾಗುತ್ತವೆ. ಮಹಿಳೆಯರ ಬದುಕಿನ ಅಸ್ಮಿತೆ, ನೂರೆಂಟು ಆಸೆಗಳು ಒಲೆಯ ಬೆಂಕಿ ಬೂದಿಯಾಗಿ ಗುರುತು ಕಳೆದುಕೊಂಡಂತೆ ಮಾಸಿಹೋಗುತ್ತವೆ ಎಂಬುದನ್ನು ಕವನ ಸೂಚಿಸುತ್ತದೆ.

**ಇಲ್ಲಿ ಏನೆಲ್ಲ ಬೆಂದಿಲ್ಲ,**
**ಹಸಿ ಹಸಿರು ಕಾಯಿಪಲ್ಲೆಗಳೆಲ್ಲ ಕಂದು ಕಪ್ಪಾಗಿ ಮಾಗಿ**
**ಹಿಟ್ಟು ರೊಟ್ಟಿಯಾಗಿ ರುಚಿಗಟ್ಟಿದೆ,**
**ಅಪರೂಪಕ್ಕೆ ಮಾಂಸವೂ ಬೆಂದಿಲ್ಲವೆ?**
**ಇಲ್ಲವೆನ್ನುವವರು ಯಾರು?**

ಕೌಟುಂಬಿಕ ನೆಲೆಯಲ್ಲಿ ಮಹಿಳೆಯರು ಅನುಭವಿಸದ ನೋವುಗಳೇನಾದರೂ ಇರಲು ಸಾಧ್ಯವೇ? ಎಂಬುದು ಇಂದಿಗೂ ಉತ್ತರ ತಿಳಿಯದ ಪ್ರಶ್ನೇಯಾಗಿದೆ. ತಮ್ಮ ಬದುಕಿನ ಎಲ್ಲಾ ಬಗೆಯ ಸಂಕಷ್ಟದ ಪರಿಸ್ಥಿತಿಗಳನ್ನು ಮಹಿಳೆಯರು ಎದುರಿಸುತ್ತಾ ಬದುಕುತ್ತಿದ್ದಾರೆ. ಶೋಷಣೆಯ ಉರಿಗೆ ಸಿಲುಕಿದ ಅವರ ಬದುಕಿನ ಬೆಂಕಿಯ ಬೆಳಕಿನಿಂದ ಕುಟುಂಬದ ಉಳಿದ ಸದಸ್ಯರ ಬದುಕು ಬೆಳಗುತ್ತದೆ. ಕುಟುಂಬದ ಪಯಣ ಗಮ್ಯದೆಡೆಗೆ ನಿರಾತಂಕವಾಗಿ ಸಾಗುತ್ತದೆ. ಆದರೆ ಕುಟುಂಬದ ಮಹಿಳೆಯರ ಬದುಕು ಮಾತ್ರ ಶತಶತಮಾನಗಳಿಂದಲೂ, ತಲೆಮಾರುಗಳು ಬದಲಾದರೂ, ನಾಗರಿಕತೆ ವಿಕಸಿಸಿದರೂ ಸಹ ಬದಲಾಗದಂತೆ ಉಳಿದಿದೆ.

**ಅಜ್ಜಿ ಅವಳಮ್ಮ, ನನ್ನಮ್ಮ ಹೋಗಲಿ**
**ನಾನು ಹೇಳುತ್ತೇನೆಯೇ? ಒಲೆ ಹೇಳುತ್ತದೆಯೇ?**
**ಅದು ಕೇಳಿದ ಕಥೆಗಳನ್ನು**
**ಒಲೆಯಾದರೂ ಏನು ಹೇಳೀತು?**
**ಎಲ್ಲವೂ ಉರಿದು ಬೂದಿಯಾಗಿದೆ, ಬೂದಾಗಿದೆ, ಬಣ್ಣ ಕಳೆದುಕೊಂಡಿದೆ**
**ಪಡೆದುಕೊಂಡದ್ದೂ ಇದೆ**

ತಲೆಮಾರುಗಳಿಂದಲೂ ಮಹಿಳೆಯರು ಅವರು ಅನುಭವಿಸಿದ ನೋವುಗಳನ್ನು ಪ್ರತಿಭಟಿಸಲಿಲ್ಲ. ಅದರ ಕುರಿತು ತಮ್ಮ ಮುಂದಿನ ತಲೆಮಾರಿಗೂ ಸಹ ಅರಿವು

ಮೂಡಿಸುವ ಕಾರ್ಯ ಮಾಡಲಿಲ್ಲ. ಮಹಿಳೆಯರ ಕುಟುಂಬವೂ ಸಹ ಅವರ ತಲ್ಲಣಗಳನ್ನು ಕೇಳಿಸಿಕೊಂಡಿಲ್ಲ. ಸಮಾಜವೂ ಸಹ ಅವರ ನೋವುಗಳನ್ನು ಗುರುತಿಸಲಿಲ್ಲ. ಹಾಗಾಗಿಯೇ ಅವರ ಬದುಕು ಎಂದಿನಿಂದಲೂ ಬಣ್ಣ ಕಳೆದುಕೊಂಡಿದೆ. ಹಾಗೆಂದರೆ ಕಾಲ ಬದಲಾದಂತೆ ಮಹಿಳೆಯರ ಬದುಕು ಬದಲಾಗಿಯೇ ಇಲ್ಲವೆಂದಲ್ಲ. ಆಧುನಿಕತೆಯಿಂದಾಗಿ ಮಹಿಳೆಯರ ಬದುಕಿನ ಶೈಲಿ ಬದಲಾಗಿರಬಹುದು. ಮೇಲ್ನೋಟಕ್ಕೆ ಆಧುನಿಕತೆಯಿಂದಾಗಿ ಸುಧಾರಿಸಿದ ಬದುಕು ಅವರದಾಗಿರಬಹುದು. ಆದರೆ ನೋವು, ಸಂಕಟಗಳು ಹೊಸ ಸ್ವರೂಪದಲ್ಲಿ ಇಂದಿಗೂ ಮಹಿಳೆಯನ್ನು ಕಾಡುತ್ತಿರುವುದರ ಸೂಚನೆ ಕವನದಲ್ಲಿ ವ್ಯಕ್ತವಾಗಿದೆ.

**ಇತ್ತೀಚೆಗೆ ಮಾವ ಬೇಡವೆಂದರೂ**
**ಇವರು ಒಲೆ ತೆಗೆಸಿದ್ದು, ಕಟ್ಟೆ ಹಾಕಿಸಿದ್ದು, ಗ್ಯಾಸ್ ಕೊಂಡದ್ದು,**
**ಈಗ ಹೊಗೆಯಿಲ್ಲ, ಧಗೆಯಿಲ್ಲ,**
**ಕೊತ ಕೊತ ಕುದಿ ಕಾಣುವುದಿಲ್ಲ, ಇಕ್ಕಳವಿದೆಯಲ್ಲ ಕೈಸುಡುವುದಿಲ್ಲ.**
**ಒಲೆಯ ಜೊತೆಗೆ ಬದಲಾಗಿದೆ, ಒಲೆಯ ಜೊತೆಗೆ ಬದಲಾಗಿದೆ**
**ಬಚ್ಚಲಿನಿಂದ ಹಜಾರದವರೆಗೆ ಎಲ್ಲವೂ**
**ಎರಡು ಬಾಗಿಲಿದ್ದರೇನು?**
**ಹೊಸ ಗಾಳಿ ಬೆಳಕಿನ ವ್ಯವಸ್ಥೆ ಎಲ್ಲ ಮನೆಯೊಳಗೇ ಇದೆ**
**ಬದಲಾದ ಬಗ್ಗೆ ಮತ್ತೆ ಮಾವನ ಮಾತಿಲ್ಲ**

ಆಧುನಿಕತೆಯಿಂದಾಗಿ, ತಾಂತ್ರಿಕತೆಯಿಂದಾಗಿ ಮಹಿಳೆಯರ ದೈನಂದಿನ ಗೃಹಕಾರ್ಯದಲ್ಲಿ ಸ್ವಲ್ಪ ಮಟ್ಟಿಗಿನ ಸುಧಾರಣೆ ಆಗಿರಬಹುದು. ಬದುಕು ಸ್ವಲ್ಪ ಮಟ್ಟಿಗೆ ಹಗುರಾಗಿರಬಹುದು. ಇದಕ್ಕೆ ಅವರ ಬದುಕಿನ ಜೊತೆಗಾರರು ಕಾರಣರಾಗಿರಬಹುದು. ಈ ಬದಲಾವಣೆಗೆ ಕುಟುಂಬದ ಸಾಮಾಜಿಕ ಸ್ಥಿತಿಗತಿ ಕುರಿತಾದ ಪುರುಷ ಚಿಂತನೆ ಕಾರಣವೇ ಹೊರತು ಮಹಿಳೆಯರ ಬದುಕಿನ ಸುಧಾರಣೆಯ ಕುರಿತಾದ ಮಾನವೀಯ ದೃಷ್ಟಿ ಖಂಡಿತಾ ಇರಲಾರದು. ಕುಟುಂಬದ ಯಾಂತ್ರೀಕರಣದ ಪರಿಸ್ಥಿತಿಗಳನ್ನು ಕಂಡವರಿಗೆ ಮಹಿಳೆಯರ ಬದುಕು ಸುಧಾರಿಸಿದೆ, ಅವರ ನೋವುಗಳು ಕಡಿಮೆಯಾಗಿದೆ ಎಂದೆನಿಸಬಹುದು. ಇದು ಕಳೆದುಹೋದ ದಿನಗಳನ್ನು ಕಂಡ ಹಿರಿಯರ ಅಭಿಪ್ರಾಯವೂ ಆಗಿರುತ್ತದೆ. ಆದರೆ ಇದು ದೈನಂದಿನ ಕೆಲಸದ ಸ್ವರೂಪದಲ್ಲಿ ಆಗಿರುವ ಬದಲಾವಣೆಯಷ್ಟೇ ಹೊರತು ಮಹಿಳೆಯರ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

**ಇಂದು ಇವರು ಹೇಳುತ್ತಾರೆ.**
**ನಾನು ನಿನ್ನ ಜೊತೆಗೆ ಇದ್ದೇನೆ, ನಾನು ನಿನ್ನ ಜೊತೆಗೆ ಇದ್ದೇನೆ.**
**ಅಡುಗೆ ಮನೆಯಲ್ಲಿ ನಿನ್ನ ಸೆರಗು ಹಿಡಿದಿಲ್ಲ**
**ಕೈಕಾಲಿಗೆ ಬೇಕು ಬೇಕಾದ್ದು ಇದೆಯಲ್ಲ**
**ಕೆಲಸಕ್ಕೆ ಜೊತೆ ಸೇರಿದ್ದೇನೆ, ಸುಖಿ ನೀನು**
**ನಮ್ಮಜ್ಜಿ, ನಿಮ್ಮಜ್ಜಿ ಅಮ್ಮಂದಿರಿಗಿಂತ**

ಸ್ತ್ರೀ ಪುರುಷ ಸಮಾನತೆಯ ಚಿಂತನೆಯು ಮೊಳಗುತ್ತಿರುವ ಈ ದಿನಗಳಲ್ಲಿ ಮಹಿಳೆಯರಿಗೆ ಅವರ ಬದುಕಿನಲ್ಲಿ, ಅವರ ಸಮಸ್ಯೆಗಳಲ್ಲಿ ನಾನು ಸಹ ಜೊತೆಗೆ ನಿಲ್ಲುತ್ತೇನೆಂದು ಪುರುಷರು ಮೇಲ್ನೋಟಕ್ಕೆ ಹೇಳುವ ಪ್ರಯತ್ನವನ್ನು ಮಾಡಿರಬಹುದು. ಜೊತೆಗೆ ಎಂದಿಗಿಂತ ಮಹಿಳೆಯರ ಬದುಕು ಸುಖವಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಹಾಗೆಂದ ಮಾತ್ರಕ್ಕೆ ನಿಜವಾಗಿಯೂ ಮಹಿಳೆಯರ ಬದುಕು ಶೋಷಣೆಯಿಂದ ಮುಕ್ತವಾಗಿದೆಯೇ? ಎಂಬ ಪ್ರಶ್ನೆಯನ್ನು ಕವನ ನಮ್ಮಲ್ಲಿ ಹುಟ್ಟಿಸುತ್ತದೆ.

**ಒಳಗೆ ಕುಕ್ಕರು ಕೂಗುತ್ತಿದೆ ಒತ್ತಡದಿಂದ**
**ಒಲೆ ಬದಲಾದರೇನು? ಉರಿ ಬದಲಾಗಿದೆಯೇ?**
**ಅಡುಗೆಯ ಅನುಭವ ಇಬ್ಬರಿಗೂ ಇದೆ**
**ಉಷ್ಣತೆಯ ತಾಪಕ್ಕೆ ಮುಚ್ಚಳ ಹಾರೀತು**
**ಕುಕ್ಕರಲ್ಲವೇ ತಾನೆ ತಣಿಯಲೆಂದು ಕಾಯಲಾಗುವುದಿಲ್ಲ**
**ಅವಿ ಹೋಗಲೇಬೇಕು ಹೊರಗೆ, ಆಗಿ ಹೋಗಲೇಬೇಕು ಹೊರಗೆ**

ಮಹಿಳೆಯರ ಬದುಕು ಇಂದಿಗೂ ಬದಲಾಗಿಲ್ಲ. ಅವರ ಮೌನದ ತಲ್ಲಣಗಳು ಇಂದಿಗೂ ತಣಿದಿಲ್ಲ. ಹಿಂದಿನ ದಿನಗಳಲ್ಲಿ ಮಹಿಳೆಯರು ಅನುಭವಿಸಿದ ಸಮಸ್ಯೆಗಳಿಗೂ ಹಾಗೂ ಪ್ರಸ್ತುತ ದಿನಗಳ ಅವರ ಬದುಕಿನ ಸಮಸ್ಯೆಗಳಿಗೂ ಸ್ವರೂಪದಲ್ಲಿ ಮೇಲ್ನೋಟದ ಬದಲಾವಣೆಯಾಗಿದೆಯೇ ಹೊರತು ಅಂಚಿಗೆ ಸರಿಸಲಾಗಿರುವ ಸ್ಥಿತಿ ಇಂದಿಗೂ ಹಾಗೆಯೇ ಇದೆ. ಮಹಿಳೆಯರ ಸಂಕಷ್ಟಗಳ ಅನುಭವ ಹಿಂದಿನ ಮಹಿಳೆಯರಿಗೂ ಇತ್ತು. ಹಾಗೆಯೇ ಇಂದಿನ ಮಹಿಳೆಯರಿಗೂ ಸಹ ಇದೆ. ಆದರೆ ಇದೇ ಪರಿಸ್ಥಿತಿಯನ್ನು ಎದುರಿಸುತ್ತಾ, ಅನುಭವಿಸುತ್ತಾ ಮಹಿಳೆಯರು ಸುಮನಿದ್ದರೆ ಅವರ ಬದುಕು ಎಂದಿಗೂ ಸಹ ಬದಲಾಗುವುದಿಲ್ಲ. ಹಾಗಾಗಿ ಕೆಲವೊಮ್ಮೆ ಆಧುನಿಕತೆಯಿಂದ ದಕ್ಕಿದ್ದನ್ನು, ಅನುಭವದಿಂದ ಕಂಡದ್ದನ್ನು ಹೋರಾಟದಿಂದ ಹಾರೂ ಪ್ರಯತ್ನದಿಂದ ಪಡೆದುಕೊಳ್ಳಬೇಕಾಗುತ್ತದೆ ಎಂದು ಕವಿತಾ ರೈ ರವರು ಸೂಚಿಸುತ್ತಾರೆ. ತನ್ಮೂಲಕ

ಮಹಿಳೆಯರ ಬದುಕಿನ ಬದಲಾವಣೆಯ ಮಾರ್ಗವನ್ನು ಅಭಿವ್ಯಕ್ತಿಸುತ್ತಾರೆ.

**ಕೊನೆ ಟಿಪ್ಪಣಿ:**

1. ಬಿ.ಎನ್.ಸುಮಿತ್ರಾಬಾಯಿ(2018); ಸ್ತ್ರೀವಾದ ಒಂದು ಅವಲೋಕನ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ. ಪು.ಸಂ.13
2. ಬಿ.ಎನ್.ಸುಮಿತ್ರಾಬಾಯಿ(1995); ವಿಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು.ಸಂ.67

**ಪರಾಮರ್ಶನ ಗ್ರಂಥಗಳು :**


1. ಕವಿತಾ ರೈ (1999); ಹಕ್ಕಿ ಹರಿವ ನೀರು, ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಬೆಂಗಳೂರು.
2. ಬರಗೂರು ರಾಮಚಂದ್ರಪ್ಪ(ಸಂ) (1993); ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಸಿ.ಎನ್.ರಾಮಚಂದ್ರನ್(2016); ಸಾಹಿತ್ಯ ವಿಮರ್ಶೆ ಮತ್ತು ವಸಾಹತೋತ್ತರ ಚಿಂತನೆ, ಅಂಕಿತ ಪುಸ್ತಕ, ಬೆಂಗಳೂರು.
4. ಬಿ.ಎನ್.ಸುಮಿತ್ರಾಬಾಯಿ(1995); ವಿಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಬಿ.ಎನ್.ಸುಮಿತ್ರಾಬಾಯಿ(2009); ಸರಹದ್ದುಗಳ ಆಚೆ–ಈಚೆ, ಇಳಾ ಪ್ರಕಾಶನ, ಬೆಂಗಳೂರು.
6. ಬಿ.ಎನ್.ಸುಮಿತ್ರಾಬಾಯಿ (2018); ಸ್ತ್ರೀವಾದ ಒಂದು ಅವಲೋಕನ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
7. ಶ್ರೀಮತಿ ಎಚ್.ಎಸ್(2019); ಸ್ತ್ರೀವಾದ ಚಿಂತನೆ ಮತ್ತು ಹೋರಾಟ, ಅಭಿರುಚಿ ಪ್ರಕಾಶನ, ಮೈಸೂರು.
8. ಮಲ್ಲಿಕಾ ಘಂಟಿ (ಸಂ) (2020); ಸ್ತ್ರೀವಾದಿ ಚಿಂತನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.



**ನಾಗೇಂದ್ರ ಪ್ರಸಾದ್ ಎ.ಎಂ.**

ಸಹಾಯಕ ಪ್ರಾಧ್ಯಾಪಕರು,

ಕನ್ನಡ ವಿಭಾಗ,

ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

prasadalaganchi@gmail.com

# ಜನಪದ ಮತ್ತು ವಚನ ಸಾಹಿತ್ಯ ತೌಲನಿಕ ವಿವೇಚನೆ

¤ ಡಾ. ಹೆಚ್.ಎಂ. ಮಲ್ಲಿಕಾರ್ಜುನ

ಮಾನವ ಜೀವನದ ಇತಿಹಾಸ ಬಹಳ ದುರ್ಗಮವಾದುದು, ಪ್ರತಿ ಹಂತದಲ್ಲೂ ಶೋಧನಾತ್ಮಕವಾಗಿ ನಡೆದು ತನ್ನ ಬದುಕನ್ನು ಪರಿಷ್ಕರಣೆಗೆ ಒಳಗು ಮಾಡುತ್ತಲೇ ಹೊಸತನವನ್ನು ಮೈಗೂಡಿಸಿಕೊಂಡವನು ಮನುಷ್ಯ. ಹತ್ತಾರು ಸಾವಿರ ವರ್ಷಗಳ ಹಿಂದೆ ಮನುಷ್ಯನಿಗೆ ಮಾತು ಬರುತ್ತಿರಲಿಲ್ಲ, ಒಂದು ನಿರ್ದಿಷ್ಟ ಭಾಷೆ ಎಂಬುದೂ ಇರಲಿಲ್ಲ, ಆಗೆಲ್ಲಾ ಸನ್ನೆಯ ಮೂಲಕ, ಜೋರಾಗಿ ಶಬ್ದ ಮಾಡುವ ಮೂಲ ಪರಸ್ಪರ ಸಂವಹನ ನಡೆಸುತ್ತಿದ್ದರು. ತದನಂತರದಲ್ಲಿ ಮನುಷ್ಯ ಒಗ್ಗಟ್ಟಾಗಿ ಬಾಳುವುದನ್ನು ಕಲಿತ, ಬದುಕಿನ ಶೈಲಿಯನ್ನು ಬದಲಿಸಿಕೊಂಡು ಒಂದು ಕಡೆ ನೆಲೆನಿಂತನು, ಸಂಘಜೀವಿಯಾಗಿ ಬದುಕು ಪ್ರಾರಂಭಿಸಿ ಹಲವಾರು ಆವಿಷ್ಕಾರಗಳನ್ನು ನಡೆಸಿ ತನ್ನ ಸಮುದಾಯದೊಂದಿಗೆ ಸೂಕ್ತವೆನ್ನಿಸುವ ಭಾಷೆಯನ್ನು ಕಲಿತುಕೊಂಡ ಅದಕ್ಕೊಂದು ಲಿಪಿಯನ್ನು ರೂಪಿಸಿಕೊಂಡನು. ಇಂದಿಗೂ ಲಿಪಿಯಿಲ್ಲದ ಸಾವಿರಾರು ಭಾಷೆಗಳು ಜಗತ್ತಿನಾದ್ಯಂತ ಇರುವುದನ್ನು ಮರೆಯುವಂತಿಲ್ಲ.

ಭಾರತೀಯ ಸಾಹಿತ್ಯ ಮಾತ್ರವಲ್ಲ ಜಗತ್ತಿನ ಎಲ್ಲಾ ಮಹಾಕಾವ್ಯಗಳು, ಶ್ರೇಷ್ಠ ಕೃತಿಗಳೆಲ್ಲವೂ ಮೂಲದಲ್ಲಿ ಜನಪದ ಮೂಲದಲ್ಲಿಯೇ ಇದ್ದವೆಂಬುದನ್ನು ತಳ್ಳಿಹಾಕುವಂತಿಲ್ಲ. ಮೌಖಿಕ ಪರಂಪರೆಯ ಮೂಲಕ ಎಲ್ಲೆಡೆಯೂ ಬೆಳೆದುಬಂದಿದ್ದ ಆ ಸಾಹಿತ್ಯ ಪರಂಪರೆಯನ್ನು ಅಕ್ಷರರೂಪಕ್ಕಿಳಿಸಿಕೊಂಡದ್ದು ಒಂದು ಅದೃಷ್ಟದ ಯುಗವೆನ್ನಬೇಕು. ಭಾರತೀಯ ಪರಂರೆಯಲ್ಲಿರುವ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ನೂರಾರು ರೀತಿಯ ಮೌಖಿಕ ಪರಂಪರೆಯಲ್ಲಿ ಲಭ್ಯವಿವೆ. ಅದನ್ನೇ ತದನಂತರದಲ್ಲಿ ಭಾರತೀಯ ಭಾಷೆಗಳಲ್ಲಿ ದಾಖಲಿಸಿಕೊಳ್ಳಲಾಯಿತು.

ಕನ್ನಡ ಸಾಹಿತ್ಯದ ಉದಯವೂ ಜನಪದ ಮೂಲದಿಂದಲೇ

ಆರಂಭವಾಗಿರುವುದಕ್ಕೆ ಹಲವಾರು ಉದಾಹರಣೆಗಳು ಸಿಗುತ್ತವೆ. ಗಾದೆಗಳು, ಒಗಟುಗಳು, ಜನಪದ ಕಾವ್ಯಗಳು, ಕಥೆಗಳು, ಒಡಪುಗಳು, ಸೋಬಾನೆ ಪದಗಳು, ಸ್ತುತಿ ಪದಗಳು, ಜೋಗುಳ ಹಾಡು, ಒನಕೆ ಕುಟ್ಟುವಾಗ, ರಾಗಿ ಬೀಸುವಾಗ, ಸುಗ್ಗಿ ಸಂದರ್ಭದಲ್ಲಿ ಹೀಗೆ ಹಲವು ಪ್ರಕಾರಗಳಲ್ಲಿ ಜನಪದ ಪರಂಪರೆ ಇದ್ದುದನ್ನು ಪ್ರಾಜ್ಞರುಗಳು ಗುರುತಿಸಿ ಸಂಗ್ರಹಿಸಿದ್ದಾರೆ. ಕವಿರಾಜಮಾರ್ಗಕಾರ ಶ್ರೀವಿಜಯನು ತನ್ನ ಅಲಂಕಾರಿಕ ಗ್ರಂಥದಲ್ಲಿ ಜನಪದರನ್ನು ಕುರಿತು ಒಳ್ಳೆಯ ಮಾತುಗಳನ್ನು ಆಡಿದ್ದಾನೆ.

**ಪದನರಿದು ನುಡಿಯಲುಂ ನುಡಿ**
**ದುದನರಿದಾರಯಲುಮಾರ್ಪರಾ**
**ನಾಡವರ್ಗಳ್ ಚದುರರ್ ನಿಜದಿಂ ಕುರಿತೋ**
**ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್**[1]

ಕನ್ನಡ ನಾಡಿನ ಜನಪದ ಪರಂಪರೆಯ ಜನರು ಪದವನ್ನು ಕಟ್ಟುವ ಸಾಮರ್ಥ್ಯವುಳ್ಳವರಾಗಿದ್ದರು, ನುಡಿದಂತೆ ನಡೆಯುತ್ತಿದ್ದರು, ಆಳವಾದ ಅಧ್ಯಯನ ಮಾಡದೇ ಇದ್ದರೂ ಸಹ ಕಾವ್ಯವನ್ನು ಕಟ್ಟುವ ಸಾಮರ್ಥ್ಯವುಳ್ಳವರಾಗಿದ್ದರು ಎಂದು ಸಮರ್ಥಿಸಿದ್ದಾನೆ.

ಜನಪದರು ಹಾಡುಗಾರಿಕೆ ಪದಕಟ್ಟುವಲ್ಲಿಗೆ ಸೀಮಿತವಾಗಿ ಉಳಿದುಕೊಂಡಿಲ್ಲವೆಂಬುದನ್ನು ಅರ್ಥೈಸಿಕೊಳ್ಳಬೇಕಿದೆ. ಅವರು ಹಲವಾರು ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದರೆಂಬುದನ್ನು ನಾವು ಇಲ್ಲಿ ತಿಳಿಯಬೇಕಿದೆ. ಕುಂಬಾರಿಕೆ, ಕಮ್ಮಾರಿಕೆ, ಚಮ್ಮಾರಿಕೆ, ಮಡಿವಾಳ ವೃತ್ತಿ, ಬಡಗಿ ವೃತ್ತಿ, ಗಾಣಿಗ ವೃತ್ತಿ, ವ್ಯವಸಾಯ ವೃತ್ತಿ, ಕರಕುಶಲ ವಸ್ತುಗಳ ತಯಾರಿಕೆ ಹೀಗೆ ಹತ್ತು ಹಲವು ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದರು. ಇದಲ್ಲದೇ ಅವರ ಪೂಜಾ ವಿಧಾನ, ಬದುಕಿನ ಶೈಲಿಯೂ ಭಿನ್ನವಾಗಿದ್ದಿತು ಎಂಬುದನ್ನು ಇಲ್ಲಿ ಅರ್ಥೈಸಿಕೊಳ್ಳಬಹುದು. ಜನಪದರ ಬದುಕಿನ ಶೈಲಿಯಲ್ಲಿ ಎಲ್ಲವೂ ಒಪ್ಪುವಂಥದ್ದೇ ಇದ್ದಿತೇ, ಎಲ್ಲವೂ ಸರಿಯಾಗಿಯೇ ನಡೆಯುತ್ತಿತ್ತೇ ಎಂಬಂತಹ ಪ್ರಶ್ನೆಗಳು ಉದ್ಭವವಾಗುತ್ತವೆ. ಅವರಲ್ಲಿ ಆಚರಣೆಯಲ್ಲಿ ಭಿನ್ನತೆ ಇರುವುದರ ಜೊತೆಗೆ ಕೆಲವೊಂದು ಮೌಢ್ಯಗಳು ಮನೆಮಾಡಿದ್ದವು. ಅಂತವುಗಳನ್ನು ಸರಿಪಡಿಸಿ ಅದಕ್ಕೆ ಒಂದು ಸಮಸಮಾಜದ ಮಾರ್ಗವನ್ನು ಕಲ್ಪಿಸಿಕೊಡಲು ದುಡಿದದ್ದೇ

**ವಚನ ಸಾಹಿತ್ಯ.**

ವಚನ ಸಾಹಿತ್ಯವು 12ನೇ ಶತಮಾನದ ಶರಣರ ಚಳವಳಿಯ ಉಪ

ಉತ್ಪನ್ನ. ಈ ನಾಡಿನಲ್ಲಿ ಆಚರಣೆಯಲ್ಲಿದ್ದ ಮೌಢ್ಯ, ಕಂದಾಚಾರ, ಅಸಮಾನತೆ, ಜಾತೀಯತೆ ಮೊದಲಾದ ಸಮಾಜಘಾತುಕ ಸಂಗತಿಗಳನ್ನು ಸರಿಪಡಿಸಲು ಬಸವಣ್ಣನವರು ಅಲ್ಲಮಪ್ರಭು, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ ಇವರೇ ಮೊದಲಾದ ಶರಣದೊಂದಿಗೆ ಚಳುವಳಿಯನ್ನು ಪ್ರಾರಂಭಿಸಿದರು. ತಮ್ಮ ಬದುಕಿನಲ್ಲಿ ಕಂಡುಕೊಂಡ ಅನುಭವಗಳಿಗೆ ಅಕ್ಷರ ರೂಪಕೊಟ್ಟು ವಚನಗಳನ್ನು ಬರೆದರು. ಅವರು ಶರಣರು ಈ ನಾಡಿಗೆ ಕೊಟ್ಟಿರುವ ಅಪರೂಪದ ಸಾಹಿತ್ಯಪ್ರಕಾರವೆಂದೇ ಹೇಳಬೇಕು. ವಚನಸಾಹಿತ್ಯದ ಉಗಮ ಮತ್ತು ನಿಷ್ಪತ್ತಿಯ ಬಗೆಗೆ ಸಾಕಷ್ಟು ಸಂಶೋಧನೆ ನಡೆಸಿದ್ದಾರೆ. ಎಲ್ಲರೂ ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ವಚನಕಾರರು ಪದ್ಯವನ್ನು ಗದ್ಯದ ಮಟ್ಟಕ್ಕಿಳಿಸಲಿಲ್ಲ, ಗದ್ಯವನ್ನೇ ಪದ್ಯದ ಮಟ್ಟಕ್ಕೇರಿಸಿದರು."[2] ಎಂಬ ಅಭಿಪ್ರಾಯ ವಚನವೆಂಬುದೇ ಒಂದು ಹೊಸ ಸಾಹಿತ್ಯ ಪ್ರಕಾರವೆಂಬುದನ್ನು ಸಾಬೀತು ಮಾಡುತ್ತದೆ. ಹಾಗೆಯೇ ಮುಂದುವರಿದು ಬಸವನಾಳ ಶಿವಲಿಂಗಪ್ಪನವರು "ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ–ಪದ್ಯದ ನಡುವಿನ ಒಂದು ಮಾದರಿ. ವಚನಗಳಲ್ಲಿ ಗದ್ಯದ ನಿರರ್ಗಳತೆಯಿಲ್ಲದಿದ್ದರೂ ಅದರ ಸರಳತೆಯಿದೆ; ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ."[3] ಇವರ ಹೇಳಿಕೆಯಂತೆ ವಚನವು ಗದ್ಯ ಮತ್ತು ಪದ್ಯಗಳೆರಡರ ಲಕ್ಷಣವನ್ನೊಳಗೊಂಡು ರೂಪಿತವಾಗಿದೆ ಎಂಬುದು ತಿಳಿದು ಬರುತ್ತದೆ.

ವಚನ ಸಾಹಿತ್ಯವು ಎಲ್ಲಿಂದ ಪ್ರೇರಣೆ ಪಡೆಯಿತೆಂಬುದರ ಬಗ್ಗೆಯೂ ವಿದ್ವಾಂಸರು ಚರ್ಚಿಸಿದ್ದಾರೆ. ವಚನ ಎಂದರೆ ಮಾತು ಎಂಬರ್ಥ ಬರುತ್ತದೆ. ಮಾತುಗಳಿಗೆ ಅಕ್ಷರ ರೂಪ ಕೊಟ್ಟು ವಚನ ಮಾಡಿಕೊಂಡರೆಂಬುದು ತಿಳಿದುಬರುತ್ತದೆ. ಉಪನಿಷತ್ತುಗಳಿಂದ ಪ್ರಭಾವಿತವಾಗಿರುವವೆಂದು ಎಲ್. ಬಸವರಾಜು ಅವರು, ತಮಿಳಿನ ತೇವಾರಂ ಗೀತೆಗಳಿಂದ ಪ್ರೇರಣೆ ಪಡೆದುಕೊಂಡಿವೆ ಎಂದು ಡಿ.ಎಲ್. ನರಸಿಂಹಾಚಾರ್, ದೇಶೀಯ ತ್ರಿಪದಿಗಳಿಂದ ರೂಪಿತವಾದುವೆಂದು ಎಂ. ಚಿದಾನಂದಮೂರ್ತಿ ಅವರು, ಪುರವಂತರು(ಲಿಂಗವೀರರು) ಖಡ್ಗ ಹಿಡಿದು ಹೇಳುವ ವೀರಭದ್ರನ ವಡಬುಗಳೇ ವಚನಗಳಾದವೆಂದು ಎಚ್. ದೇವೀರಪ್ಪ ಅವರು, ಜನಪದ ಗಾದೆ, ಒಗಟು, ಜನಪದರ ಭಾಷೆ, ಪ್ರಭಾವ–ಪ್ರೇರಣೆಗಳಿಂದ ಒಡಮೂಡಿದವೆಂದು ಸಿ.ಕೆ. ನಾವಲಗಿ ಅವರು ಅಭಿಪ್ರಾಯಪಡುತ್ತಾರೆ.

ಸೂಕ್ಷ್ಮವಾಗಿ ಗಮನಿಸಿದರೆ ವಚನವೆಂಬುದು ದೇಶೀಯ ಉತ್ಪನ್ನದಂತೆ ಕಂಡುಬರುತ್ತದೆಯಾದ್ದರಿಂದ ಈ ನಾಡಿನ ಜನಪದ ಮೂಲವನ್ನು ಇದರಲ್ಲಿ ಕಾಣಬಹುದಾಗಿದೆ. ಸಾಹಿತ್ಯ ರಚಿಸುವ ಯಾವುದೇ ಮಹತ್ವಾಕಾಂಕ್ಷೆ ಶರಣರಿಗೆ ಇರಲಿಲ್ಲ.

ಇದು ಚಳುವಳಿಯ ಒಂದು ಉತ್ಪನ್ನವೆಂದೇ ಹೇಳಬೇಕು. ಹಾಗೆ ನೋಡಿದರೆ, ಪ್ರಾಚೀನ ಪರಂಪರೆ ಮತ್ತು ಅದರ ನಂತರದ ಪರಂಪರೆಯ ಕವಿಗಳ ಬಗ್ಗೆ ಅವರೇ ರಚಿಸಿರುವ ಕೃತಿಗಳಲ್ಲಿ ಕನಿಷ್ಠ ಸ್ವಪರಿಚಯವಾದರೂ ಸಿಗುತ್ತದೆ. ಆದರೆ ಶರಣರಾರೂ ತಮ್ಮ ಬಗೆಗೆ ಎಲ್ಲಿಯೂ ಉಲ್ಲೇಖಿಸಿಲ್ಲ ಮತ್ತು ಆ ಕಾಲಘಟ್ಟದಲ್ಲಿ ಸಾಹಿತ್ಯ ಚರಿತ್ರೆಯನ್ನಾಗಲಿ ಬರೆಯಲಿಲ್ಲ, ಬದಲಿಗೆ ತಾವು ಕಂಡುಂಡ ಅನುಭವಗಳನ್ನು ದಾಖಲಿಸಿದರು. ಅದು ಸತ್ಯವಚನವಾಯಿತೆಂಬುದು ನಂಬಲರ್ಹವಾದ ಸಂಗತಿ. "ವಚನ ಸಾಹಿತ್ಯದ ಸ್ವರೂಪ–ವೈಶಿಷ್ಟ್ಯಗಳನ್ನು ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಕ ಪರಿಸ್ಥಿತಿಗಳು ನಿರ್ಧರಿಸಿವೆ"[4] ಈ ಮಾತುಗಳು ವಚನದ ಉಗಮಕ್ಕೆ ಮತ್ತಷ್ಟು ಪುಷ್ಟಿಯನ್ನು ನೀಡುತ್ತದೆ. ಸಂಪ್ರದಾಯವಾದಿಗಳ ವಿರುದ್ಧ ಸಾಹಿತ್ಯಕ ಮತ್ತು ಧಾರ್ಮಿಕ ಹೋರಾಟ ನಡೆಸಿ ಗೆಲ್ಲುವುದು ಅಷ್ಟು ಸುಲಭದ ಸಂಗತಿಯಾಗಿರಲಿಲ್ಲ, ಹೆಜ್ಜೆ ಹೆಜ್ಜೆಗೂ ಪರೀಕ್ಷೆ, ಅಪಮಾನ ನಡೆದೇ ಇತ್ತು. ಪುರೋಹಿತಶಾಹಿಗಳ ತಾಳಕ್ಕೆ ತಕ್ಕಂತೆ ಪ್ರಭುತ್ವ ಕುಣಿಯುತ್ತಿದ್ದುದು ಸತ್ಯಸಂಗತಿಯಾಗಿತ್ತು. "ವಚನಕಾರರು ಎಂತಹ ಸಂದರ್ಭ ಸನ್ನಿವೇಶಗಳಲ್ಲಿ ಎಂತೆಂತಹ ಸಮಸ್ಯೆಗಳನ್ನು ಎದುರಿಸಿದರು ಎಂಬುದು ಅರ್ಥವಾಗದಿದ್ದರೆ ಅವರ ವಚನಗಳ ಉದ್ದೇಶವಾಗಲೀ, ಸ್ವರೂಪವಾಗಲೀ ಅರ್ಥವಾಗಲಾರವು. ವಚನಗಳನ್ನು ಬರಿಯ ಸಾಹಿತ್ಯವಾಗಿ ನೋಡುವುದು ತೇಲುನೋಟದ್ದಾಗಿ ಪರಿಣಮಿಸುವ ಅಪಾಯವಿದೆ. ಅವುಗಳನ್ನು ಆ ಕಾಲದ ಸಾಮಾಜಿಕ ಪರಿಸರದಲ್ಲಿಯೇ ಇಟ್ಟು ನೋಡಬೇಕು"[5] ಎಂದು ಮುಂದುವರಿದು ಹೇಳುವ ಚಿದಾನಂದಮೂರ್ತಿ ಅವರು ಮಾತು ಸತ್ಯಕ್ಕೆ ಹತ್ತಿರವಾದುದಾಗಿದೆ.

ಈ ನಾಡು ಜನಪದ ಸಂಸ್ಕೃತಿಯಿಂದ ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾಗಿ ತುಂಬಾ ಶ್ರೀಮಂತವಾಗಿದೆ. Folklore ಜಾನಪದ, ಈಠಟಞ ಜನಪದ, Folk Art ಜನಪದ ಕಲೆ, ಈಠಟಞ ಐಣಜಡಿಚಿಣಣಡಿಜ ಜನಪದ ಸಾಹಿತ್ಯ ಎಂದು ಕನ್ನಡದಲ್ಲಿ ಸಂವಾದಿ ಪದಗಳನ್ನು ಕಟ್ಟಿಕೊಂಡಿದ್ದೇವೆ. ಜನಪದದ ಇತಿಹಾಸ ಮನುಷ್ಯನ ಉಗಮಷ್ಟೇ ಪ್ರಾಚೀನವಾದುದೆಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. "ಜಾನಪದವೆಂದರೆ ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ ಹಾಗೂ ಅದನ್ನು ಕುರಿತ ವಿಜ್ಞಾನ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ Folklore ಎನ್ನುವುದು ಸಂಪ್ರದಾಯ ಕುರಿತ ವಿಜ್ಞಾನ"[6] ಎಂಬ ಹಾ.ಮಾ.ನಾ ಅವರ ಮಾತು ವಸ್ತುನಿಷ್ಠವಾಗಿದೆ. ಜನಪದರ ಪರಂಪರೆ ಗ್ರಂಥಸ್ಥವಾದುದಲ್ಲ ನಿಜ ಆದರೆ ಅದು ಅಂತರಂಗ ನಿಷ್ಠವಾದುದು ಮತ್ತು ಗ್ರಂಥಸ್ಥ ಪರಂಪರೆಗೆ ಮೂಲಬೇರಾಗಿದೆ ಎಂಬುದನ್ನು ಅರಿಯಬಹುದು. ಜನಪದರ ಹಾಡು, ನೃತ್ಯ, ಗಾದೆ, ಕಥೆ, ಕಾವ್ಯ,

ಒಗಟು, ಸಂಸ್ಕೃತಿ, ಆಚರಣೆ ಎಲ್ಲವೂ ಅವರ ಜೀವನದ ಸುತ್ತು ಹೆಣೆದುಕೊಂಡು ಬೆಳೆದಿದೆ. ಜನಪದರ ಬದುಕಿನಲ್ಲಿ, ಸಾಹಿತ್ಯದಲ್ಲಿ ಶ್ರೀಮಂತಿಕೆಯಿಲ್ಲ ಬದಲಿಗೆ ಜೀವಂತಿಕೆ ಇದೆ. ಅವರು ಎಂದಿಗೂ ಕೃತಕತೆಯ ಬದುಕನ್ನು ಸಾಗಿಸಿದವರಲ್ಲ, ಪರಸ್ಪರ ಪ್ರೀತಿ, ಕಾಳಜಿ, ನಂಬಿಕೆಯಿಂ ಪ್ರಕೃತಿಯನ್ನೇ ಆರಾಧಿಸಿಕೊಂಡು ಬಂದವರು. ವಚನ ಸಾಹಿತ್ಯವು ಹೇಗೆ ಜನಸಾಮಾನ್ಯರನ್ನು ಕೇಂದ್ರೀಕರಿಸಿಕೊಂಡು ಬೆಳೆಯಿತೋ ಅಂತೆಯೇ ಜನಪದ ಸಾಹಿತ್ಯದಲ್ಲಿ ಇರುವವರೆಲ್ಲರೂ ಜನಸಾಮಾನ್ಯರೇ ಆಗಿರುವುದು ಮುಖ್ಯವಾಗಿ ಗುರುತಿಸಬೇಕಾದ ಅಂಶವಾಗಿದೆ. ಈ ಜನಪದ ಸಾಹಿತ್ಯವೇ ಅವರ ಪರಂಪರೆಯೇ ವಚನಕಾರರಿಗೆ ಮೂಲ ಸರಕಾಗಿದೆ ಎಂಬುದನ್ನು ಪ್ರಧಾನವಾಗಿ ಗುರುತಿಸಬಹದು. ಬಹುಸಂಸ್ಕೃತಿ ಇರುವಲ್ಲಿಯೇ ಭಿನ್ನ ಆಲೋಚನೆ, ಬದುಕಿನ ಶೈಲಿ ಅಡಗಿರುತ್ತದೆ.

**ಜಾನಪದ ಮತ್ತು ವಚನ ಸಂಸ್ಕೃತಿಯ ತುಲನೆ :**

ಈಗಾಗಲೇ ಚರ್ಚಿಸಿರುವಂತೆ ಜಾನಪದ ಮತ್ತು ವಚನ ಸಂಸ್ಕೃತಿಯು ಸಮಾನ ಅಂಶಗಳಿಂದ ಕೂಡಿದೆ. ಇಲ್ಲಿಯ ಆಚರಣೆ, ಬದುಕಿನ ಶೈಲಿ, ಸಾಮಾಜಿಕ ಮತ್ತು ಧಾರ್ಮಿಕ ನೆಲೆಯಲ್ಲಿರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗುತ್ತದೆ. ಈ ಕಾಲಘಟ್ಟದಲ್ಲಿದ್ದ ಪಟ್ಟಭದ್ರ ಹಿತಾಸಕ್ತಿಗಳು ಪ್ರಭುತ್ವದ ನೆರವಿನೊಂದಿಗೆ ವರ್ಗ, ವರ್ಣ ಮತ್ತು ಲಿಂಗಭೇದವನ್ನು ಸಮಾಜದಲ್ಲಿ ತಂದಿರಿಸಿ ಶ್ರೇಣೀಕರಣ ವ್ಯವಸ್ಥೆಯನ್ನು ಹುಟ್ಟುಹಾಕಿದ್ದರು. ಜನಸಾಮಾನ್ಯರು ಈ ಸಂದರ್ಭದಲ್ಲಿ ಉಳ್ಳವರ ಮತ್ತು ಉನ್ನತ ವರ್ಗದವರ ದೌರ್ಜನ್ಯಕ್ಕೆ ಸಿಲುಕಿ ನರಳಿದ್ದರು. ಅದಲ್ಲದೇ ಇನ್ನಿಲ್ಲದ ಕಟ್ಟುಪಾಡುಗಳಲ್ಲಿ ಅವರನ್ನು ಸಿಲುಕಿಸಿ, ಸಂಪ್ರದಾಯವೆಂಬ ಕರಿನೆರಳಿನಲ್ಲಿಯೇ ಬದುಕುವಂತೆ ಮಾಡಿಬಿಟ್ಟಿದ್ದರು. ಇಂತಹ ಸಂದರ್ಭದಲ್ಲಿ ಬಸವಾದಿ ಶರಣರು ಆ ಸಮುದಾಯದಲ್ಲಿ ವೈಚಾರಿಕತೆಯ ಬೆಳಕನ್ನು ನೀಡಿ ಅವರನ್ನು ಮೇಲೆತ್ತಿ ಕಾಯಕಜೀವಿಗಳನ್ನಾಗಿ ರೂಪಿಸಿದರು.

**ಮದುವೆ ಸಮಾರಂಭ :** ಮದುವೆಯ ಸಂದರ್ಭದಲ್ಲಿ ರಾಶಿ, ಕೂಟ, ಕುಲ, ಗೋತ್ರ, ನಕ್ಷತ್ರ, ಹುಟ್ಟಿದ ಸಮಯ ಎಲ್ಲವನ್ನು ವಿಚಾರಿಸಿಕೊಳ್ಳಲಾಗುತ್ತಿತ್ತು. ಈ ಸಂಪ್ರದಾಯಗಳು ಶೋಷಣೆಯನ್ನು ಮುನ್ನೆಲೆಯಲ್ಲಿ ಪ್ರತಿಬಿಂಬಿಸದೇ ಹೋದರೂ, ಹೆಣ್ಣನ್ನು ಮನೆಯ ಕೆಲಸದಾಕೆ ಎಂಬಂತೆ ಎರಡನೆಯ ದರ್ಜೆಯವಳಾಗಿ ಕಾಣಲಾಗುತ್ತಿತ್ತು ಇಂತಹ ಸಂದರ್ಭದಲ್ಲಿ ಶರಣರು ಸ್ತ್ರೀ–ಪುರುಷರಿಬ್ಬರೂ ಸಮಾನರು ಎಂಬ ಅಂಶವನ್ನು ಬಿತ್ತರಿಸಿದ್ದಾರೆ.

**ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ,**
**ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ,**
**ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ,**
**ನಾಳಿನ ದಿನಕಿಂದನ ದಿನ ಲೇಸೆಂದು ಹೇಳಿರಯ್ಯಾ,**
**ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ.**[7]

ಈ ವಚನದಲ್ಲಿ ಬಸವಣ್ಣನವರು ಎಲ್ಲರೂ ನಮ್ಮವರೆಂಬ ಭಾವ ಮೊದಲು ಬಂದಮೇಲೆ ಅಲ್ಲಿ ರಾಶಿ, ಕೂಟ, ಶುಭಲಗ್ನವೆಂಬುದನ್ನು ನೋಡುವ ಅಗತ್ಯವಿಲ್ಲ. ಎಲ್ಲವೂ ತಾನಾಗಿಯೇ ಸರಿಹೊಂದಾಣಿಕೆಯಾಗುತ್ತದೆ ಎಂದು ಅಭಿಪ್ರಾಯಿಸಿದ್ದಾರೆ. ಸತಿ–ಪತಿಗಳಿಬ್ಬರು ಒಟ್ಟಾಗಿ ಕಾಯಕ ಮಾಡಿ ಸಾರ್ಥಕತೆಯ ಬದುಕನ್ನು ಸಾಗಿಸಿದ ಅಸಂಖ್ಯಾತ ಉದಾಹರಣೆ ಸಿಗುತ್ತದೆ. ಜೇಡರ ದಾಸಿಮಯ್ಯ–ದುಗ್ಗಳೆ, ಬಸವಣ್ಣ ದಂಪತಿ, ಮೋಳಿಗೆ ಮಾರಯ್ಯ, ಮೋಳಿಗೆ ಮಹಾದೇವಿ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ ಹೀಗೆ ಹಲವಾರು ಶರಣ ದಂಪತಿಗಳು ಸ್ವಾರ್ಥಕ್ಕಲ್ಲದೇ ಸಮಾಜದ ಏಳ್ಗೆಗಾಗಿ ದುಡಿದಿರುವುದು ತಿಳಿದುಬರುತ್ತದೆ.

ಸಮಾಜದಲ್ಲಿ ಬೇರೂರಿದ್ದ ಕರ್ಮಠಗಳನ್ನು ಕಿತ್ತೊಗೆಯುವುದು ವಚನಕಾರರ ಉದ್ದೇಶವಾಗಿತ್ತು. ಅದರಂತೆಯೇ ಅವುಗಳನ್ನು ಖಂಡಿಸುವ ರೀತಿ ವಚನಗಳಲ್ಲಿ ಗೋಚರವಾಗಿದೆ. ಶಕುನ, ಮಂತ್ರ–ತಂತ್ರ, ಉಡುಗೆ–ತೊಡುಗೆ ಮುಂತಾದವುಗಳ ಬಗ್ಗೆ ತೀಕ್ಷ್ಣ ಮಾತುಗಳಿವೆ.

**ಮೂಢನಂಬಿಕೆ :** ದೇವರ ವಿಚಾರ, ಭೂತದ ವಿಚಾರ, ಭೂಮಿಯಲ್ಲಿ ನಿಧಿ ಇದೆ ಎಂಬ ವಿಚಾರ ಕುರಿತಂತೆ ಜನರಲ್ಲಿ ನಂಬಿಕೆಯಿದ್ದಿತು. ಜೀವನದಲ್ಲಿ ಆಗುವಂತಹ ಏಳು–ಬೀಳುಗಳನ್ನು ಕುರಿತಂತೆ ಜನರು ಅಪಶಕುನಗಳ ಮೊರೆ ಹೋಗುತ್ತಿದ್ದರು. ಖಾಲಿ ಕೊಡ, ಬೆಕ್ಕು ಅಡ್ಡ ಬರುವುದು, ಮನೆಯಲ್ಲಿ ಕನ್ನಡಿ ಒಡೆದು ಹೋಗುವುದು, ವಿಧವೆ ಶುಭಸಮಾರಂಭಗಳಲ್ಲಿ ಭಾಗವಹಿಬಾರದು ಎಂಬ ಸಂಗತಿ, ಎಡಗೈ ಕನಿಷ್ಠ, ಕಣ್ಣು ಅದರುವುದು, ಮಾಟದ ಬಗ್ಗೆ ಭಯ ಬೀಳುವುದು ಇಂತಹ ಹಲವಾರು ಆಚರಣೆಗಳ ಬಗ್ಗೆ ಶರಣರು ತಮ್ಮ ವಚನಗಳಲ್ಲಿ ಟೀಕಿಸಿದ್ದಾರೆ. ಅದಲ್ಲದೇ ಭಕ್ತಿಯ ಹೆಸರಿನಲ್ಲಿ ಮಾಡುವ ಬಲಿದಾನ ಕುರಿತು ಕಟುವಾಗಿ ಟೀಕಿಸಿದ್ದಾರೆ.
ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ,

**ಕೆರೆ ಬಾವಿ ಹೂಗಿಡುಮರಂಗಳಲ್ಲಿ, ಗ್ರಾಮ ಮಧ್ಯಗಳಲ್ಲಿ, ಚೌಪಥ**
**ಪಟ್ಟಣಪ್ರವೇಶದಲ್ಲಿ,**
**ಹಿರಿಯಾಲದ ಮರದಲ್ಲಿ ಮನೆಯ ಮಾಡಿ, ಕರೆವೆಮ್ಮೆಯ,**

**ಹಸುಗೂಸು ಬಸುರಿ ಬಾಣತಿ ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ,**
**ತಿರಿದುಂಬ,**
**ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ ಕಾಳಯ್ಯ ಮಾರಯ್ಯ**
**ದೂಳಯ್ಯ ಕೇತಯ್ಯಗಳೆಂಬ**
**ನೂರು ಮಡಕೆಗೆ ನಮ್ಮ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೆ?**[8]

ಮೈಲಾರ, ಮಾಳಚಿ, ಜೋಕುಮಾರಮಾರಿ, ಕಾಳಿ, ದುರ್ಗಿ, ಚೌಡೇಶ್ವರಿ, ಪ್ರಕೃತಿಪೂಜೆ, ದೈವಿ ಆರಾಧನೆ, ಜಾನಪದ ಉತ್ಸವ, ಆಚರಣೆಗಳನ್ನು ಕುರಿತು ಈ ಮೇಲಿನ ವಚನ ತಿಳಿಸುತ್ತದೆ. ವಚನಸಂಸ್ಕೃತಿಯನ್ನು ಮುನ್ನಡೆಸಿದವರು ಜನಪದೀಯರೇ ಎಂಬುದರಲ್ಲಿ ಸಂಶಯವಿಲ್ಲ, ಆದರೆ ಅವರ ಮೂಲದಲ್ಲಿದ್ದ ಅಂಧಶ್ರದ್ಧೆಗಳನ್ನು ಪರಿಷ್ಕರಿಸುವ ಕೆಲಸ ವಚನ ಚಳುವಳಿಯ ಸಂದರ್ಭದಲ್ಲಾಯಿತು ಎಂಬುದು ಮುಖ್ಯವಾದ ಅಂಶ.

ಗ್ರಾಮೀಣ ಕಸುಬುಗಳು : ತಲೆತಲಾಂತರದಿಂದ ಬಂದ ಕುಟುಂಬದ ಕಸುಬುಗಳನ್ನೇ ಜನರು ಅನುಸರಿಸಿ ತಮ್ಮ ಬದುಕನ್ನು ಮುನ್ನಡೆಸುತ್ತಿದ್ದುದ್ದು 12ನೇ ಶತಮಾನದಲ್ಲಿ ಕಂಡು ಬರುತ್ತದೆ. ಒಕ್ಕಲುತನ, ಮಡಿವಾಳ, ಕ್ಷೌರಿಕ, ನೇಕಾರ, ಬಟ್ಟೆ ಹೊಲೆಯುವ ಸಿಂಪಿಗ, ಅಂಬಿಗ, ಬಡಗಿ, ಕರ್ಮಾರ, ಕುಂಬಾರ, ಗಾಣಿಗ, ದನಕಾಯುವಿಕೆ, ಕುರಿ ಸಾಕಣೆ, ಅಕ್ಕಸಾಲಿಗ, ಕಂಚುಗಾರಿಕೆ, ಚರ್ಮಗಾರಿಕೆ, ತಳವಾರಿಕೆ, ಕುಲಕರಣಿಕೆ, ಕಲ್ಲುಕುಟಿಕೆ, ಮೇದಾರಿಕೆ, ಮಾಲೆಗಾರ ಹೀಗೆ ಹತ್ತು ಹಲವಾರು ಕೌಶಲ್ಯಾಧಾರಿತ ವೃತ್ತಿಯನ್ನು ಗುರುತಿಸಬಹುದು. ಈ ಕಸುಬುಗಳೇ ಮುಂದೆ ಜಾತಿಗಳಾಗಿ ಗುರುತಿಸಿಕೊಂಡು, ಮೇಲ್ವರ್ಗದವರ ದೌರ್ಜನ್ಯದೊಂದಿಗೆ ತಮ್ಮಲ್ಲಿಯೇ ಕೀಳರಿಮೆಯನ್ನು ಬೆಳೆಸಿಕೊಂಡಿದ್ದರು. ಅದಲ್ಲದೇ ಸ್ತ್ರೀ–ಪುರುಷ ಭೇದವೂ ಸಹ ಹೆಚ್ಚು ನೆಲೆಸಿದ್ದಿತು, ಸ್ತ್ರೀಯನ್ನು ಎರಡನೆಯ ದರ್ಜೆಯವಳಾಗಿ ಕಾಣುವ ಪ್ರವೃತ್ತಿ ಜನಪದರಲ್ಲಿ ಮುಂದುವರೆದಿತ್ತು. ಅಂತಹ ಸಂಗತಿಗಳಿಗೆಲ್ಲಾ ವಚನಕಾರರು ತಮ್ಮದೇ ಧಾಟಿಯಲ್ಲಿ ಪ್ರತಿಕ್ರಿಯೆ ಕೊಟ್ಟರಲ್ಲದೇ ಆ ಭೇದವನ್ನು ಅಳಿಸಿಹಾಕಿ ಅದೊಂದು ಕಾಯಕ ಎಂಬ ಗೌರವವನ್ನು ತಂದುಕೊಟ್ಟರು. ಅದಕ್ಕೆ ಬಸವಣ್ಣನವರು ತಮ್ಮ ವಚನದಲ್ಲಿ ಸ್ತ್ರೀ–ಪುರುಷ ಸಮಾನತೆಯ ಬಗ್ಗೆ, ಕಾಯಕದ ಬಗ್ಗೆ, ಕುಲದ ಬಗ್ಗೆ ಮಾತನಾಡಿದ್ದಾರೆ.

**ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ**

**ಜಲ–ಬಿಂದುವಿನ ವ್ಯವಹಾರ ಒಂದೇ,**
**ಆಶೆಯಾಮಿಷರೋಷಹರುಷ ವಿಷಯಾದಿಗಳೆಲ್ಲಾ ಒಂದೇ.**
**ಏನನೋದಿ, ಏನ ಕೇಳಿ, ಏನು ಫಲ**
**ಕುಲಜನೆಂಬುದಕ್ಕೆ ಆವುದು ದೃಷ್ಟ**
**ಸಪ್ತಧಾತುಸಮಂ ಪಿಂಡಂ ಸಮಯೋನಿಸಮದ್ಭವಂ**
**ಆತ್ಮಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ಎಂದುದಾಗಿ,**
**ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ.**
**ಕರ್ಣದಲ್ಲಿ ಜನಿಸಿದರುಂಟೆ ಜಗದೊಳಗೆ**
**ಇದು ಕಾರಣ ಕೂಡಲಸಂಗಮದೇವಾ,**
**ಲಿಂಗಸ್ಥಲವನರಿದವನೆ ಕುಲಜನು.**[9]

**ಜನಪದ ಕಲೆಗಳು :** ಜನಪದರು ಹಲವಾರು ಕಲೆಯನ್ನು ರೂಢಿಸಿಕೊಂಡಿದ್ದರು. ಅವುಗಳನ್ನು ಬದಕಿನುದ್ದಕ್ಕೂ ಅಳವಡಿಸಿಕೊಂಡು ಅದನ್ನೇ ಜೀವನಯಾಪನೆಗಾಗಿ ಅನುಸರಿಸುತ್ತಿದ್ದರು. ಯಾವ ಮೇಲ್ವರ್ಗದವರು ಬೇಡವೆಂದು ತಿರಸ್ಕರಿಸಿದರೋ ಅದನ್ನು ಅಳವಡಿಸಿಕೊಂಡು ಸಾಮಾನ್ಯರು ಸ್ವಾಭಿಮಾನದ ಬದುಕನ್ನು ಕಟ್ಟಿಕೊಂಡರು. "ಜನಪದ ಕಲೆಗಳು, ಜನಪದ ಬದುಕು ಸಂಸ್ಕೃತಿಯ ಚೌಕಟ್ಟಿನಲ್ಲಿಯೇ ರೂಪುಗೊಂಡು ಬಂದವುಗಳು, ಕುಣಿಯುವುದು, ಹಾಡುವುದು, ಆದಿಮಾನವನ ಸಹಜಮೂಲ ಪ್ರವೃತ್ತಿಯಾಗಿದ್ದರೂ, ಅನಂತರದ ಎಲ್ಲ ಆಚರಣೆಗಳು ಧಾರ್ಮಿಕ ಆಚರಣೆಗೆ ಒಳಗಾಗಿ ಸ್ಪಷ್ಟ ಹಿನ್ನೆಲೆಯೊಡನೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡು ಕಲಾರೂಪವಾಗಿ ಬೆಳೆದುವು. ಪ್ರತಿಯೊಂದು ಜನಪದ ಕಲೆಗೂ ಸಂಪ್ರದಾಯಯದ ಸತ್ವಪೂರ್ಣ ಹಿನ್ನೆಲೆಯಿದೆ."10 ಗೊಂದಲಿಗರು, ಕರಪಾಲದವರು, ಲಾವಣಿಕಾರರು, ಬಯಲಾಟ, ವೇಷಗಾರರು, ಡೊಂಬರು, ಹಾವಾಡಿಗರು, ಚೌಡಿಕೆಯವರು ಇಂತಿವೆ ಜನಪದ ಕಲೆಗಳನ್ನು ಕಾಯಕದ ಮಟ್ಟಕ್ಕೇರಿಸಿ ಕಾಯಕವೇ ಕೈಲಾಸವೆಂದು ಸಾರಿದವರು ಕಲ್ಯಾಣದ ಶರಣರು. ಢಕ್ಕೆಯ ಮಾರಯ್ಯ, ಬಹುರೂಪಿ ಚೌಡಯ್ಯ, ಕಲಿಕೇತ ಜೊಮ್ಮಯ್ಯ, ವೀಣೆಯ ಸಕಲೇಶ ಮಾದರಸ, ಕಿನ್ನರಿ ಬ್ರಹ್ಮಯ್ಯ, ನಗೆಯ ಮಾರಿತಂದೆ ಜಾನಪದ ಕಲೆಯನ್ನು ಮೈಗೂಡಿಸಿಕೊಂಡು ಮುಂದುವರೆಸಿದ ಶರಣರಾಗಿದ್ದಾರೆ.

**ಭಾಷಿಕ ವಿಚಾರ :** ಜನಪದರು ಎಲ್ಲರಿಗೂ ಅರ್ಥವಾಗುವ ಮಾದರಿಯಲ್ಲಿ ಕಥೆ, ಕವನ, ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಅದು ಎಲ್ಲರಿಗೂ ಸುಲಭವಾಗಿದ್ದಿತು.

ಅದಲ್ಲದೇ 12ನೇ ಶತಮಾನವು ಹಲವು ಮನ್ವಂತರಗಳಿಗೆ ಸಾಕ್ಷಿಯಾದ ಕಾಲಘಟ್ಟ, ಮೊದಲೆನೆಯದು ಭಾಷಿಕ ಪರಿವರ್ತನೆ, ಜನಸಾಮಾನ್ಯರ ಚಳುವಳಿ. ಪಂಪ, ಪೊನ್ನ, ರನ್ನರಾದಿಯಾಗಿ ಬಳಸಿದುದು ಸಂಸ್ಕೃತ ಪ್ರಭಾವವನ್ನೊಳಗೊಂಡ ಹಳಗನ್ನಡ. ಈ ಕಾವ್ಯಗಳನ್ನು ಓದಿ ಅರಗಿಸಿಕೊಳ್ಳುವುದು ಸುಲಭದ ಸಂಗತಿಯಾಗಿರಲಿಲ್ಲ. ಅದಲ್ಲದೇ; ಅದು ಓದು ಬರಹ ಗೊತ್ತಿದ್ದವರಿಗೆ ಮಾತ್ರ ಸಾಧ್ಯವಿದ್ದ ಸಂಗತಿಯಾಗಿತ್ತು, ಅದು ಪಂಡಿತಮಾನ್ಯ ಪರಂಪರೆಯನ್ನು ಮಾತ್ರವೇ ಕೇಂದ್ರೀಕರಿಸಿದ್ದುದು ತಿಳಿದ ಸಂಗತಿ. ಹೀಗಿರುವಾಗ ಸಾಮಾನ್ಯ ಜನಪದರು, ಶಿಷ್ಟ ಪರಂಪರೆಯ ಸಾಹಿತ್ಯದಿಂದಲೂ, ಮೇಲ್ವರ್ಗದವರ ದೌರ್ಜನ್ಯದಿಂದಲೂ ಬಳಲಿದ್ದರು. ಅದೇ ಸಂದರ್ಭದಲ್ಲಿ ಉದಯವಾದುದೇ ಶರಣರ ಚಳುವಳಿ. ಅಲ್ಲಿ ಬಳಸಿದ ಭಾಷೆ ಸರಳಕನ್ನಡವಾದ್ದರಿಂದ ಅದಕ್ಕೆ ನಾಡಿನ ಮೂಲೆಮೂಲೆಯಿಂದ ವ್ಯಾಪಕವಾದ ಬೆಂಬಲ ದೊರೆಯಿತು ಅದೊಂದು ಯಶಸ್ವಿ ಸಂಗಮವಾಯಿತು. "ಸಾಮಾಜಿಕ ಹೊಣೆಗಾರಿಕೆಯಿರುವ ಯಾವ ಧರ್ಮವೂ ತನ್ನ ನಿಲುವುಗಳನ್ನು ಹಾಗೂ ವಿಚಾರಗಳನ್ನು ಆ ಧರ್ಮೀಯರ ಭಾಷೆ ಯಾವುದೋ ಅದರ ಮೂಲಕವೇ ಬಹುಸಂಖ್ಯಾತರಿಗೆ ತಿಳಿಯಪಡಿಸುತ್ತದೆ. ಹೀಗೆ ಮಾಡಿದ್ದು ಮೊದಲು ಬುದ್ಧ ಧರ್ಮ, ಅನಂತರ ಬಸವಧರ್ಮ ಎಂಬ ಕಲಬುರ್ಗಿ ಅವರ ಮಾತು ಅರ್ಥವತ್ತಾಗಿದೆ.

ವಚನಗಳ ಸರಳಭಾಷೆಗೆ ಹಲವಾರು ಉದಾಹರಣೆಗಳನ್ನು ಗಮನಿಸಬಹುದು. ಅಲ್ಲಮರು ಭಕ್ತ ಮತ್ತು ದೇವನ ಸಂಬಂಧವನ್ನು ಅರ್ಥೈಸಲು ಸುಲಭವಾದ ಮಾರ್ಗವನ್ನು ಆಯ್ಕೆ ಮಾಡಿಕೊಂಡು ಇಲ್ಲಿ ವಿವರಿಸಿದ್ದಾರೆ. ಈ ವಚನಕ್ಕೆ ಯಾವುದೇ ಟೀಕು, ವ್ಯಾಖ್ಯಾನದ ಅವಶ್ಯಕತೆಯೇ ಬರುವುದಿಲ್ಲ. ಆದುದರಿಂದ ವಚನಸಾಹಿತ್ಯ ಎಂದರೆ ಜನಸಾಮಾನ್ಯರ ಸಾಹಿತ್ಯವೆಂದೇ ತಿಳಿಯಬೇಕು.

**ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ ?**
**ಬೆಟ್ಟದ ಮೇಲಣ ನೆಲ್ಲಿಯ ಕಾಯಿ ಸಮುದ್ರದೊಳಗಣ ಉಪ್ಪು,**
**ಎತ್ತಣಿಂದೆತ್ತ ಸಂಬಂಧವಯ್ಯಾ ?**
**ಗುಹೇಶ್ವರಲಿಂಗಕ್ಕೆಯೂ ನಮಗೆಯೂ ಎತ್ತಣಿಂದೆತ್ತ ಸಂಬಂಧವಯ್ಯಾ.**[11]

ವಚನದಂತೆಯೇ ಜನಪದರಲ್ಲಿಯೂ ನಾವು ಸರಳಸಾಹಿತ್ಯವನ್ನು ಕಾಣಬಹುದು. ಅವರು ತವರು ಮನೆಯ ಮೇಲಿನ ಪ್ರೇಮದ ಗೀತೆ, ಮಕ್ಕಳ ಗೀತೆ, ಜೀವನ ಮೌಲ್ಯ ತಿಳಿಸುವ ತ್ರಿಪದಿಗಳು ಅಸಂಖ್ಯಾತವಾಗಿ ಲಭ್ಯವಿವೆ. ಇದಷ್ಟೇ ಅಲ್ಲದೇ ಭಾರತೀಯ ಪರಂಪರೆಯ ಮಹಾಕಾವ್ಯಗಳು ಮೌಖಿಕ ಪರಂಪರೆಯ ಹಿನ್ನೆಲೆಯಿಂದಲೇ ಬೆಳೆದುಬಂದವುಗಳು ಎಂಬುದನ್ನು ನಾವಿಲ್ಲಿ ಸ್ಮರಿಸಬೇಕು.

ಒಟ್ಟಾರೆಯಾಗಿ ಜನಪದ ಮತ್ತು ವಚನ ಸಾಹಿತ್ಯವೆರಡನ್ನು ಸಾಂಸ್ಕೃತಿಕವಾಗಿ,

ಸಾಹಿತ್ಯಿಕವಾಗಿ ತೌಲನಿಕವಾಗಿ ವಿವೇಚಿಸಿದಾಗ, ವಚನ ಚಳುವಳಿಯಲ್ಲಿ ಕಾಣಿಸಿಕೊಂಡವರೆಲ್ಲರೂ ಜನಪದ ಪರಂಪರೆಯ ವಾರಸುದಾರರೇ ಆಗಿದ್ದಾರೆಂಬುದು ಗಮನಾರ್ಹ ಸಂಗತಿ. ವಚನಕಾರರು ಜನಪದರ ಮೌಢ್ಯವನ್ನು ಹೋಗಲಾಡಿಸಿ ಅವರ ಬದುಕಿಗೆ ಮತ್ತಷ್ಟು ಪರಿಷ್ಕರಣೆಯನ್ನು ತಂದುಕೊಟ್ಟವರಾಗಿದ್ದಾರೆ. ಯಾವುದೇ ಸಂಸ್ಕೃತಿ ಪರಂಪರೆ ದೀರ್ಘ ಕಾಲ ಉಳಿಯುವುದು ಅದನ್ನು ಅನುಸರಿಸುವವರು ಇದ್ದಾಗ ಮಾತ್ರ ಸಾಧ್ಯ. ಆ ಪರಂಪರೆಗೆ ಮುನ್ನುಡಿ ಹಾಡಿದವರು ಕಲ್ಯಾಣದ ಶರಣರು. ಯಾವುದೇ ಸಂಗತಿಯನ್ನು ಟೀಕೆ ಮಾಡಿ ಸುಮ್ಮನೆ ಕೂರುವ ಜಾಯಮಾನದವರಾಗದೇ ಅದನ್ನು ತಿದ್ದಿ ಅದಕ್ಕೊಂದು ಸುಂದರ ರೂಪು ಕೊಡುವ ಕಾಯಕವನ್ನು ಬಸವಾದಿ ಶರಣರು ಮಾಡಿದ್ದಾರೆ. ಆಧುನಿಕ ಕಾಲದಲ್ಲಿಯೂ ಎಷ್ಟೋ ಮೌಢ್ಯದ ಕೂಪದಲ್ಲಿರುವ ಜನರು ಬಳಲುತ್ತಿದ್ದಾರೆ. ವಚನಕಾರರು ಈ ಕಾಲಘಟ್ಟವನ್ನೂ ಮೀರಿಸುವಂತಹ ದೂರದೃಷ್ಟಿಯ ಚಿಂತನೆಯನ್ನು ಇರಿಸಿಕೊಂಡಿರುವುದು ಮೆಚ್ಚಿಗೆಯ ಸಂಗತಿ ಎಂದು ಗುರುತಿಸಬಹುದು. ಏನೇಯಾದರೂ ಜನಪದ ಪರಂಪರೆಯೇ ನಮ್ಮ ಬೇರು ಎಂಬುದನ್ನು ಮರೆಯುವಂತಿಲ್ಲ. ಅವರಿಂದಲೇ ಇವತ್ತು ಜಗತ್ತಿನ ಸಾಹಿತ್ಯ ರಾಶಿಗೆ ಪುನರ್ಜನ್ಮ ಸಿಕ್ಕಿತ್ತೆನ್ನುವ ಅಂಶವನ್ನು ನಾವು ಸದಾ ಸ್ಮರಿಸಬೇಕಾಗುತ್ತದೆ. ಜನಪದರೆಂದರೆ ಅವರು ನೆಲಮೂಲ ಸಂಸ್ಕೃತಿಯವರು ಎಂಬ ಅರಿವನ್ನು ಸದಾ ಸ್ಮರಣೆಯಲ್ಲಿರಿಸಿಕೊಳ್ಳಬೇಕು.

## ಕೊನೆ ಟಿಪ್ಪಣಿಗಳು

1. ಕನ್ನಡ ಸಾಹಿತ್ಯ ಪರಿಷತ್ತು : ಕವಿರಾಜಮಾರ್ಗದಲ್ಲಿ ಕನ್ನಡ ನಾಡಿನ ಬಣ್ಣನೆ ಭಾಗ, https://kannadasahithyaparishattu.in/?p=1358
2. ಡಾ. ಸಾ.ಶಿ. ಮರುಳಯ್ಯನ: ವಚನ ವೈಭವ ಪು.ಸಂ. 9 1982
3. ಬಸವನಾಳ ಶಿವಲಿಂಗಪ್ಪ : ಬಸವಣ್ಣನವರ ಷಟ್‌ಸ್ಥಲದ ವಚನಗಳು ಪು.ಸಂ.xxvii ಪೀಠಿಕಾ ಭಾಗ 1954
4. ಡಾ. ಎಂ. ಚಿದಾನಂದಮೂರ್ತಿ : ವಚನಸಾಹಿತ್ಯ, ಪು.ಸಂ. 8, 1975
5. ಅದೇ, ಪು.ಸಂ. 47
6. ಹಾ.ಮಾ. ನಾಯಕ : ಜಾನಪದ ಸ್ವರೂಪ, ಪು.ಸಂ. 22, 1975
7. ಸಮಗ್ರ ವಚನ ಸಂಪುಟ: 1 ವಚನದ ಸಂಖ್ಯೆ: 83, https://vachana.sanchaya.net/
8. ಅದೇ, ವಚನದ ಸಂಖ್ಯೆ: 556

9. ಅದೇ, ವಚನದ ಸಂಖ್ಯೆ: 590
10. ಡಿ.ಕೆ, ರಾಜೇಂದ್ರ : ಜಾನಪದ ಸಮಾಲೋಕ, ಪು.ಸಂ. 21, 1980
11. ಪೂರ್ವೋಕ್ತ 7, ಸಮಗ್ರ ವಚನಸಂಪುಟ 2, ವಚನದ ಸಂಖ್ಯೆ : 59

**ಪರಾಮರ್ಶನ ಗ್ರಂಥಗಳು :**

1. ಕಲಬುರ್ಗಿ ಎಂ.ಎಂ. ಪ್ರ.ಸಂ. : ಬಸವಯುಗದ ವಚನ ಮಹಾಸಂಪುಟ 1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016
2. ಚಂದ್ರಶೇಖರ ಟಿ.ಆರ್. : ವಚನಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಸಿವಿಜಿ ಪ್ರಕಾಶನ, ಬೆಂಗಳೂರು 2004
3. ಚಿದಾನಂದಮೂರ್ತಿ ಎಂ. : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ 5, ವಚನಸಾಹಿತ್ಯ, ಸ್ವಪ್ನ ಬುಕ್ ಹೌಸ್ ಬೆಂಗಳೂರು 2013
4. ಡಾ. ಮೃತ್ಯುಂಜಯ ಹೊರಕೇರಿ(ಅನು) : ರೈತ ಜಾನಪದ, ಜಾನಪದ ಅಕಾಡೆಮಿ, 1998
5. ಡಾ. ಜೀ. ಶಂ. ಪರಮಶಿವಯ್ಯ : ಜಾನಪದ ಗಂಗೋತ್ರಿ (ಮಾರ್ಚ್ 1994) ಸಂಪುಟ–6–ಸಂಚಿಕೆ–4, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1994
6. ಡಾ. ಸಿ.ಕೆ. ನಾವಲಗಿ : ವಚನ ಸಾಹಿತ್ಯ ಮತ್ತು ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1997

**ಡಾ. ಹೆಚ್.ಎಂ. ಮಲ್ಲಿಕಾರ್ಜುನ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಸ್ಟಡೀಸ್
ಬೇಗೂರು–ಕೊಪ್ಪ ರಸ್ತೆ, ಬೆಂಗಳೂರು 560083
mallikarjunahm2012@gmail.com

# ಕುವೆಂಪು ಅವರ ನಾಟಕಗಳು, ಪರಂಪರೆ – ಆಧುನಿಕತೆ : ಅನುಸಂಧಾನ

¤ ಡಾ. ಮೀನಾಕ್ಷಿ

ಭಾರತೀಯ ಸಾಹಿತ್ಯವು ಸಾವಿರಾರು ವರ್ಷಗಳ ಸಾಹಿತ್ಯ ಸರಸ್ವತಿಯ ಕಾಣ್ಕೆಯಿಂದ ಉಜ್ವಲವಾದ ಹೆಜ್ಜೆಯನ್ನಿರಿಸಿಕೊಂಡು ಶೋಭಾಯಮಾನವಾಗಿ ಪ್ರಪಂಚದಾದ್ಯಂತ ಶ್ರೇಷ್ಠ ಸ್ಥಾನವನ್ನು ಅಲಂಕರಿಸಿದೆ. ಪಾಶ್ಚಾತ್ಯ ಜಗತ್ತಿನ ಮಹಾಕಾವ್ಯಗಳೆನ್ನಿಸಿದ ಇಲಿಯಡ್, ಈನಿಯಡ್, ಡಿವೈನ್ ಕಾಮಿಡಿ, ಒಡೆಸ್ಸಿ ಇವುಗಳಲ್ಲಿ ಮಾನವ ಜಗತ್ತಿನ ಸಂಘರ್ಷವೇ ಮೂಡಿಬಂದಿದೆ. ಭಾರತೀಯ ಮಹಾಕಾವ್ಯಗಳೆನ್ನಿಸಿದ ರಾಮಾಯಣ ಮತ್ತು ಮಹಾಭಾರತವು ಮೊದಲಿಗೆ ಜಾನಪದರಿಂದ ಬಾಯಿಂದ ಬಾಯಿಗೆ ಹೇಳಲ್ಪಟ್ಟು ನಿರ್ದಿಷ್ಟ ಕಾಲಘಟ್ಟದಲ್ಲಿ ಅಕ್ಷರದ ರೂಪವನ್ನು ಪಡೆದುಕೊಂಡಿವೆ. ಈ ಮಾತು ಪಾಶ್ಚಾತ್ಯ ಮಹಾಕಾವ್ಯಗಳಿಗೂ ಅನ್ವಯಿಸುತ್ತದೆ.

ಮಹಾಕಾವ್ಯವು ಭಾರತದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಭಾಷೆಯಲ್ಲಿಯೂ ಪ್ರಾದೇಶಿಕ ಸೊಗಡಿಗೆ ಅನುಗುಣವಾಗಿ ರಚನೆಯಾಗಿರುವುದನ್ನು, ಅಂತೆಯೇ ಜಾನಪದ ಪರಂಪರೆಯಲ್ಲಿ ಉಳಿದುಕೊಂಡಿರುವುದನ್ನು ಗಮನಿಸಬೇಕು. ಭಾರತೀಯ ಸಾಹಿತ್ಯವೆಂದರೆ ಸಂಸ್ಕೃತವೊಂದನ್ನೇ ಪರಿಗಣಿಸುವಂತಿಲ್ಲ, ಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದ ಲಿಪಿ ಇರುವ ಮತ್ತು ಲಿಪಿ ಇರದ ಭಾಷೆಯೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ಉನ್ನತ ಸ್ಥಾನವನ್ನು ಅಲಂಕರಿಸಿದವರು ಶ್ರೇಷ್ಠರಾಗುವುದಿಲ್ಲ ಬದಲಿಗೆ ಶ್ರೇಷ್ಠ ಆಲೋಚನೆ ಮತ್ತು ಕ್ರಿಯೆಗಳಿಂದ ಶ್ರೇಷ್ಠರಾಗುತ್ತಾರೆ. ಆ ನಿಟ್ಟಿನಲ್ಲಿ ಮಹಾಭಾರತದಲ್ಲಿನ ದುರ್ಯೋಧನ ಉನ್ನತಸ್ಥಾನದಲ್ಲಿ ಕುಳಿತಿದ್ದರೂ ಪಾಂಡವರ ಮೇಲಿನ ಹಗೆ ಹಾಗೂ ದ್ರೌಪದಿಯ ಅಪಮಾನದಿಂದ ಸಣ್ಣವನೆನ್ನಿಸಿಕೊಂಡನು, ಹಾಗೇ ರಾಮಾಯಣದಲ್ಲಿ ಶ್ರೇಷ್ಠ ಶಿವಭಕ್ತನೆನ್ನಿಸಿದ ರಾವಣನು ರಾಮನ ಸತಿ ಸೀತೆಗೆ ಮೋಹಗೊಂಡು ತನ್ನ ಅಂತ್ಯವನ್ನು ಕಂಡನು.

ಮಹಾಕಾವ್ಯಗಳ ಸಂಘರ್ಷವು ಮೌಲ್ಯ ಪ್ರತಿಪಾದನೆಗಾಗಿ ನಡೆದಿದೆ ಎಂದು ತೋರುತ್ತದೆಯಾದರೂ, ಅದೇ ರಾಮಾಯಣದಲ್ಲಿ ಶಂಭೂಕನನ್ನು ರಾಮನು ಕೊಂದ ಪ್ರಸಂಗ, ತನ್ನ ಮಡದಿಯ ಮೇಲೆ ಅನುಮಾನ ವ್ಯಕ್ತಪಡಿಸಿ ಆಕೆಯನ್ನು ಅಗ್ನಿಪ್ರವೇಶ ಮಾಡಿಸಿ ಒಪ್ಪಿಕೊಂಡ ಸಂಗತಿ, ಅದಲ್ಲದೇ ಆಕೆಯನ್ನು ಕಾಡಿನಲ್ಲಿ ಬಿಟ್ಟುಬಂದ ವಿಚಾರವೆಲ್ಲವೂ ಮೌಲ್ಯಗಳ ಅಧಃಪತನವೆನ್ನಿಸುತ್ತದೆ. ಮಹಾಭಾರತದಲ್ಲಿ ಏಕಲವ್ಯನು ದ್ರೋಣಾಚಾರ್ಯರನ್ನು ಮನಸ್ಸಿನಲ್ಲಿಯೇ ಗುರುವೆಂದು ಸ್ವೀಕರಿಸಿ ಶ್ರೇಷ್ಠ ಬಿಲ್ವಿದ್ಯೆ ಚತುರನಾಗುತ್ತಾನೆ. ಈ ಸಂದರ್ಭದಲ್ಲಿ ಅರ್ಜುನ ಆತನ ಪ್ರತಿಭೆಗೆ ಮುಳಿದು ಆತನ ಹೆಬ್ಬೆರಳನ್ನು ಪಡೆದುಕೊಳ್ಳುವಂತೆ ದ್ರೋಣರನ್ನು ಪ್ರೇರೇಪಿಸಿದ ಸಂಗತಿ, ಕರ್ಣನನ್ನು ಸೂತಪುತ್ರನೆಂದು ಜರಿದ ವಿಚಾರ ಎಲ್ಲವೂ ಮಾನವೀಯ ಮೌಲ್ಯಕ್ಕೆ ವಿರುದ್ಧವಾಗಿಯೆ ನಡೆದಿವೆ.

ಆ ಕಾಲಘಟ್ಟವು ವೇದೋಪನಿಷತ್ತುಗಳಿಂದ ಆವೃತವಾಗಿದ್ದರು. ಜನಸಾಮಾನ್ಯರ ಬದುಕು ದುಸ್ತರವಾಗಿತ್ತೆನ್ನುವುದು ವೇದ್ಯವಾಗುತ್ತದೆ. ಪುರೋಹಿತಶಾಹಿಗಳ ಮೇಲ್ಪಂಕ್ತಿಯು ನಡೆದಿತ್ತೆನ್ನುವುದನ್ನು ಮರೆಯುವಂತಿಲ್ಲ. ಸ್ತ್ರೀ ಶೋಷಣೆಯು ನಡೆದುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಈ ವಿಚಾರಗಳಿವೆ ಎಂದ ಮಾತ್ರಕ್ಕೆ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಶೋಷಣೆಯೇ ತುಂಬಿದೆ ಎಂದರ್ಥವಲ್ಲ. ಅದರಲ್ಲಿ ಮೌಲ್ಯವೂ ಅಡಗಿದೆ. ಕುವೆಂಪು ಅವರು ಈ ಸಾಹಿತ್ಯ ಪರಂಪರೆಯನ್ನೆಲ್ಲಾ ಸಮೀಕ್ಷಿಸಿ ಮಾಡಿದುದೇನೆಂದರೆ ಬೇಡವಾದುದನ್ನೆಲ್ಲಾ ತೆಗೆದುಹಾಕಿ ಅದಕ್ಕೊಂದು ಸುವರ್ಣದ ಚೌಕಟ್ಟನ್ನು ನೀಡಿ ಪರಿಷ್ಕರಿಸಿದ್ದಾರೆ. ಈ ಪ್ರಕ್ರಿಯೆಯು 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕು. ಆಧುನಿಕ ಶಿಕ್ಷಣದ ಪರಿಚಯವಾದ ವಿದ್ಯಾವಂತ ಕುವೆಂಪು ಅವರಿಗೆ ಬ್ರಿಟಿಷರ ದಾಸ್ಯ ಮತ್ತು ಈ ನೆಲದ ಮೇಲ್ವರ್ಗದವರು ತಳಸಮುದಾಯದವರನ್ನು ನಿಕೃಷ್ಟವಾಗಿ ಕಾಣುತ್ತಿದ್ದ ರೀತಿಯು ಚಿಂತನಶೀಲರಾಗುವಂತೆ ಮಾಡಿ ವೈಚಾರಿಕ ಬರಹಗಾರರನ್ನಾಗಿ ರೂಪಿಸಿತು.

ಕುವೆಂಪು ಅವರು ಯಮನಸೋಲು, ಜಲಗಾರ, ಬಿರುಗಾಳಿ, ವಾಲ್ಮೀಕಿಯ ಭಾಗ್ಯ, ಮಹಾರಾತ್ರಿ, ಸ್ಮಶಾನ ಕುರುಕ್ಷೇತ್ರ, ರಕ್ತಾಕ್ಷಿ, ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್, ಬಲಿದಾನ, ಚಂದ್ರಹಾಸ, ಕಾನೀನ ಎಂಬ ನಾಟಕಗಳನ್ನು ರಚಿಸಿದ್ದಾರೆ.

ಕುವೆಂಪು ಅವರು ತಮ್ಮ ನಾಟಕಗಳಲ್ಲಿ ಜಾತಿ, ಧರ್ಮ, ಮೌಢ್ಯತೆಯ ಹೆಸರಿನಲ್ಲಿ ನಡೆಯುವ ಶೋಷಣೆಯ ವಿರುದ್ಧ ಧನಿ ಎತ್ತಿದ್ದಾರೆ. ವಸ್ತು ಹಳೆಯದಾದರು ನವನವೀನವಾದ ಆಲೋಚನ ಲಹರಿ ಓದುಗರನ್ನು ಸೆಳೆಯುತ್ತದೆ. ಮೌಢ್ಯತೆಯನ್ನು

ದಿಕ್ಕರಿಸಿ ಅದಕ್ಕೆ ತಕ್ಕುದಾದ ಸನ್ನಿವೇಶವನ್ನು ನಿರ್ಮಾಣ ಮಾಡಿರುವ ಅವರ ಬರವಣಿಗೆಯ ಶೈಲಿ ವಿಶೇಷವಾದುದಾಗಿದೆ. ಅವರಿಗೆ ಅಲಕ್ಷಿತ ಸಮುದಾಯದ ಮೇಲೆ ಇದ್ದ ಒಲವು ಅವರ ಕೃತಿಗಳುದ್ದಕ್ಕೂ ಗೋಚರವಾಗುತ್ತದೆ. "ಶ್ರೀಸಾಮಾನ್ಯರಲ್ಲಿ ಮತದ ಮೌಢ್ಯತೆಗಳು ಮಾತ್ರವಲ್ಲದೆ, ಮತಭಾವದ ಮೌಢ್ಯತೆಯೂ ತೊಲಗಬೇಕು. ವರ್ಣಾಶ್ರಮ, ಜಾತಿಪದ್ಧತಿ, ಮೇಲು–ಕೀಳು ಭಾವನೆ ಮುಂತಾದ ಮಧ್ಯಯುಗದ ಶೂದ್ರ ಕರಾಳ ತತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು. ಮತ ಮತ್ತು ರಾಜಕೀಯಗಳ ಅಂಧಕಾರವು ವಿಜ್ಞಾನ ಮತ್ತು ಆಧ್ಯಾತ್ಮಗಳ ಸುರ್ಯೋದಯಕ್ಕೆ ಶರಣಾಗಿ, ತೊಲಗಿ, ಸರ್ವೋದಯದ ಕ್ರಾಂತಿ ಹಬ್ಬಿ, ಶಾಂತಿ ಮೈದೋರಲಿ ಎಂಬ ಅಭೀಪ್ಸೆ ಸರ್ವರ ಹೃದಯದ ಪ್ರಾರ್ಥನೆಯಾಗಿ, ಅತೀತ ಕಲ್ಯಾಣ ಶಕ್ತಿಗಳ ಅನಾವರಣಕ್ಕೆ ಹಾದಿಯಾಗಲಿ ಎಂದು ಹಾರೈಸುತ್ತೇನೆ."[1] ಕುವೆಂಪು ಅವರ ಈ ಮಾತುಗಳನ್ನು ಗಮನಿಸಿದಾಗ ಅವರಿಗಿದ್ದ ಸಮಾಜದ ಬಗ್ಗೆಗಿನ ಹಪಹಪಿಕೆ ತಿಳಿಯುತ್ತದೆ. ಅವರು ಯಾವುದೇ ರೀತಿಯ ಧರ್ಮಾಂಧತೆ , ರಾಜಕೀಯದ ಕಪಿಮುಷ್ಟಿಗೆ ಸಿಲುಕಿದವರಲ್ಲ. ಪರಿಶುದ್ಧವಾದ ಮನಸ್ಸಿನಿಂದಲೇ ಸಮಾಜದ ಎಲ್ಲವನ್ನು ಒಳಗೊಂಡಂತೆ ಸಮಾನ ಚಿತ್ತದಿಂದ ಕಂಡವರು. ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ವಸ್ತುವಾಗಿ ಆಯ್ಕೆಮಾಡಿಕೊಂಡು ಜಲಗಾರ ನಾಟಕವನ್ನು ರಚಿಸಿದ್ದಾರೆ.

ಜಲಗಾರ ನಾಟಕದ ಮುಖ್ಯ ಪಾತ್ರದಾರಿ ಶೂದ್ರ. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯದ ವ್ಯಕ್ತಿ. ಆತನಿಗೆ ಕಾಯಕದಲ್ಲಿ ನಿಷ್ಠೆಯಿತ್ತು. "ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿಯನು ವೇದಗಳೆಲ್ಲಾ ನೆಗೆನೆಗೆದರಿಯದ ಅಂತ್ಯದ ಹಾದಿಯನು"[2] ಮತ್ತು ಕರ್ಮಾವಾರಾಧನೆ, ಸೇವೆಯೇ ಪೂಜೆ. ನನ್ನ ಭಾಗಕ್ಕೆ ಪೊರಕೆ ಆರತಿ. ಗುಡಿಸುವುದೆ ನನ್ನ ದೇವರ ಪೂಜೆ"[3] ಕಾಯಕದಲ್ಲಿ ತೊಡಗುವ ಮೂಲಕ ದೇವರನ್ನು ಕಾಣುವ ಪರಿಕಲ್ಪನೆ ಆತನದಾಗಿತ್ತು ಇಲ್ಲಿ ಜಲಗಾರನ ಮೂಲಕ ಕುವೆಂಪು ಅವರಿಗೆ ಕಾಯಕದ ಬಗ್ಗೆ ಇದ್ದ ನಿಲುವು ಸ್ಪಷ್ಟವಾಗುತ್ತದೆ. ನಾವು ಮಾಡುವಂತಹ ಕಾಯಕದ ಮೇಲೆ ಶ್ರದ್ಧೆ, ನಿಷ್ಠೆ, ಪ್ರಮಾಣಿಕತೆ ಇರಬೇಕು ಅದೇ ದೇವರನ್ನು ಕಾಣುವ ಮಾರ್ಗ ಎಂಬುದು ಅಂತರ್ಗತವಾಗುತ್ತದೆ.

ಕುವೆಂಪು ಅವರು ಪರಂಪರೆಯನ್ನು ಗತಕಾಲದ ಚರಿತೆ ಎಂಬುದಾಗಿ ಮಾತ್ರವೇ ನೋಡಿಲ್ಲ. ಆ ಪರಂಪರೆಯ ನ್ಯೂನ್ಯತೆಯನ್ನು ಪ್ರಶ್ನೆಮಾಡುವುದಲ್ಲದೆ ಅದನ್ನು ಪುನರ್ ನವೀಕರಣಗೊಳಿಸುವ ಪ್ರಕ್ರಿಯೆಗೆ ಮುನ್ನುಡಿ ಹಾಡಿದ್ದಾರೆ. ಈ ನಾಟಕದಲ್ಲಿ ಬರುವ ಪೂರ್ವ ಪಾತ್ರದಾರಿ, ಗಾನದೇವಿಯು ಜಲಗಾರನಿಗೆ ಒಲಿಯುತ್ತಾಳೆಯೇ?, ಶೂದ್ರರಲ್ಲಿ ಕವಿಗಳು ಉದಯಿಸುತ್ತಾರೆಯೇ?, ಪಂಡಿತರು

ಜನಿಸುವರೇ? ಎಂಬುದಾಗಿ ಪ್ರಶ್ನಿಸುತ್ತಾನೆ. ಇದು ಪೂರ್ವಾಗ್ರಹಪೀಡಿತ ಮನಸ್ಸುಗಳಿಗೆ ಹಿಡಿದ ಕನ್ನಡಿಯಂತಿದೆ. ಇದಕ್ಕೆ ಪ್ರತಿಯಾಗಿ ಜಲಗಾರನಾಡುವ ಮಾತುಗಳು ಕುವೆಂಪು ಅವರ ಹೃದಯ ವೈಶಾಲ್ಯತೆಯನ್ನು ತೆರೆದಿಡುತ್ತದೆ. "ಎದೆಯೊಲವೆ ವರ ಧರ್ಮಶಾಸ್ತ್ರ, ಭಕ್ತಿಯೆ ದಿವ್ಯಾತ್ಮ ಯಜ್ಞ, ಎದೆಯ ಮಣಿಯೇ ಯಜ್ಞಶಾಲೆ! ನಲ್ವಾತುಗಲೆ ಮಂತ್ರಘೋಷ; ನೀತಿಯೇ ಪರಮವೇದ"[4] ಮಾನವೀಯತೆ ಮತ್ತು ನೈತಿಕತೆಯೇ ಮನುಷ್ಯ ಜೀವನದ ಪರಮೋಚ್ಚ ಧ್ಯೇಯವೆಂಬುದು ಇಲ್ಲಿ ಅನಾವರಣವಾಗಿದೆ.

ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ, ಅನ್ಯಾಯ, ಮೌಢ್ಯತೆ, ಅಂಧಶ್ರದ್ಧೆಯು ಸಮಾಜದಲ್ಲಿ ಅಸಮಾನತೆಯನ್ನು ಉಂಟುಮಾಡಿ, ಶಾಂತಿಯನ್ನು ಕದಡುತ್ತಿದೆ ಎಂಬುದು ಈ ನಾಟಕದ ಮೂಲಕ ತಿಳಿಯುತ್ತದೆ. ಜೊತೆಗೆ ದೇವರ ಪರಿಕಲ್ಪನೆಯ ಸ್ಪಷ್ಟತೆ ಇದೆ. "ಕರ್ಪೂರದಾರತಿಯ ಬೆಳಗುವರು ವಿಗ್ರಹದ ಮುಂದೆತಲೆಬಾಗಿ ಸತ್ತ ದೇವರ ಪೂಜೆ ಮಾಡುವರು. ಜೀವದ ದರಿದ್ರ ನಾರಾಯಣರ ಸೇವೆಯಲ್ಲವೆ ಪರಮಪೂಜೆ"[5] ರಸ್ತೆಯನ್ನು ಸ್ವಚ್ಛಗೊಳಿಸುವವನ ಎದೆಯಲ್ಲಿ ನೆಲೆಸಿದ್ದೇನೆ, ನೇಗಿಲಯೋಗಿಯ ಹೃದಯದಲ್ಲಿ ನೆಲೆಸಿದ್ದೇನೆ, ಎಂದು ಹೇಳುವ ಮೂಲಕ ಶಿವನು ದೇವರ ಪರಿಕಲ್ಪನೆಯ ಆಯಾಮವನ್ನು ಸ್ಪಷ್ಟಪಡಿಸಿದ್ದಾನೆ. ಇಲ್ಲಿ ಕುವೆಂಪು ಅವರ ಪೂರ್ಣದೃಷ್ಟಿ ಗೋಚರವಾಗುತ್ತದೆ. ಸಮಾಜದ ಪ್ರತಿಯೊಬ್ಬರು ಕೂಡ ಮುಖ್ಯರಾದವರೆ ಮತ್ತು ಅವರ ಕಾಯಕ ಶ್ರದ್ಧೆಯೆಂಬುದು ಮುಖ್ಯವಾದುದು ಎಂಬುದು ತಿಳಿಯುತ್ತದೆ.

ಪೌರಾಣಿಕ ಕಥೆಯ ವಸ್ತುವನ್ನು ಆಯ್ಕೆಮಾಡಿಕೊಂಡು ರಚಿಸಿರುವ ನಾಟಕ ಯಮನಸೋಲು. ಭಾರತೀಯ ಪರಂಪರೆಯಲ್ಲಿ ಸ್ತ್ರೀ ಮಾದರಿಯು ಒಂದು ಚೌಕಟ್ಟಿನಂತೆ ನಿರ್ಮಾಣವಾಗಿದೆ. ಸತ್ಯ, ನ್ಯಾಯ, ನೀತಿ, ನಿಷ್ಠೆ, ಪ್ರಾಮಾಣಿಕತೆ, ಪ್ರಜ್ಞಾವಂತಿಕೆ, ಸಾಹಸೀಯ ಪ್ರವೃತ್ತಿ, ಪತಿಯೇ ದೈವವೆಂಬ ಮನೋಭಾವ ಸತಿಯಲ್ಲಿರಬೇಕೆಂಬುದನ್ನು ತಿಳಿಸುತ್ತದೆ. ಇದೇ ರೀತಿ ಕುವೆಂಪು ಅವರ ಯಮನಸೋಲು ನಾಟಕದಲ್ಲಿನ ಸಾವಿತ್ರಿ ಪಾತ್ರ ಚಿತ್ರಿತವಾಗಿದೆ. ಆದರೆ ಅವರು ಸಿದ್ಧಮಾದರಿಯ ಹೆಣ್ಣಿನ ಪಾತ್ರವನ್ನಷ್ಟೆ ಬಿಂಬಿಸಿಲ್ಲ, ಪ್ರೀತಿಗಿರುವ ಶಕ್ತಿ ಸಾಮರ್ಥ್ಯದ ಅನನ್ಯತೆಯನ್ನು ಚಿತ್ರಿಸಿದ್ದಾರೆ. "ಪ್ರೇಮಾನುರಾಗವು ಧರ್ಮವನ್ನು ಮೀರಿರುವುದೆಂಬುದನ್ನು ತೋರಿಸುವೆ; ಸಾಧಿಸುವೆ"[6] ಈ ಮಾತುಗಳು ಪ್ರೇಮಾನುರಾಗಕ್ಕೆ ಕೈಲಾಸವನ್ನು ತಲುಪುವ ಮತ್ತು ಮುಕ್ತಿಯನ್ನು ಲಪಡೆಯುವ ಶಕ್ತಿಯಿದೆ ಎಂಬುದನ್ನು ಸಾರುತ್ತದೆ. ನಿಯಮಗಳು ಶುದ್ಧವಾದ ದಿವ್ಯಾನುರಾಗಕ್ಕೆ ಸೇವಕರು ಎಂಬ ಕುವೆಂಪು ಅವರ ಮಾತುಗಳು ಒಲವಿನ ಬಗ್ಗೆ ಅವರಿಗಿದ್ದ ಗೌರವ ಗೋಚರವಾಗುತ್ತದೆ.

ಮಹಾಭಾರತದ ವಸ್ತುವನ್ನೊಳಗೊಂಡ ನಾಟಕ ಸ್ಮಶಾನ ಕುರುಕ್ಷೇತ್ರ.

ಯುದ್ಧದಿಂದ ಉಂಟಾದ ಭೀಕರ ದೃಶ್ಯಾವಳಿಯನ್ನು ಇಲ್ಲಿ ಕಾಣಬಹುದು. ಯಾರದೋ ಹೆಣ್ಣು, ಹೊನ್ನು, ಮಣ್ಣಿನ ಆಸೆಗೆ, ಪ್ರತಿಷ್ಠೆಗೆ ಹಲವಾರು ಜನ ಬಲಿಯಾಗುವುದು ಯುದ್ಧಗಳಲ್ಲಿ ಗಮನಿಸಬಹುದಾದ ಸಂಗತಿ. ಮಹಾಭಾರತ ಯುದ್ಧದಲ್ಲಿ ಗೆಲುವು, ಸಿಂಹಾಸನ, ಅಧಿಕಾರ ಮಾತ್ರವೆ ಮುಖ್ಯವಾಗಿ ಬೆಳಕಿಗೆ ಬರುತ್ತವೆ. ಆದರೆ ಆ ಯುದ್ಧದ ಹಿಂದೆ ಹಲವಾರು ಕಾಣದ ಕೈಗಳ ಆಕ್ರಂದನ ಮನೆ ಮಾಡಿರುತ್ತದೆ. ಕುರುಕ್ಷೇತ್ರಯುದ್ಧದಲ್ಲಿ ಉಂಟಾದ ಅಪಾರ ಜೀವ ಹಾನಿಯಿಂದಾಗಿ ಜನಸಾಮಾನ್ಯರು ತತ್ತರಿಸುವಂತಾಯಿತು. ಮಕ್ಕಳನ್ನು ಕಳೆದುಕೊಂಡ ತಂದೆ ತಾಯಿಗಳು, ತಂದೆಯನ್ನು ಕಳೆದುಕೊಂಡ ಮಕ್ಕಳು, ಗಂಡನನ್ನು ಕಳೆದುಕೊಂಡ ಸ್ತ್ರೀಯರು, ಹೀಗೆ ನಾನಾ ರೀತಿಯಲ್ಲಿ ಜನರು ರೋಧಿಸುವಂಥಾಯಿತು. ಈ ವಿಚಾರಗಳನ್ನಿಟ್ಟುಕೊಂಡು ಕುವೆಂಪು ಅವರು ರಚಿಸಿರುವ ನಾಟಕ ಸ್ಮಶಾನ ಕುರುಕ್ಷೇತ್ರ.

ದ್ವಾಪರ ಯುಗ ಕಳೆದು ಕಲಿಯುಗ ಪ್ರಾಪ್ತಿಯಾಗುವ ಸಂದರ್ಭ ವಿಭಿನ್ನವಾಗಿದೆ. ಅತಿರಥ ಮಹಾರಥರ ದುಃಖ ಮಾತ್ರವೇ ಮುಖ್ಯವಾಗದೆ ಜನಸಾಮಾನ್ಯರ ಸ್ವಾರ್ಥ ರಹಿತ ತ್ಯಾಗ, ದುಃಖ, ಸಂಕಟ ಮತ್ಸರವೇ ಇಲ್ಲದೆ ಕಾದಾಡಿ ಮರಣವನ್ನಪ್ಪಿದ ವೀರರು, ಅವರ ಒಡನಾಡಿಗಳ ಗೋಳು ಮುಂತಾದವು ವಿಷಾದವನ್ನುಂಟು ಮಾಡುತ್ತವೆ. "ಶ್ರೀಮಂತರ ಕಲಹಾಗ್ನಿಗೆ ಯಜ್ಞಪಶುಗಳೆಮ್ಮಂತಹ ದರಿದ್ರರಲ್ತೆ?"[7] ಎಂಬ ಮಾತು ತಾವು ಮಾಡದ ತಪ್ಪಿಗೆ ಶಿಕ್ಷೆ ಪಡೆಯುವ ಸರಧಿ ಶೋಚನೀಯವಾದುದು ಎಂಬುದನ್ನು ಬಿಂಬಿಸುತ್ತದೆ.

ಸೈನಿಕ ನೊಬ್ಬನಿಗೆ ಜೀವ ಹೋಗುವ ಸಮಯದಲ್ಲಿ ಧರ್ಮರಾಯನು ನೀರು ಕೊಡುತ್ತಾನೆ. ಆಗ ಭೀಮನು ಯಾರ ಪಡೆಯ ಸೈನಿಕ ಎಂಬುದನ್ನು ಕೇಳಿ ನೀರು ಕೊಡು ಎಂದು ಹೇಳುತ್ತಾನೆ. ಇದು ಯುದ್ಧ ಕಲಿಸಿರಬಹುದಾದ ನೋವು ಭೀಮನಲ್ಲಿ ಮರೆಯಾಗಿ ಗೋಚರವಾಗುತ್ತದೆ. ಆ ವೀರನು ಕೂಡ ತಾನು ಕೌರವ ಪಡೆಯವನೆಂದು ಹೇಳಿ, ಪಾಂಡವರು ನೀಡಿದ ನೀರು ಕುಡಿದು ಪ್ರಮಾದವೆಸಗಿದೆನೆಂದು ನೋವಿನಲ್ಲೇ ಮಡಿಯುವ ಸಂದರ್ಭ ಆಘಾತಕಾರಿಯಾದುದು. "ಎಲ್ಲ ದಾನಗಳು ಎಲ್ಲಾ ಧರ್ಮಗಳು ಕಡೆಗಿಲ್ಲಿಗೆ, ಎನ್ನ ಬಳಿಗೆ!"[8] ಎಂಬ ಕುವೆಂಪು ಅವರ ಈ ಮಾತು ಪರಂಪರೆಯ ಯಾವೆಲ್ಲ ಸಂಗತಿಗಳು ಮನುಷ್ಯನನ್ನು ತನ್ನ ಹಿಡಿತದಲ್ಲಿ ಹಿಡಿತದಲ್ಲಿಟ್ಟುಕೊಂಡಿದಿಯೋ ಅದೆಲ್ಲವನ್ನು ಸಮಾಪ್ತಿಗೊಳಿಸುವ ರೀತಿಯಲ್ಲಿ ಮೂಡಿಬಂದಿದೆ.

ಕುವೆಂಪು ಅವರ ಮತ್ತೊಂದು ನಾಟಕ ಬೆರಳ್‌ಗೆ ಕೊರಳ್. ಈ ನಾಟಕದಲ್ಲಿ ಬರುವ ಏಕಲವ್ಯನ ಪಾತ್ರ ಶೋಷಿತ ವರ್ಗದ ಕಾರಣಕ್ಕಾಗಿ ವಿದ್ಯೆಯಿಂದ

ವಂಚಿತನಾಗುವ ಮತ್ತು ಸ್ವಪ್ರತಿಭೆಯಿಂದ ವಿದ್ಯೆ ಕಲಿತರೂ ಸಹ ಆತನ ಬೆರಳನ್ನು ಕಾಣಿಕೆಯಾಗಿ ಪಡೆದು ಅವನಿಗೆ ಮೋಸ ಮಾಡುವ ಕರಾಳತೆಯನ್ನು ತೆರೆದಿಡುತ್ತದೆ. ಇದಕ್ಕೆ ಪ್ರತಿರೋಧಪಡಿಸುವ ಏಕಲವ್ಯನ ತಾಯಿಯ ಪಾತ್ರ ಕುವೆಂಪು ಅವರ ಆಲೋಚನಾ ಲಹರಿಯ ವಿಭಿನ್ನತೆಯನ್ನು ಭಿತ್ತರಿಸುತ್ತದೆ. "ಆಗ್ರೋ ಬಲಿ ನನ್ನ ಕಂದನ ಬೆರಳ್ ಬಲಿಯಕ್ಕೆ ಆ ಪಾಪಿಯ ಕೊರಳ್"[9] ಏಕಲವ್ಯನ ತಾಯಿಯ ಶಾಪಕ್ಕೆ ಗುರಿಯಾದ ದ್ರೋಣಾಚಾರ್ಯರ ಘಟನೆಯು ನೊಂದವರ ಸಂಕಟ ಎಷ್ಟು ಘೋರವಾದುದು ಮತ್ತು ಅದಕ್ಕೆ ಪ್ರತಿಕಾರ ತಂದೊಡ್ಡುವ ಸಂದರ್ಭ ಬರುತ್ತದೆ ಎಂಬ ವಿಚಾರ ವಿಶೇಷವಾಗಿದೆ.

ಬೆರಳ್ ಗೆ ಕೊರಳ್ ನಾಟಕದಂತೆಯೇ ಕಾನೀನ ನಾಟಕವೂ ಕೂಡ ಶೂದ್ರರಿಗೆ ವಿದ್ಯೆ ನಿಷಿದ್ಧ ಎಂಬುದರ ವಿರುದ್ಧ ದನಿಯೆತ್ತುತ್ತದೆ. ಕುವೆಂಪು ಅವರ ಪರಂಪರೆಯ ವಿರೋಧದ ನೆಲೆ ಏನೆಂಬುದನ್ನು ಈ ನಾಟಕ ಸ್ಪಷ್ಟಪಡಿಸುತ್ತದೆ. ಕುವೆಂಪು ಅವರು ಪುರೋಹಿತಶಾಹಿಯ ಶೋಷಣೆಯನ್ನು ತಿರಸ್ಕರಿಸಿ, ಜನರಲ್ಲಿ ಅರಿವು ಮೂಡಿಸಲು ಸದಾ ಕ್ರಿಯಾಶೀಲರಾಗಿರುತ್ತಿದ್ದರು. ಸಾಹಿತ್ಯ ಕೃಷಿಯ ಜೊತೆಗೆ ಹಳೆಯದರಲ್ಲಿರುವ ದೋಷಗಳನ್ನು ತಿರಸ್ಕರಿಸಿ, ವೈಚಾರಿಕ ಸಂಗತಿಗಳನ್ನು ಭಿತ್ತರಿಸುವ ಮೂಲಕ ಹೊಸ ಆಯಾಮವನ್ನು ಮತ್ತು ಆಲೋಚನಾ ಕ್ರಮವನ್ನು ಹುಟ್ಟುಹಾಕಿದ್ದಾರೆ.

ಈ ನಾಟಕದಲ್ಲಿ ಕರ್ಣನು, ಮೂಲಭಾರತದಲ್ಲಿ ತನ್ನ ವೇಷ ಬದಲಿಸಿಕೊಂಡು ಪರಶುರಾಮರ ಬಳಿ ವಿದ್ಯೆ ಕಲಿಯುವ ರೀತಿಯಲ್ಲಿ ಚಿತ್ರತವಾಗಿಲ್ಲ. ಕರ್ಣ ತನ್ನ ವಾಸ್ತವ ಸ್ಥಿತಿಯನ್ನು ನೇರವಾಗಿ ಪರಶುರಾಮರ ಮುಂದೆ ತೆರೆದಿಡುತ್ತಾನೆ. 'ಆಚಾರ್ಯ ದೇವೋಭವ' ಎಂಬ ಮಾತಿನಂತೆ ದೈವ ಸ್ವರೂಪಿಯಾದ ಗುರುವು ವಿದ್ಯಾರ್ಥಿಗಳನ್ನು ಯಾವುದೇ ರೀತಿಯ ತಾರತಮ್ಯ ಭಾವದಿಂದ ನೋಡದೆ, ಎಲ್ಲರಲ್ಲೂ ಸಮಾನತೆಯ ದೃಷ್ಟಿಕೋನವನ್ನು ಹೊಂದಿರಬೇಕು. ಅದರಂತೆ ಪರಶುರಾಮನು ಕರ್ಣನ ವ್ಯಕ್ತಿತ್ವವನ್ನು ಒಪ್ಪಿಕೊಳ್ಳುತ್ತಾನೆ ಕುಲ ಎನ್ನುವುದು ಜನರಲ್ಲಿ ಇರುವಂತಹುದಲ್ಲ ಗುಣದಲ್ಲಿರುವಂತಹುದು ಎಂಬಂತಹ ಮಾತುಗಳನ್ನಾಡುತ್ತಾನೆ. "ಯಾವನು ಸದಾ ಸತ್ಯವಾಡುವನೊ, ಅವನೆಲ್ಲಿಯೆ ಇರಲಿ, ಅವನಾರೆ ಆಗಿರಲಿ, ಬ್ರಾಹ್ಮಣನು!.. ನಿನ್ನ ಸಾಮರ್ಥ್ಯಕ್ಕೆ ಮೆಚ್ಚಿದೆನು. ನಾನರಿತ ವಿದ್ಯೆಯನ್ನು ನಿನಗೆ ಸಂತಸದಿಂದ ಬೋಧಿಸುವೆ. ಸಂಪ್ರದಾಯವು ಯೋಗ್ಯತೆಯ ಮುಂದೆ ಬಹುಕಾಲ ನಿಲ್ಲಲರಿಯದು. ಒಳಗಿಹ ಬೆಳಕು ಹೊಳೆಯ ತೊಡಗಿದರೆ ಹೊರಗಿರುವ ಕತ್ತಲೆಯು ತಡೆಯಲಾರದು ಅದನು"[10] ಎಂದು ಹೇಳುವ ಮೂಲಕ ಕರ್ಣನ ಸಾಮರ್ಥ್ಯಕ್ಕೆ ಬೆಲೆ ಕೊಡುತ್ತಾ ವಿನಃ ಅವನ ಕುಲದ ವಿಚಾರಕ್ಕಲ್ಲ ಎಂಬುದು ಗಮನಾರ್ಹವಾದುದು ಪರಶುರಾಮ ಮತ್ತು ಭೀಷ್ಮರ

ನಡುವಿನ ಸಂಭಾಷಣೆಯು ಕೂಡ ಕರ್ಣನ ವೀರ ತನ ಮತ್ತು ವ್ಯಕ್ತಿತ್ವವನ್ನೇ ವ್ಯಕ್ತಪಡಿಸುವುದಾಗಿದೆ ಅಲಕ್ಷಿತವಾದ ವರ್ಗವು ಕೂಡ ಸಾಮಾಜಿಕ ಮನ್ನಣೆ ಪಡೆಯಲು ಮುಖ್ಯವಾದದ್ದು ಸಾಮರ್ಥ್ಯವೇ ಹೊರತು ಕುಲವಲ್ಲ ಎಂಬುದು ಇಲ್ಲಿ ಸ್ಪಷ್ಟವಾಗಿದೆ

ರಾಮಾಯಣದ ವಸ್ತುವನ್ನೊಳಗೊಂಡ ಶೂದ್ರ ತಪಸ್ವಿ ನಾಟಕ ಸಮಾಜದ ಅಲಕ್ಷಿತ ಸಮುದಾಯದ ಯುವಕ ಶಂಬೂಕನ ವಿಚಾರವನ್ನು ತೆರೆದಿಡುತ್ತದೆ. ಪರಂಪರೆಯ ವಿರುದ್ಧವಾಗಿ ಸಾಮಾನ್ಯರಲ್ಲು ಶ್ರೀಸಾಮಾನ್ಯರನ್ನು ಕಾಣುವಂತಹ ಕುವೆಂಪು ಅವರ ದೃಷ್ಟಿಕೋನ ಮನೋಜ್ಞವಾದುದು. ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆಯ ವಿರುದ್ಧ ಜನರನ್ನು ಜಾಗೃತಗೊಳಿಸುವುದು ಅವರ ಕೃತಿಗಳ ವಿಶೇಷ. ಮೂಲ ರಾಮಾಯಣದಲ್ಲಿ, ರಾಮನ ರಾಜ್ಯದಲ್ಲಿ ಶಂಬೂಕನೆಂಬ ಶೂದ್ರನು ತಪಸ್ಸನ್ನು ಮಾಡಿದ್ದರಿಂದಾಗಿ ಬ್ರಾಹ್ಮಣನ ಮಗನೊಬ್ಬ ಮರಣ ಹೊಂದುತ್ತಾನೆ ಎಂಬುದು ನಂಬಲರ್ಹವಲ್ಲದ ವಿಚಾರವಾಗಿದೆ. ಆಗ ಆ ಬ್ರಾಹ್ಮಣ ನ್ಯಾಯಕ್ಕಾಗಿ ರಾಮನ ಮೊರೆ ಹೋಗುತ್ತಾನೆ. ಇದನ್ನು ಕೇಳಿ ರಾಮನು ಶಂಬೂಕನನ್ನು ವಧಿಸುತ್ತಾನೆ. ಆನಂತರ ಆ ಬ್ರಾಹ್ಮಣನ ಮಗನ ಜೀವ ವಾಪಸ್ಸು ಬರುತ್ತದೆ. ಆದರೆ ಕುವೆಂಪು ಅವರ ಶೂದ್ರ ತಪಸ್ವಿಯಲ್ಲಿ ಬ್ರಾಹ್ಮಣನ ಆರೋಪಕ್ಕೆ ಶ್ರೀರಾಮನು "ಈ ವರ್ಣಗವಾರ್ಧಂಗೆ, ಈ ಶಾಸ್ತ್ರ ಮೂರ್ಖಂಗೆಂತೊ ಬುದ್ಧಿಗಲಿಪೆನ್?"[11] ಎಂದು ಹೇಳುತ್ತ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಮಾನವಾದ ಅವಕಾಶಗಳಿರಬೇಕೆಂಬುದು ಮತ್ತು ಎಲ್ಲವೂ ಮೇಲ್ವರ್ಗದವರಿಗೆ ಮಾತ್ರವೇ ಮೀಸಲಾಗಿರದೆ ಎಲ್ಲರಿಗೂ ತಲುಪುವಂತಾಗಬೇಕೆಂಬುದು ಕುವೆಂಪು ಅವರ ಆಶಯವಾಗಿದೆ.

ಕುವೆಂಪು ಅವರ ಈ ನಾಟಕಗಳಲ್ಲಿ ಬರುವ ಜಲಗಾರ, ಶಂಭೂಕ, ಏಕಲವ್ಯ, ಕರ್ಣ ಮುಂತಾದ ಪಾತ್ರಗಳು ಶೋಷಿತ ಸಮುದಾಯವನ್ನು ಪ್ರತಿನಿಧಿಸುತ್ತವೆ ಮತ್ತು ಸಮಸ್ಯೆಗಳ ಪ್ರತಿನಿಧಿಯಾಗಿ ನಿಂತು ಅದನ್ನು ಹೋಗಲಾಡಿಸುವ ಕೆಲಸ ಮಾಡುತ್ತವೆ. ಕುವೆಂಪು ಅವರ ಸರ್ವಸಮಾನತೆಯ ಪರಕಲ್ಪನೆ ಪ್ರತಿಯೊಂದು ನಾಟಕಗಳುದ್ದಕ್ಕೂ ತಿಳಿಯುತ್ತದೆ. "ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?"[12] ಎಂಬ ಕವಿತೆಯಂತೆಯೇ ಅವರ ಸಂಪೂರ್ಣ ಆಲೋಚನ ಲಹರಿ ಪ್ರತಿ ಬರಹದಲ್ಲೂ ಮೇಳೈಸಿದೆ. ಪ್ರತಿಯೋಂದು ಪಾತ್ರವನ್ನು ಚಿಕಿತ್ಸಕ ಬುದ್ದಿಯಿಂದ ನೋಡುವುದು ಕುವೆಂಪು ಅವರ ವಿಶೇಷತೆ. ಬರಹ ಮತ್ತು

ಬದುಕು ಎರಡರಲ್ಲಿಯೂ ಅವರು ನೇರವಾಗಿ ನಡೆದುಕೊಂಡರು ಎಂಬುದಕ್ಕೆ ಅವರ ಬದುಕೇ ಒಂದು ನಿದರ್ಶನ. ಅವರ ಮಕ್ಕಳಿಗೂ ಯಾವುದೇ ಗೊಡ್ಡು ಸಂಪ್ರದಾಯವನ್ನು ಪರಿಚಯಿಸದೇ ವಿಜ್ಞಾನಯುಗಕ್ಕೆ ಅನುಗುಣವಾಗಿ ಆಲೋಚಿಸಲು ಅವಕಾಶ ಮಾಡಿಕೊಟ್ಟರು ಎಲ್ಲಕ್ಕಿಂತ ಮುಖ್ಯವಾಗಿ ಶಿಕ್ಷಣವೆಂಬ ಸಂಜೀವಿನಿಯನ್ನು ನೀಡಿ ಅವರೆಲ್ಲರನ್ನು ಮೌಢ್ಯದ ವಿಷದಿಂದ ಪಾರು ಮಾಡಿದರೆಂದೇ ವ್ಯಾಖ್ಯಾನಿಸಬಹುದು.

**ಕೊನೆ ಟಿಪ್ಪಣಿ :**

1. ಕುವೆಂಪು : ವಿಚಾರ ಕ್ರಾಂತಿಗೆ ಆಹ್ವಾನ ಪು. ಸಂ 109
2. ಕುವೆಂಪು ಸಮಗ್ರ ನಾಟಕ : ಪು. ಸಂ 6
3. ಅದೇ ಪು. ಸಂ 6
4. ಅದೇ ಪು. ಸಂ 9
5. ಅದೇ ಪು. ಸಂ 14
6. ಅದೇ ಪು. ಸಂ 62
7. ಅದೇ ಪು. ಸಂ 112
8. ಅದೇ ಪು. ಸಂ 118
9. ಅದೇ ಪು. ಸಂ 277
10. ಪೂರ್ವೋಕ್ತ 2 : ಪು. ಸಂ 17
11. ಅದೇ ಪು. ಸಂ 213
12. ಕುವೆಂಪು : ಕೋಗಿಲೆ ಮತ್ತು ಸೋವಿಯಟ್ ರಷ್ಯ ಪು.ಸಂ 21

**ಪರಾಮರ್ಶನ ಗ್ರಂಥಗಳು :**

1. ಕುವೆಂಪು ಸಮಗ್ರ ನಾಟಕ : ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ), ಕುಪ್ಪಳಿ, 2017
2. ಕುವೆಂಪು : ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2010
3. ಕುವೆಂಪು : ಕೋಗಿಲೆ ಮತ್ತು ಸೋವಿಯಟ್ ರಷ್ಯ, ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, 1944

4. ಡಾ. ಎಚ್ ತಿಪ್ಪೇರುದ್ರಸ್ವಾಮಿ : ಕಲ್ಯಾಣ ಕ್ರಾಂತಿ : ಹಿಂದು–ಮುಂದು

5. ಡಾ. ಎಚ್ ತಿಪ್ಪೇರುದ್ರಸ್ವಾಮಿ : ಕುವೆಂಪು ಅವರ ನಾಟಕಗಳು, ಗೀತಾ ಬುಕ್ ಹೌಸ್, ಮೈಸೂರು, 1969

6. ಡಾ. ಎಚ್ ತಿಪ್ಪೇರುದ್ರಸ್ವಾಮಿ : ಕುವೆಂಪು ಮತ್ತು ವೈಚಾರಿಕತೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ ವಿ, ಮೈಸೂರು, 1983

7. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, 2014

8. ಡಾ. ಎಚ್ ತಿಪ್ಪೇರುದ್ರಸ್ವಾಮಿ : ಕನ್ನಡ ವಿಮರ್ಶೆ ಕವಲುದಾರಿಯಲ್ಲಿ : ಬೆಂಗಳೂರು ವಿ ವಿ, ಬೆಂಗಳೂರು, 1978

**ಡಾ. ಮೀನಾಕ್ಷಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಎನ್.ಎಸ್.ಬಿ ಅಕಾಡೆಮಿ
ಬೆಂಗಳೂರು : 560099
rmeenakshi92@gmail.com

# ಪ್ರತಿಸ್ಪಂದ – ಕೃತಿಯ ಓದು...
– ಡಾ. ರವಿಶಂಕರ್ ಎ.ಕೆ

## ಸ್ತ್ರೀ ಅಸ್ಮಿತೆ : ವಿಭಿನ್ನ ನೆಲೆಗಳು
ಲೇಖಕರು : ಡಾ. ಚೇತನಾ ಹೆಗಡೆ




ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಕುರಿತ ಪ್ರತ್ಯೇಕ ಅಧ್ಯಯನವು ಪ್ರಾರಂಭವಾದುದೇ ಸ್ವಾತಂತ್ರ್ಯದ ಹುಡುಕಾಟಕ್ಕಾಗಿ, ಅಸ್ಮಿತೆಯ ಸಾಕ್ಷಿಪ್ರಜ್ಞೆಗಾಗಿ ಎನ್ನಬಹುದು. ಮಹಿಳೆಯನ್ನು ಪ್ರತ್ಯೇಕ ನೆಲೆಯಲ್ಲಿ ಅಧ್ಯಯನಮಾಡುವಾಗ ಸೃಷ್ಟಿಯಾದ 'ಅಸ್ಮಿತೆ' ಎಂಬ ಶಬ್ದವು ಮಹಿಳಾ ಅಧ್ಯಯನಕ್ಕೆ ಸೂಕ್ತ ಶಕ್ತಿ ಹಾಗೂ ವೇದಿಕೆಯನ್ನು ತಂದಿತು. ಈ ದೃಷ್ಟಿಯಲ್ಲಿ ಮಹಿಳಾ ಅಸ್ಮಿತೆ ಎಂಬುದನ್ನೇ ಕೇಂದ್ರವನ್ನಾಗಿಸಿಕೊಂಡು ಅದರ ಸುತ್ತಣ ನೆಲೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಸಂಶೋಧನ ಕೃತಿ ಇದು.

ಕೃತಿಯು ಪರಿಪೂರ್ಣವಾಗಿ ಅಸ್ಮಿತೆಯ ಹುಡುಕಾಟದಲ್ಲಿ ತೊಡಗುತ್ತದೆ. ಕಥೆ, ಕಾದಂಬರಿ, ಕವಿತೆಗಳನ್ನು ಆಯಾ ಸಂದರ್ಭದ ಅಧ್ಯಯನ ಸಾಮಗ್ರಿಗಳನ್ನಾಗಿಸಿಕೊಂಡು ತನ್ನ ಸಂಶೋಧನೆಗೆ ಗುರ್ತಿಸಿಕೊಂಡಿರುವ ಕೇಂದ್ರಬಿಂದುವನ್ನು ತಲುಪುವ ಮಾರ್ಗಗಳನ್ನು ಇಲ್ಲಿ ಅರ್ಥಪೂರ್ಣವಾಗಿ ಗ್ರಹಿಸಲಾಗಿದೆ.

ಯಾವುದೇ ಸಂಶೋಧನೆಗೆ ತನ್ನ ಆಯ್ಕೆಯ ವಿಷಯವು ರೂಪಿಸಿಕೊಳ್ಳುವ ಸಮಸ್ಯೆಗಳು ಮುಖ್ಯವಾಗುತ್ತವೆ. ಅಸ್ಮಿತೆಯೆಂಬ ಅರಿವು ವಿಕಾಸವಾದ ಬಗೆ, ಹೆಣ್ಣಿನ ತಾಯ್ತನದ ಪರಿಧಿಯಲ್ಲಿ ಪುರುಷ ಹಾಗೂ ಪ್ರಕೃತಿಯ ಮುಖಾಮುಖಿಯಲ್ಲಿ

ಗುರ್ತಿಸಿಕೊಳ್ಳುವ ಅಸ್ಮಿತೆಗಳು, ಸ್ತ್ರೀ ಅಸ್ತಿತ್ವದ ಮೂರು ವಿಭಿನ್ನ ನೆಲೆಗಳಲ್ಲಿ ಕಂಡುಬರುವ ಮಹಿಳಾ ಪರಿಧಿಗಳು ಹಾಗೂ ದಾಟುವ, ಎದುರಿಸುವ ಸಮಸ್ಯೆಗಳ ಕುರಿತು ಮಹಿಳೆಯು ತನ್ನೊಳಗಿನ ಬಿಂಬಗಳನ್ನು ರೂಪಿಸಿಕೊಳ್ಳುವ ಬಗೆಗಳು, ವರ್ತಮಾನದಲ್ಲಿ ಅಸ್ಮಿತೆಯ ಕುರಿತು ಕಂಡು ಬಂದಿರುವ ಹಲವು ಬದಲಾವಣೆಗಳ ಸವಾಲು ಮತ್ತು ಸಾಧ್ಯತೆಗಳ ಚಿಂತನೆ ಮತ್ತು ಹುಡುಕಾಟವನ್ನು ಆಲೋಚಿಸಿರುವುದು ಹೊಸತನವಾಗಿದೆ.

ಈ ಕೃತಿಯು ಹಲವು ಪರಿಕಲ್ಪನೆಗಳನ್ನು ಪರಿಚಯಿಸುತ್ತದೆ. 'ಮಹಿಳಾ ಅಸ್ಮಿತೆ'ಯ ದಿಕ್ಕಿನಲ್ಲಿ ಕಳಚಿಕೊಂಡಿರುವ ತನ್ನೊಡಲ ನೈತಿಕತೆಯನ್ನು ಇಲ್ಲಿ 'ಇರುವಂತಿಕೆಯ' ಜೀವಾಳಗಳಾಗಿ ಬಳಸಿ ಅಧ್ಯಯನಮಾಡಲಾಗಿದೆ. ವಸಾಹತುಶಾಹಿತನವು ರೂಪಿಸಿದ ವಿಶ್ವಪಥ್ಯಗಳ ಓದು ಭಾರತೀಯ ಸಂಸ್ಕೃತಿಯಲ್ಲಿ ತನ್ನೊಳಗಿನ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಿತು. ಅದುಮಿಟ್ಟ ಅಸ್ಮಿತೆಯ ಗುರುತುಗಳಿಗೆ ಪುರುಷ ಪ್ರಧಾನತೆಯೇ ಮೂಲ ಕಾರಣವಾದರೂ, ಬಿಗಿಯಲ್ಪಟ್ಟ ಬಂಧನಗಳಲ್ಲಿ ಮಹಿಳೆಯೂ ಕೂಡ ಪಾತ್ರದಾರಳಾದಳು. ಈ ಬಿಡುಗಡೆಗಾಗಿ ಹೆಣ್ಣು, ಮುಟ್ಟು, ವಿವಾಹ, ತಾಯ್ತನ, ವೈದವ್ಯ, ದೇಹ, ಮನಸ್ಸು, ಲೈಂಗಿಕ ತುಡಿತ, ಕುಟುಂಬ ಈ ಮುಖ್ಯ ಪಲ್ಲಟಗಳ ನಡುವೆ ಮಹಿಳಾ ಆಲೋಚನೆಗಳು ಬೆಸೆಯುವ ಹಲವು ಅರ್ಥಗಳನ್ನು ಕನ್ನಡ ಗ್ರಹಿಕೆಗಳ ಮೂಲಕ ಈ ಕೃತಿಯು ಚರ್ಚಿಸುತ್ತದೆ.

ಅಸ್ಮಿತೆಯನ್ನು ಕೃತಿಯ ಮೂಲಕ ಗುರ್ತಿಸುವುದಾದರೆ "ಅವಳ ಅಸ್ಮಿತೆ ಎಂಬುದು ಕಾಲ ಮತ್ತು ದೇಶಕ್ಕೆ ಅತೀತವಾಗಿದ್ದು, ಪ್ರತಿ ಸ್ತ್ರೀಯು ತನ್ನ ಬದುಕಿನಲ್ಲಿ ಕಾಣುವ ಮತ್ತು ಕಟ್ಟುವ ಆಯಾಮವಾಗಿದೆ. ಅಸ್ಮಿತೆ ಎಂಬುದು ಮೂಲಭೂತವಾದ ತಾತ್ವಿಕ ಪ್ರಶ್ನೆಯೂ ಹಾಗೂ ಸ್ತ್ರೀ ಅಸ್ತಿತ್ವದ ಶೋಧವೂ ಹೌದು." ಹೀಗೆ ಕೃತಿಯ ಉದ್ದಕ್ಕೂ ಅಸ್ಮಿತೆ ಎಂಬ ಶಬ್ದವು 'ಸ್ತ್ರೀ' ಹಿನ್ನಲೆಯಲ್ಲಿ ನೂರಾರು ಅರ್ಥಗಳನ್ನು ಧ್ವನಿಸುತ್ತದೆ. ಈ ಕೃತಿಯನ್ನು ವಿಮರ್ಶಾ ಕೃತಿಯಾಗಿ ಗ್ರಹಿಸುವುದು ಕಷ್ಟ. ಇದೊಂದು ಸಂಶೋಧನ ಕೃತಿಯಾಗಿ, ಒಂದು ವಿಷಯದ ಕುರಿತು ಸುದೀರ್ಘವಾದ ಹುಡುಕಾಟ, ಚಿಂತನೆ ಹಾಗೂ ವ್ಯಾಖ್ಯಾನಗಳನ್ನು ರೂಪಿಸಿರುವ ಅಧ್ಯಯನದ ಫಲಿತವು ಈ ಅಧ್ಯಯನದಲ್ಲಿ ಕಂಡುಬರುತ್ತದೆ. ಈ ಕೃತಿಗೆ ಕನ್ನಡದ ಶ್ರೇಷ್ಠ ಚಿಂತಕರಾದ ಗೀತಾ ವಸಂತ ಅವರ ಮಾರ್ಗದರ್ಶನ ಹಾಗೂ ಮುನ್ನುಡಿ ಬರೆಹವಿರುವುದು ಕೃತಿಗೆ ಸೂಕ್ತ ಗೌರವ ತಂದಿದೆ.

**ಸ್ತ್ರೀ ಅಸ್ಮಿತೆ : ವಿಭಿನ್ನ ನೆಲೆಗಳು**
**ಲೇಖಕರು : ಡಾ. ಚೇತನಾ ಹೆಗಡೆ**
**ಅವ್ಯಕ್ತ ಪ್ರಕಾಶನ**
**ಬೆಲೆ : 450**

ಸಂಪುಟ - 9, ಸಂಚಿಕೆ- 2

VOLUME: 09, ISSUE: 02



ಕಾವ್ಯ ಗುರು ಎಚ್.ಎಸ್ ವೆಂಕಟೇಶಮೂರ್ತಿ ಅವರಿಗೆ ಭಾವ ನಮನ

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

**LITERATURE, CULTURE - RESEARCH QUARTERLY**

**PEER - REVIEWED JOURNAL**

**ISSN: 2320-9941**

HTTPS://PRATHISPANDHA.WORDPRESS.COM/



ಕಾವ್ಯ ಗುರು ಎಚ್.ಎಸ್ ವೆಂಕಟೇಶಮೂರ್ತಿ ಅವರಿಗೆ ಭಾವ ನಮನ

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
**LITERATURE, CULTURE - RESEARCH QUARTERLY**
**PEER - REVIEWED JOURNAL**
**ISSN: 2320-9941**

HTTPS://PRATHISPANDHA.WORDPRESS.COM/

ಪ್ರತಿಸ್ಪಂದ
ಕೊಡು ಕೊಳ್ಳುವಿಕೆಯ ಸಂಕರ
PRATHISPANDA
An Exchange of Creative Impulse

ಸಂಪುಟ - 9, ಸಂಚಿಕೆ- 2
PEER - REVIEWED JOURNAL
ISSN: 2320-9941
VOLUME: 09, ISSUE: 02

# ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

# PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

Photo credit: thebookerprizes.com

ಕನ್ನಡದ ಲೇಖಕಿ ಎಸ್.ಕೆ. ಬಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳು(೧೨ ಕತೆಗಳು) ಕೃತಿಯನ್ನು ದೀಪಾ ಭಸ್ತಿ ಅವರು Heart Lamp ಎಂದು ಅನುವಾದಿಸಿದ ಕೃತಿಗೆ ೨೦೨೫ರ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ದೊರೆತಿದೆ.



HTTPS://PRATHISPANDHA.WORDPRESS.COM/